بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 04

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

26 ಜನವರಿ 2023, 26 ಸುಲಹ್ 1402 ಹಿಜರಿ ಶಮ್‌ಸಿ,
03 ರಜಬ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّ شَرَّ الدَّوَآبِّ
عِنْدَ اللّٰهِ الصُّمُّ الْبُكْمُ
الَّذِيْنَ لَا يَعْقِلُوْنَ۝

**(ಆಲ್-ಅನ್‌ಫಾಲ್: 03)**

**ಅಂದರೆ: ನಿಶ್ಚಯವಾಗಿಯೂ ಚಿಂತನ ಮಾಡದ ಕಿವುಡರು ಮತ್ತು ಮೂಕರೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ನಿಕೃಷ್ಟ ಜೀವಿಗಳು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಪ್ರಾಣಿಗಳಿಗೆ ನೀರು ಕುಡಿಸುವುದರ ಪ್ರತಿಫಲ

**(2363)** ಹಝ್ರತ್ ಅಬೂಹುರೈರಾ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನುಡಿದರು: ಒಮ್ಮೆ ಒಬ್ಬ ವ್ಯಕ್ತಿಯು (ದಾರಿಯಲ್ಲಿ) ನಡೆದುಕೊಂಡು ಹೋಗುತ್ತಿದ್ದಾಗ ಅವನಿಗೆ ತುಂಬಾ ಬಾಯಾರಿಕೆಯಾಯಿತು. ಅವನು ಬಾವಿಗೆ ಇಳಿದು ನೀರು ಕುಡಿದನು. ತದನಂತರ, ಅವನು ಹೊರಗೆ ಬಂದಾಗ, ಬಾಯಾರಿಕೆಯಿಂದ ಉಸಿರುಕಟ್ಟಿಕೊಂಡು ಕೆಸರನ್ನು ನೆಕ್ಕುತ್ತಿದ್ದ ನಾಯಿಯುನ್ನು ನೋಡಿದನು, ಆದ್ದರಿಂದ ಆ ವ್ಯಕ್ತಿ (ಅವನ ಮನಸ್ಸಿನಲ್ಲಿ) ನನಗೆ ಸಂಭವಿಸಿದ ಅದೇ ನೋವಿನಿಂದ ಈ ಪ್ರಾಣಿಯು ಸಹ ಬಳಲುತ್ತಿದೆ ಎಂದುಕೊಂಡು ಅವನು ತನ್ನ ಕಾಲುಚೀಲದಲ್ಲಿ ನೀರನ್ನು ತುಂಬಿಕೊಂಡು ಅದನ್ನು ತನ್ನ ಬಾಯಿಯಲ್ಲಿ ಹಿಡಿದುಕೊಂಡು ಮೇಲಕ್ಕೆ ಹತ್ತಿ ನಾಯಿಗೆ ನೀರನ್ನು ಕುಡಿಸಿದನು. ಸರ್ವಶಕ್ತನಾದ ಅಲ್ಲಾಹನು ಅವನ ಈ ಕೆಲಸವನ್ನು ಮೆಚ್ಚಿ ಅವನ ಪಾಪಗಳನ್ನು ಕ್ಷಮಿಸಿದನು. ಸಹಚರರು ಕೇಳಿದರು: ಯಾ ರಸೂಲಲ್ಲಾಹ್! ಪ್ರಾಣಿಗಳಿಗೆ ನೀರು ಕುಡಿಸಿದರೂ ನಮಗೆ ಪ್ರತಿಫಲ ಸಿಗುತ್ತದೆಯೇ? ಅದಕ್ಕೆ ಪ್ರವಾದಿ(ಸ) ಹೇಳಿದರು: ತಾಜಾವಾಗಿರುವ ಪ್ರತಿಯೊಂದು ಸ್ಥಳಕ್ಕೂ ಒಂದು ಪ್ರತಿಫಲವಿದೆ (ಅಂದರೆ ಪ್ರತಿ ಜೀವಿಯನ್ನು ಚೆನ್ನಾಗಿ ಪರಿಗಣಿಸಿದ್ದಕ್ಕಾಗಿ ಪ್ರತಿಫಲವಿದೆ).

**(ಸಹೀಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಮುಸಾಖಾ, 2008 ಖಾದಿಯಾನ್ ಪ್ರಕಟಿತ)**

**ನನ್ನ ಪ್ರಕಾರ ಅಹಂಕಾರಿಗಿಂತ ದೊಡ್ಡ ವಿಗ್ರಹಾರಾಧಕ ಹಾಗೂ ದುಷ್ಟ ಯಾರು ಇಲ್ಲ ಹೆಚ್ಚು, ಅಹಂಕಾರಿ ಯಾವ ಭಗವಂತನನ್ನು ಆರಾಧಿಸುವುದಿಲ್ಲ ಬದಲಿಗೆ ಅವನು ತನ್ನನ್ನು ತಾನು ಆರಾದಿಸುತ್ತಾನೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಆಡಂಬರವನ್ನು ತಪ್ಪಿಸುವುದು

ಅತಿಥಿಗಳ ಅಗತ್ಯಗಳಿಗಾಗಿ ಮನೆಯನ್ನು ನಿರ್ಮಿಸುವ ಅಗತ್ಯವಿದ್ದಾಗ, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಇಟ್ಟಿಗೆ ಮತ್ತು ಕಲ್ಲುಗಳ ಮೇಲೆ ಹಣವನ್ನು ಖರ್ಚು ಮಾಡುವುದು ವ್ಯರ್ಥವೆಂದು ಪದೇ ಪದೇ ಒತ್ತಿ ಹೇಳಿದರು. ಸ್ವಲ್ಪ ದಿನ ಬದುಕಲು ಎಷ್ಟು ಸಾಧ್ಯವೋ ಅಷ್ಟು ಕೆಲಸ ಮಾಡಿ. ಬಡಗಿಯು ಹಲಗೆಗಳನ್ನು ತುರಿಯುವ ಮಣೆಗಳಿಂದ ಸ್ವಚ್ಛಗೊಳಿಸುತ್ತಿದ್ದನು. ಹುಝೂರ್(ಅ) ರವರು ಅವನನ್ನು ತಡೆದು ಹೇಳಿದರು:

"ಇದು ಕೇವಲ ಆಡಂಬರವಾಗಿದೆ ಮತ್ತು ಅನ್ಯಾಯವಾಗಿ ವಿಳಂಬವಾಗಿದೆ. ಸಂಕ್ಷಿಪ್ತವಾಗಿ ಕೆಲಸ ಮಾಡಿ. ಅವರು(ಅ) ಹೇಳಿದರು: ಸರ್ವಶಕ್ತನಾದ ಅಲ್ಲಾಹನಿಗೆ ತಿಳಿದಿದೆ, ನಮಗೆ ಯಾವ ಮನೆಯವರೊಂದಿಗೆ ಪ್ರೀತಿ ಇಲ್ಲ ಎಂದು. ನಾವು ನಮ್ಮ ಮನೆಗಳನ್ನು ನಮ್ಮ ಮತ್ತು ನಮ್ಮ ಸ್ನೇಹಿತರೊಂದಿಗೆ ಸಹಸ್ವಾಮ್ಯ ಎಂದು ತಿಳಿಯುತ್ತೇವೆ ಮತ್ತು ನಾವು ಕೆಲವು ದಿನಗಳನ್ನು ಒಟ್ಟಿಗೆ ಕಳೆಯಲು ಬಯಸುತ್ತೇವೆ. ಮತ್ತೆ ಹೇಳಿದರು ನಾಲ್ಕು ದಿಕ್ಕುಗಳಲ್ಲಿ ಸಂಬಂಧಿಕರಿರುವ ಮನೆಗಳಿರುವ ಜಾಗದಲ್ಲಿ ನಮ್ಮ ಮನೆ ಇರಬೇಕು ಮತ್ತು ನಮ್ಮ ಮನೆ ಎಲ್ಲ ಮನೆಯ ಮಧ್ಯದಲ್ಲಿರಬೇಕು ಮತ್ತು ಎಲ್ಲರ ಮನೆಯ ಕಡೆಗೆ ನಮ್ಮ ಮನೆಯ ಒಂದೊಂದು ಕಿಡಕಿ ಇರಬೇಕು ಎಲ್ಲಾ ಸಮಯದಲ್ಲೂ ಎಲ್ಲರೊಂದಿಗೆ ಸಂಪರ್ಕವಿರಬೇಕು."

### ಸೇವೆ ಸಲ್ಲಿಸುವುದು

ಒಮ್ಮೆ ಹೊಸ ಮನೆಯಲ್ಲಿ ಮೌಲ್ವಿ ಅಬ್ದುಲ್ ಕರೀಂ ಸಾಹಿಬ್ ಮಲಗಿದ್ದ ಮಂಚವಿತ್ತು. ಹುಝೂರ್(ಅ) ರವರು ಅಲ್ಲಿ ನಡೆಯುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ಎಚ್ಚರವಾದಾಗ ಹುಝೂರ್(ಅ) ರವರು ಆ ಮಂಚದ ಕೆಳಗೆ ನೆಲದ ಮೇಲೆ ಮಲಗಿರುವುದು ಕಂಡಿತು. ಮೌಲ್ವಿ ಸಾಹಿಬರು ವಿನಯದಿಂದ ಎದ್ದು ನಿಂತರು. ಹುಝೂರ್(ಅ) ಅವರು ಏಕೆ ಎದ್ದು ನಿಂತಿರಿ? ಎಂದು ಬಹಳ ಪ್ರೀತಿಯಿಂದ ಕೇಳಿದರು. ಅದಕ್ಕೆ ಅವರು ಶಿಷ್ಟಾಚಾರಕ್ಕಾಗಿ ಎಂದು ಹೇಳಿದರು. ಇದರ ಬಗ್ಗೆ ಹುಝೂರ್ ಅಲೈಹಿಸ್ಸಲಾಮ್ ಹೇಳಿದರು:

"ನಾನು ನಿಮಗೆ ಕಾವಲು ನೀಡುತ್ತಿದ್ದೆ. ಹುಡುಗರು ಗಲಾಟೆ ಮಾಡುತ್ತಿದ್ದರು ಮತ್ತು ನಿಮ್ಮ ನಿದ್ರೆಗೆ ಭಂಗ ತರುತ್ತಿದ್ದರು ಅದಕ್ಕೆ ನಾನು ಅವರನ್ನು ತಡೆಯುತ್ತಿದ್ದೆ."

### ವಿನೀತಭಾವ

ಜನರು ಹುಝೂರ್ ಅಲೈಹಿಸ್ಸಲಾಮ್ ಅವರೊಂದಿಗೆ ಮಾತನಾಡಲು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದರು ಮತ್ತು ಎಲ್ಲರೂ ಯಾವುದೇ ಅಡೆತಡೆಯಿಲ್ಲದೆ ಹುಝೂರ್ ಅಲೈಹಿಸ್ಸಲಾಮ್ ಅವರೊಂದಿಗೆ ಮಾತನಾಡಬಹುದಾಗಿತ್ತು. ಈ ಬಗ್ಗೆ ಹುಝೂರ್ ಅಲೈಹಿಸ್ಸಲಾಮ್ ಹೇಳಿದರು:

"ನಾನು ತುಂಬಾ ಉಗ್ರ ಸ್ವಭಾವದವನಾಗಿ ಅಥವಾ ಭಯಂಕರವಾಗಿ ಕುಳಿತುಕೊಳ್ಳುವುದು ಜನರು ಮೃಗಕ್ಕೆ ಭಯಪಡುವಂತೆ ನನಗೆ ಭಯಪಡಬೇಕು ಎಂಬುದು ನನ್ನ ಧರ್ಮವಲ್ಲ. ಮತ್ತು ನಾನು ವಿಗ್ರಹವಾಗುವುದನ್ನು ಬಲವಾಗಿ ದ್ವೇಷಿಸುತ್ತೇನೆ. ನಾನು ವಿಗ್ರಹಾರಾಧನೆಯನ್ನು ತಿರಸ್ಕರಿಸಲು ಬಂದಿದ್ದೇನೆ, ನಾನೇ ಸ್ವತಃ ವಿಗ್ರಹವಾಗಲು ಮತ್ತು ಜನರು ನನ್ನನ್ನು ಪೂಜಿಸಲಿ ಎಂದು ಬಂದಿಲ್ಲ. ನಾನು ಇತರರಿಗಿಂತ ನನ್ನ ಆತ್ಮಕ್ಕೆ ಆದ್ಯತೆ ನೀಡುವುದಿಲ್ಲ ಎಂದು ಸರ್ವಶಕ್ತನಾದ ಅಲ್ಲಾಹನು ಚೆನ್ನಾಗಿ ತಿಳಿದಿದ್ದಾನೆ. ನನ್ನ ಪ್ರಕಾರ ಅಹಂಕಾರಿಗಿಂತ ದೊಡ್ಡ ವಿಗ್ರಹಾರಾಧಕನು ಮತ್ತು ದುಷ್ಟ ಯಾರು ಇಲ್ಲ ಹೆಚ್ಚು, ಅಹಂಕಾರಿ ಯಾವ ಭಗವಂತನನ್ನು ಆರಾಧಿಸುವುದಿಲ್ಲ ಬದಲಿಗೆ ಅವನು ತನ್ನನ್ನು ತಾನು ಆರಾದಿಸುತ್ತಾನೆ.

**(ಮಲ್‌ಫೂಝಾತ್, ಸಂಪುಟ-1, ಪುಟ-421, ಪ್ರಕಟಿತ ಖಾದಿಯಾನ್ 2018)**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು "ಹಕಮ್" ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು "ಮುಹೈಮಿನ್" ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ.

**(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)**

# ಖುತ್‌ಬ ಜುಮುಅ

ನಮ್ಮ ಜಮಾಅತಿನವರು ತಮ್ಮ ವಿಶ್ವಾಸ ವರ್ಧಿಸುವ ಆವಶ್ಯಕತೆಯಿದೆ. ಅವರಲ್ಲಿ ಅಲ್ಲಾಹನ ಮೇಲೆ ನಿಜವಾದ ದೃಢವಿಶ್ವಾಸ ಮತ್ತು ಪರಿಜ್ಞಾನ ಉಂಟಾಗಬೇಕು. ಸತ್ಕರ್ಮಗಳಲ್ಲಿ ಆಲಸ್ಯ ಮತ್ತು ಸೋಮಾರಿತನ ಇರಬಾರದು. ಏಕೆಂದರೆ, ಸೋಮಾರಿತನವಿದ್ದರೆ ತಹಜ್ಜುದ್ ನಮಾಝ್‌ಗಾಗಿ ಎದ್ದೇಳುವುದು ಬಿಡಿ, ಐದು ಹೊತ್ತಿನ ನಮಾಝಿಗಾಗಿ ವುಝೂ ಮಾಡುವುದೇ ಕಷ್ಟವಾಗಿ ಅನುಭವವಾಗುತ್ತದೆ. ನಿಮ್ಮೊಳಗೆ ಸತ್ಕರ್ಮಗಳನ್ನು ಮಾಡಲು ಶಕ್ತಿ ಉಂಟಾಗದಿದ್ದರೆ, ಸತ್ಕರ್ಮಗಳಲ್ಲಿ ಮುಂದಾಗಲು ಉತ್ಸಾಹವಿಲ್ಲದಿದ್ದರೆ, ಒಳಿತುಗಳನ್ನು ಮಾಡಲು ಆವೇಶವಿಲ್ಲದಿದ್ದರೆ ನಮ್ಮ ಜೊತೆಗೆ ಸಂಬಂಧ ಸ್ಥಾಪಿಸುವುದು ವ್ಯರ್ಥ. (ಹಝ್ರತ್ ಮಸೀಹ್ ಮೌಊದ್(ಅ))

ಯಾವುದಾದರೂ ವಿಪತ್ತು ಬರುವಾಗ ದೇವನಿಗೆ ಭಯಗೊಳ್ಳುವ ಹಾಗೆಯೇ ನೆಮ್ಮದಿಯ ಸ್ಥಿತಿಯಲ್ಲೂ ದೇವನಿಗೆ ಭಯಗೊಳ್ಳುವವನ ಮೇಲೆ ಅಲ್ಲಾಹನ ಕಾರುಣ್ಯವಿರುತ್ತದೆ. ಯಾವನು ನೆಮ್ಮದಿಯ ಸಮಯದಲ್ಲಿ ಅಲ್ಲಾಹನನ್ನು ಮರೆತು ಬಿಡುವುದಿಲ್ಲವೋ ಅವನನ್ನು ಅಲ್ಲಾಹನು ವಿಪತ್ತಿನ ಸಮಯದಲ್ಲಿ ಕಡೆಗಣಿಸುವುದಿಲ್ಲ. ಯಾವನು ನೆಮ್ಮದಿಯ ಸಂದರ್ಭದಲ್ಲಿ ಐಷಾರಾಮವಾಗಿ ಜೀವನ ಸಾಗಿಸಿಕೊಂಡು ವಿಪತ್ತಿನ ಸಮಯದಲ್ಲಿ ದುಆ ಮಾಡುತ್ತಾನೋ ಅವನ ದುಆಗಳು ಸ್ವೀಕಾರಗೊಳ್ಳುವುದಿಲ್ಲ.

ಇದು ಮೂಲಭೂತ ಅಂಶವಾಗಿದೆ. ನಾವು ಎಂದಿಗೂ ನಮ್ಮ ಆರಾಧನೆಗಳಲ್ಲಿ ಮತ್ತು ದುಆಗಳಲ್ಲಿ ಸುಸ್ತಾಗಬಾರದು. ಲೌಕಿಕವಾದ ಕೆಲಸಗಳು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದರಿಂದ ನಮ್ಮನ್ನು ದೂರವಿರಿಸುವಂತಾಗಬಾರದು.

ಅಲ್ಲಾಹನೊಡನೆ ಬೇಡುವಾಗ ಮರ್ಯಾದೆಯಿರಬೇಕು ಎಂಬುದು ಕಡ್ಡಾಯವಾದ ಸಂಗತಿಯಾಗಿದೆ. ಯಾವುದಾದರೂ ವಸ್ತುವನ್ನು ಅರಸನೊಡನೆ ಬೇಡಲಾಗುವಾಗ ಬುದ್ಧಿವಂತನು ಶಿಷ್ಟತೆಯನ್ನು ಗಮನದಲ್ಲಿರಿಸುತ್ತಾನೆ.

ದುಆ ಎಂಬುದು ಬಹಳ ವಿಸ್ಮಯಕರವಾದ ಸಂಗತಿಯಾಗಿದೆ. ಆದರೆ ದುಃಖಕರವಾದ ವಿಷಯವೇನೆಂದರೆ, ಈ ಕಾಲದಲ್ಲಿ ಬೇರೆಯವರಿಂದ ದುಆ ಮಾಡಿಸುವವನಿಗೂ ದುಆ ಮಾಡುವವನಿಗೂ ದುಆದ ಶಿಷ್ಟಾಚಾರಗಳ ಮತ್ತು ದುಆ ಸ್ವೀಕಾರದ ವಿಧಾನಗಳ ಅರಿವಿಲ್ಲ. ಸತ್ಯವೇನೆಂದರೆ, ದುಆದ ಸತ್ಯಾವಸ್ಥೆಯ ಬಗ್ಗೆ ಮನುಷ್ಯನು ಪೂರ್ಣವಾಗಿಯೂ ಅಪರಿಚಿತನಾಗಿದ್ದಾನೆ.

ನಮಾಝಿನಲ್ಲಿ ಅನುಭೂತಿ ಲಭಿಸುತ್ತಿಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ಅನುಭೂತಿ ಎಂಬುದು ನಮ್ಮ ನಿಯಂತ್ರಣದಲ್ಲಿಲ್ಲವೆಂದು ಅವರಿಗೆ ಗೊತ್ತಿಲ್ಲ.

ಅಲ್ಲಾಹನು ನಮಗೆ ಏನು ನೀಡಿರುವನು, ಧರ್ಮದ ಪ್ರಯೋಜನವೇನು, ಧರ್ಮ ಮನುಷ್ಯನನ್ನು ಸೋಮಾರಿಯನ್ನಾಗಿ ಮಾಡುತ್ತದೆ, ಧರ್ಮ ಕಾಲ್ಪನಿಕ ಸಂಗತಿಗಳನ್ನು ಮೆದುಳಿನಲ್ಲಿ ಉಂಟುಮಾಡುತ್ತದೆ ಎಂಬೀ ಸಂಗತಿಗಳನ್ನು ಹೃದಯಗಳಿಗೆ ಹಾಕುವುದರ ಕಡೆಗೆ ಇತ್ತೀಚಿನ ದಿನಗಳಲ್ಲಿ ಧರ್ಮದ ಮತ್ತು ದೇವನ ವಿರೋಧಿಗಳ ಹಾಗೂ ನಾಸ್ತಿಕತೆಯನ್ನು ಬೆಂಬಲಿಸುವವರ ಗಮನ ಉಂಟಾಗಿದೆ. ಇಂತಹ ಸ್ಥಿತಿಯಲ್ಲಿ ಅಲ್ಲಾಹನೊಂದಿಗೆ ಸುದೃಢವಾಧ ಸಂಬಂಧ ಸ್ಥಾಪಿಸುವುದು ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯವಾಗಿದೆ.

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳ ಬೆಳಕಿನಲ್ಲಿ ದುಆವಿನ ವಾಸ್ತವತೆ, ಅದರ ಶಿಷ್ಟಾಚಾರ, ನಮ್ಮ ಜವಾಬ್ದಾರಿಗಳು, ಅದರ ಅಗತ್ಯತೆ ಮತ್ತು ಸರ್ವಶಕ್ತನಾದ ಅಲ್ಲಾಹನಲ್ಲಿ ನಂಬಿಕೆಯ ಬಗ್ಗೆ ಈಮಾನ್ ವರ್ಧಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16-12-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَ رَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَ اِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ದುಆದ ಕುರಿತು ಅನೇಕರು ಪ್ರಶ್ನಿಸುತ್ತಾರೆ. ಈಗಂತು ವಿಶೇಷವಾಗಿ ಅಲ್ಲಾಹ್ ಮತ್ತು ದುಆದ ಕುರಿತು ಸವಾಲುಗಳು ಏಳುತ್ತಿರುತ್ತವೆ. ಅದಲ್ಲದೇ ಒಂದು ಯೋಜನೆಯ ಅಡಿಯಲ್ಲಿ ನಾಸ್ತಿಕತೆಯನ್ನು ಬೆಂಬಲಿಸುವವರು ಅಲ್ಲಾಹನ ಅಸ್ತಿತ್ವದ ಮೇಲೆ ಮತ್ತು ಧರ್ಮದ ಮೇಲೆ ಶಕ್ತವಾದ ದಾಳಿಯನ್ನು ನಡೆಸುತ್ತಿದ್ದಾರೆ. ವಿವಿಧ ಮಾರ್ಗಗಳ ಮೂಲಕ ಮನುಷ್ಯನನ್ನು ದೇವ ಮತ್ತು ಧರ್ಮದಿಂದ ದೂರೀಕರಿಸಲು ಪ್ರಯತ್ನಿಸಲಾಗುತ್ತಿದೆ. ಶೈತಾನನು ಮನುಷ್ಯನೊಂದಿಗೆ ಸಹಾನುಭೂತಿ ತೋರಿಸುವ ನಾಟಕವಾಡಿಕೊಂಡು ಮನುಷ್ಯನನ್ನು ಧರ್ಮ ಮತ್ತು ಅತ್ಯುನ್ನತನಾದ ದೇವನಿಂದ ದೂರ ಮಾಡಲು ಪ್ರಯತ್ನ ಮಾಡುತ್ತಿದ್ದಾನೆ. ಇಂತಹ ಸ್ಥಿತಿಗಳಲ್ಲಿ ನಮ್ಮ ಜನರಲ್ಲೂ ಕೆಲವೆಡೆ ಕೆಲವೊಮ್ಮೆ ಈ ಪೈಶಾಚಿಕ ಆಲೋಚನೆಗಳು ಪ್ರಭಾವ ಬೀರುತ್ತವೆ. ಲೌಕಿಕರ ಮತ್ತು ಧರ್ಮದ ವಿರುದ್ಧ ನಡೆಯುವವರ ಮಾತುಗಳು ಅವರಲ್ಲಿ ಧರ್ಮದ ಬಗ್ಗೆ, ದೇವನ ಬಗ್ಗೆ, ಆರಾಧನೆಯ ಬಗ್ಗೆ, ಅಸಮಾಧಾನ ಉಂಟುಮಾಡಲು ಶುರುಮಾಡುತ್ತದೆ. ಕಡಿಮೆ ಅರಿವುಳ್ಳ ಜನರ ಹೃದಯಗಳಲ್ಲಿ ಸಂಶಯಗಳು ಏಳುತ್ತವೆ. ನಿಸ್ಸಾರವಾದ ಪರೀಕ್ಷಣೆಯ ಪರಿಣಾಮವಾಗಿ ಅಲ್ಲಾಹನ ಅಸ್ತಿತ್ವ ಮತ್ತು ಅವನು ಪ್ರಾರ್ಥನೆಗಳನ್ನು ಆಲಿಸುತ್ತಾನೆ ಎಂಬುದರ ಬಗ್ಗೆ ಆಕ್ಷೇಪಗಳು ಏಳುತ್ತವೆ. ವಿಶೇಷವಾಗಿ ಲೌಕಿಕ ವಸ್ತುಗಳ ಮೇಲೆ ದೃಷ್ಟಿಯುಳ್ಳವರಲ್ಲಿ ಇಂತಹ ಸಂಶಯಗಳು ಉಂಟಾಗುತ್ತವೆ. ನನಗೂ ಪತ್ರಗಳನ್ನು ಬರೆದು ಕೇಳುತ್ತಾರೆ. ಸತ್ಯದಲ್ಲಿ ತಮ್ಮ ಅವಸ್ಥೆಗಳು ಬಗ್ಗೆ ನಿಗಾ ಇಡಬೇಕಾಗಿತ್ತು. ನಾವು ಎಷ್ಟರು ಮಟ್ಟಿಗೆ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ನೋಡಬೇಕಾಗಿದೆ. ಯಾವ ಮಟ್ಟಿಗೆ ನಾವು ಆರಾಧನೆಯನ್ನು ಚೆನ್ನಾಗಿ ಅನುಷ್ಠಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ನೋಡಬೇಕಾಗಿತ್ತು. ನಾವು ಎಷ್ಟರ ಮಟ್ಟಿಗೆ ನಮ್ಮ ದುಆಗಳ ಮಟ್ಟವನ್ನು ಉನ್ನತಗೊಳಿಸಿದ್ದೇವೆ ಎಂದು ನೋಡಬೇಕು. ಅಲ್ಲಾಹನ ಮೇಲಿನ ವಿಶ್ವಾಸದಲ್ಲಿ ನಮ್ಮ ಸ್ಥಿತಿಯೇನು ಎಂದು ನೋಡಬೇಕು. ಹೇಗಿದ್ದರೂ ಇಂದು ನಾನು ದುಆದ ವಿಷಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಉಪದೇಶಗಳ ಬೆಳಕಿನಲ್ಲಿ ವಿವರಿಸುವೆನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಲಿಖಿತಗಳಲ್ಲಿ ದುಆದ ಸತ್ಯಾವಸ್ಥೆ, ಪ್ರಾರ್ಥನೆ ಮಾಡುವಾಗ ಗಮನದಲ್ಲಿಡಬೇಕಾದ ಮರ್ಯಾದೆಗಳು, ನಮ್ಮ ಹೊಣೆಗಾರಿಕೆಗಳು, ದುಆದ ಆವಶ್ಯಕತೆ ಮತ್ತು ಅಲ್ಲಾಹನ ಮೇಲಿನ ದೃಢವಿಶ್ವಾಸದ ಕುರಿತು ಬಹಳಷ್ಟು ವಿವರಣೆಗಳು ಇವೆ.

ಕಷ್ಟದ ಅವಸ್ಥೆಗಳಲ್ಲಿ ನಾವು ಮಾಡುವ ದುಆಗಳು ಸ್ವೀಕಾರಗೊಳ್ಳುವಂತಾಗಲು ಸುಖದ ಸಮಯಗಳಲ್ಲೂ ನಮಗೆ ದುಆ ಮಾಡುವುದರ ಬಗ್ಗೆ ಗಮನವಿರಬೇಕು ಎಂಬುವುದಕ್ಕೆ ಸಂಬಂಧಪಟ್ಟು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾವುದಾದರೂ ವಿಪತ್ತು ಬರುವಾಗ ದೇವನಿಗೆ ಭಯಗೊಳ್ಳುವ ಹಾಗೆಯೇ ನೆಮ್ಮದಿಯ ಸ್ಥಿತಿಯಲ್ಲೂ ದೇವನಿಗೆ ಭಯಗೊಳ್ಳುವವನ ಮೇಲೆ ಅಲ್ಲಾಹನ ಕಾರುಣ್ಯವಿರುತ್ತದೆ. ಯಾವನು ನೆಮ್ಮದಿಯ ಸಮಯದಲ್ಲಿ ಅಲ್ಲಾಹನನ್ನು ಮರೆತು ಬಿಡುವುದಿಲ್ಲವೋ ಅವನನ್ನು ಅಲ್ಲಾಹನು ವಿಪತ್ತಿನ ಸಮಯದಲ್ಲಿ ಕಡೆಗಣಿಸುವುದಿಲ್ಲ. ಯಾವನು ನೆಮ್ಮದಿಯ ಸಂದರ್ಭದಲ್ಲಿ ಐಷಾರಾಮವಾಗಿ ಜೀವನ ಸಾಗಿಸಿಕೊಂಡು ವಿಪತ್ತಿನ ಸಮಯದಲ್ಲಿ ದುಆ ಮಾಡುತ್ತಾನೋ ಅವನ ದುಆಗಳು ಸ್ವೀಕಾರಗೊಳ್ಳುವುದಿಲ್ಲ.

ವಿಪತ್ತುಗಳು ಬಂದೆರಗುವಾಗ ಪಶ್ಚಾತ್ತಾಪದ ಬಾಗಿಲು ಮುಚ್ಚಲ್ಪಡುತ್ತದೆ. ದೈವಿಕ ಶಿಕ್ಷೆ ಬರುವುದಕ್ಕೆ ಮುಂಚಿತವಾಗಿ ದುಆದಲ್ಲಿ ನಿರತನಾಗಿರುವವನು, ಸದಖ ನೀಡುವವನು, ದೈವಿಕ ಆಜ್ಞೆಗಳನ್ನು ಗೌರವಿಸುವವನು, ಮತ್ತು ಸೃಷ್ಟಿಗಳ ಮೇಲೆ ಕರುಣೆದೋರುವವನು ಮತ್ತು ತನ್ನ ಕೃತ್ಯಗಳನ್ನು ಚೆನ್ನಾಗಿ ಮಾಡುವವನು ಎಷ್ಟು ಸೌಭಾಗ್ಯಶಾಲಿ. ಇವೇ ಸೌಭಾಗ್ಯದ ಲಕ್ಷಣಗಳಾಗಿವೆ. ಮರವು ಅದರ ಹಣ್ಣುಗಳಿಂದ ಗುರುತಿಸಲ್ಪಡುತ್ತದೆ. ಅದೇ ರೀತಿಯಲ್ಲಿ ಸೌಭಾಗ್ಯಶಾಲಿಯನ್ನು ಮತ್ತು ನತದೃಷ್ಟನನ್ನು ಗುರುತಿಸುವುದು ಸುಲಭ. (ಮಲ್‌ಫೂಝಾತ್, ಸಂಪುಟ–4, ಪುಟ–229–230, 1984 ಆವೃತ್ತಿ)

ಆದ್ದರಿಂದ ಒಬ್ಬ ನೈಜ ಸತ್ಯವಿಶ್ವಾಸಿ ತನ್ನ ಉತ್ತಮ ಸ್ಥಿತಿಗಳಲ್ಲೂ ಅಲ್ಲಾಹನಿಗೆ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಮರೆಯಬಾರದು. ಅವನು ಈ ಹಕ್ಕುಗಳನ್ನು ಈಡೇರಿಸಿದರೆ ಕಷ್ಟತೆಯ ಸಮಯದಲ್ಲಿ ಅಲ್ಲಾಹನು ಆತನನ್ನು ಸ್ವತಃ ರಕ್ಷಿಸುವನು. ಅವನ ದುಆಗಳನ್ನು ಸ್ವೀಕಾರ ಮಾಡುವನು. ಇದು ಮೂಲಭೂತ ಅಂಶವಾಗಿದೆ. ನಾವು ಎಂದಿಗೂ ನಮ್ಮ ಆರಾಧನೆಗಳಲ್ಲಿ ಮತ್ತು ದುಆಗಳಲ್ಲಿ ಸುಸ್ತಾಗಬಾರದು. ಲೌಕಿಕವಾದ ಕೆಲಸಗಳು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದರಿಂದ ನಮ್ಮನ್ನು ದೂರವಿರಿಸುವಂತಾಗಬಾರದು.

ದುಆ ಮಾಡುವಾಗ ಮನುಷ್ಯನ ಸ್ಥಿತಿ ಹೇಗಿರಬೇಕು ಮತ್ತು ದುಆದ ಮರ್ಯಾದೆಗಳೇನು ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನೊಡನೆ ಬೇಡುವಾಗ ಮರ್ಯಾದೆಯಿರಬೇಕು ಎಂಬುದು ಕಡ್ಡಾಯವಾದ ಸಂಗತಿಯಾಗಿದೆ. ಯಾವುದಾದರೂ ವಸ್ತುವನ್ನು ಅರಸನೊಡನೆ ಬೇಡಲಾಗುವಾಗ ಬುದ್ಧಿವಂತನು ಶಿಷ್ಟತೆಯನ್ನು ಗಮನದಲ್ಲಿರಿಸುತ್ತಾನೆ. ಆದ್ದರಿಂದಲೇ ಹೇಗೆ ಬೇಡಬೇಕೆಂಬುವುದನ್ನು ಅಲ್ಲಾಹನು ಸೂರಃ ಫಾತಿಹದಲ್ಲಿ ಕಲಿಸಿಕೊಟ್ಟಿದ್ದಾನೆ. ಆದ್ದರಿಂದಲೇ **ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್, ಅರ್ರಹ್ಮಾನಿರ್ರಹೀಮ್** ಎಂದು ಹೇಳಬೇಕೆಂದು ಕಲಿಸಿಕೊಟ್ಟಿದ್ದಾನೆ. ಅದರ ಅರ್ಥ: ಸಕಲ ಸ್ತುತಿಗಳು ಸರ್ವ ಲೋಕಗಳ ಪ್ರಭುವಾದ ಅಲ್ಲಾಹನಿಗೆ ಮಾತ್ರ ಸಲ್ಲುತ್ತವೆ. ಅವನು ಬೇಡದೇ ಮತ್ತು ಯಾಚಿಸದೇ ದಯಪಾಲಿಸುವವನೂ ಯಥಾರ್ಥ ಪ್ರಯತ್ನಕ್ಕೆ ಸರಿಯಾದ ಉತ್ತಮ ಪ್ರತಿಫಲಗಳನ್ನು ನೀಡುವವನೂ ಆಗಿದ್ದಾನೆ. 'ಸರಿಯಾದ ಪ್ರಯತ್ನ' ಎಂಬ ಪದದ ಕುರಿತು ಚಿಂತಿಸಬೇಕು. ನಿಜವಾದ ಪರಿಶ್ರಮದ ಮಟ್ಟವು ಅಲ್ಲಾಹನು ಸ್ವತಃ ವಿವರಿಸಿ ಕೊಟ್ಟಿದ್ದಾಗಿರುತ್ತದೆ. ಎಂದರೆ ಕಠಿಣವಾದ ಒಂದು ಪ್ರಯತ್ನ ಮಾಡಬೇಕಾಗುತ್ತದೆ. ಅನಂತರ **ಮಾಲಿಕಿ ಯೌಮಿದ್ದೀನ್** ಎಂದು ಹೇಳಬೇಕೆಂದು ಕಲಿಸಿ ಕೊಟ್ಟಿದ್ದಾನೆ. ಎಂದರೆ, ಇಹಲೋಕದಲ್ಲೂ ಪರಲೋಕದಲ್ಲೂ ಶಿಕ್ಷೆ ಅಥವಾ ರಕ್ಷೆ ನೀಡುವುದು ಅವನೇ ಆಗಿದ್ದಾನೆ. ಇಷ್ಟೆಲ್ಲ ಸ್ತುತಿಗಳನ್ನು ಮನುಷ್ಯನು ಮಾಡುವಾಗ, ಮನುಷ್ಯನ ಪ್ರಭು ಎಷ್ಟು ದೊಡ್ಡವನು ಎಂದು ಅವನಿಗೆ ಅರಿವಾಗುತ್ತದೆ. ಅನಂತರ ಅಲ್ಲಾಹನು ತನ್ನ ಮುಂದಿದ್ದಾನೆ ಎಂಬ ರೀತಿಯಲ್ಲಿ ಅವನು **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್, ಇಹ್‌ದಿನಸ್ಸಿರಾತಲ್ ಮುಸ್ತಖೀಮ್, ಸೀರತಲ್ಲಧೀನ ಅನ್‌ಅಮ್‌ತ ಅಲೈಹಿಂ** ಎಂದು ಹೇಳಬೇಕೆಂದು ಕಲಿಸಿದ್ದಾನೆ. ಎಂದರೆ, ನಾವು ನಿನ್ನನ್ನೇ ಆರಾಧಿಸುತ್ತೇವೆ ಅಥವಾ ಆರಾಧಿಸಲು ಬಯಸುತ್ತೇವೆ ಮತ್ತು ನಿನ್ನಿಂದಲೇ ಸಹಾಯವನ್ನು ಯಾಚಿಸುತ್ತೇವೆ ಹಾಗೂ ವಕ್ರತೆಯಿಲ್ಲದಂತಹ ನೇರವಾದ ಮಾರ್ಗದಲ್ಲಿ ನಮ್ಮನ್ನು ನಡೆಸು ಎಂದು ಹೇಳಬೇಕು. ಒಂದು ಮಾರ್ಗ ಕುರುಡದ್ದಾಗಿರುತ್ತದೆ. ಆ ಮಾರ್ಗದಲ್ಲಿ ಪರಿಶ್ರಮ ಮಾಡುವುದರಿಂದ ಯಾವುದೇ ಪರಿಣಾಮ ಉಂಟಾಗುವುದಿಲ್ಲ. ಯಾವ ಮಾರ್ಗದಲ್ಲಿ ನಡೆಯುವುದರಿಂದ ಅನುಗ್ರಹ ಲಭಿಸುತ್ತದೋ ಅದೇ ನೇರವಾದ ಮಾರ್ಗವಾಗಿರುತ್ತದೆ. ಅನಂತರ ಗೈರಿಲ್ ಮಗ್‌ಝೂಬಿ ಅಲೈಹಿಂ ವಲಝ್ಝಾಲ್ಲೀನ್ ಎಂದು ಹೇಳಬೇಕು. ಎಂದರೆ, ನಿನ್ನ ಕೋಪಕ್ಕೆ ಈಡಾದವರ ಮತ್ತು ದಾರಿಗೆಟ್ಟವರ ಮಾರ್ಗದಲ್ಲಿ ನಡೆಸಬೇಡ ಎಂದು ಹೇಳಬೇಕು.

ಒಂದು ಸಭೆಯಲ್ಲಿದ್ದುಕೊಂಡು ಹಝ್ರತ್ ಮಸೀಹ್ ಮೌಊದ್(ಅ) ಇದನ್ನು ವಿವರಿಸುತ್ತಿದ್ದಾಗ, ಒಬ್ಬ ವ್ಯಕ್ತಿ ಕೇಳಿದನು: ಪ್ರವಾದಿಗಳಿಗೆ ಈ ದುಆದ ಆವಶ್ಯಕತೆಯೇನು? ಇದು ಸಾಮಾನ್ಯ ಜನರಿಗೆ ಇರುವ ದುಆ ಅಲ್ಲವೇ? ಹಝ್ರತ್ ಪೈಗಂಬರ್(ಸ) ಇದನ್ನು ಏಕೆ ಮಾಡುತ್ತಿದ್ದರು. ಅವರು ಮೊದಲೇ ನೇರವಾದ ಮಾರ್ಗದಲ್ಲಿ ಇರುತಾರೆ.

ಇದನ್ನು ಆಲಿಸಿದ ನಂತರ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಈ ಪ್ರಾರ್ಥನೆಯನ್ನು ಪ್ರವಾದಿಗಳು ಪದವಿಗಳಲ್ಲಿ ಮತ್ತು ಸ್ಥಾನಗಳಲ್ಲಿ ಪ್ರಗತಿ ಹೊಂದಲು ಮಾಡುತ್ತಾರೆ. **ಇಹ್‌ದಿನಸ್ಸಿರಾತಲ್ ಮುಸ್ತಖೀಂ** ಎಂಬ ಪ್ರಾರ್ಥನೆಯನ್ನು ಸತ್ಯವಿಶ್ವಾಸಿ ಪರಲೋಕದಲ್ಲೂ ಮಾಡುವನು. ಏಕೆಂದರೆ ಅಲ್ಲಾಹನಿಗೆ ಯಾವುದೇ ಮಿತಿಯಿಲ್ಲದ ರೀತಿಯಲ್ಲೇ ಅವನು ನೀಡುವ ಪದವಿಗಳಿಗೂ ಸ್ಥಾನಗಳಿಗೂ ಯಾವುದೇ ಮಿತಿಯಿಲ್ಲ. (ಮಲ್‌ಫೂಝಾತ್, ಸಂಪುಟ–4, ಪುಟ–399–400, 1984 ಆವೃತ್ತಿ)

ಆದ್ದರಿಂದ, ಈ ಶಿಷ್ಟಾಚಾರದ ವಿಷಯಗಳನ್ನು ಮುಂದಿರಿಸಿ ನಮಾಝ್ ನಿರ್ವಹಿಸಿದರೆ, ದುಆ ಮಾಡಿದರೆ ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿ ಹಾಗೂ ಅವನ ಅಗತ್ಯಗಳನ್ನು ವ್ಯಕ್ತಪಡಿಸುವ ಸರಿಯಾದ ಅರಿವುಗಳಿಸುತ್ತಾನೆ.

ನಂತರ ದುಆ ಮತ್ತು ಅದರ ಶಿಷ್ಟಾಚಾರದ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ದುಆ ಎಂಬುದು ಬಹಳ ವಿಸ್ಮಯಕರವಾದ ಸಂಗತಿಯಾಗಿದೆ. ಆದರೆ ದುಃಖಕರವಾದ ವಿಷಯವೇನೆಂದರೆ, ಈ ಕಾಲದಲ್ಲಿ ಬೇರೆಯವರಿಂದ ದುಆ ಮಾಡಿಸುವವನಿಗೂ ದುಆ ಮಾಡುವವನಿಗೂ ದುಆದ ಶಿಷ್ಟಾಚಾರಗಳ ಮತ್ತು ದುಆ ಸ್ವೀಕಾರದ ವಿಧಾನಗಳ ಅರಿವಿಲ್ಲ. ಸತ್ಯವೇನೆಂದರೆ, ದುಆದ ಸತ್ಯಾವಸ್ಥೆಯ ಬಗ್ಗೆ ಮನುಷ್ಯನು ಪೂರ್ಣವಾಗಿಯೂ ಅಪರಿಚಿತನಾಗಿದ್ದಾನೆ.

ಕೆಲವರು ದುಆವನ್ನು ನಿರಾಕರಿಸುತ್ತಾರೆ. ಕೆಲವರು ನಿರಾಕರಿಸುವುದಿಲ್ಲವಾದರೂ ಅವರಿಗೆ ದುಆದ ಮರ್ಯಾದೆಗಳು ಗೊತ್ತಿಲ್ಲದ ಕಾರಣದಿಂದ ಅವರ ದುಆಗಳು ಸ್ವೀಕಾರಗೊಳ್ಳುವುದಿಲ್ಲ. ಅಂತಹವರ ಸ್ಥಿತಿ ಇತರರನ್ನು ನಾಸ್ತಿಕತೆಯ ಸಮೀಪಕ್ಕೆ ತರುತ್ತದೆ. ದುಆ ಮಾಡುವವನು ಮೊತ್ತಮೊದಲಾಗಿ ಆಯಾಸಗೊಂಡು ನಿರಾಶೆಗೊಳ್ಳಬಾರದು. ಈಗ ಏನು ನಡೆಯದು ಎಂದು ಭಾವಿಸಬಾರದು. ದುಆ ಮಾಡಿಕೊಂಡು ಉದ್ದೇಶಸಿದ್ಧಿಯ ಮೊಳಕೆ ಒಡೆಯುವಷ್ಟರಲ್ಲಿ ದುಆ ಮಾಡುವವನು ಆಯಾಸಗೊಳ್ಳುತ್ತಾನೆ. ಅದರ ಪರಿಣಾಮವಾಗಿ ಪರಾಜಯ ಉಂಟಾಗುತ್ತದೆ. ಹೀಗೆ ಅವನು ದುಆದ ಪ್ರಭಾವವನ್ನು ನಿರಾಕರಿಸಲು ಆರಂಭಿಸುತ್ತಾನೆ. ದೇವನಿದ್ದರೆ ದುಆ ಏಕೆ ಸ್ವೀಕಾರಗೊಳ್ಳುವುದಿಲ್ಲವೆಂದು ಕೇಳಲು ಆರಂಭಿಸುತ್ತಾನೆ. ಆದರೆ ಹೀಗೆ ಎಡವಿ ಬೀಳುವವನು ಸ್ವತಃ ಯೋಚಿಸಿದರೆ ಅವನಿಗೆ ಗೊತ್ತಾಗುವ ಸಂಗತಿಯೇನೆಂದರೆ, ಈ ಎಲ್ಲ ಪರಾಜಯಗಳು ಅವನದ್ದೇ ದುಡುಕು ಮತ್ತು ಅವಸರದ ಪರಿಣಾಮವಾಗಿದೆ. ಸ್ಥಿರಚಿತ್ತತೆ ಆತನಲ್ಲಿ ಇರುವುದಿಲ್ಲ. ಅವಸರಪಡುವ ಸ್ವಭಾವವಿದ್ದರೆ, ಅದು ಮನುಷ್ಯನ ಸ್ವಂತ ತಪ್ಪಾಗಿದೆ. ಸ್ಥಿರಚಿತ್ತನಾಗಿದ್ದರೆ, ಅವಸರಪಡದಿದ್ದರೆ ಮತ್ತು ವಿಶ್ವಾಸ ಸುದೃಢವಾಗಿದ್ದರೆ ಎಂದಿಗೂ ಅಂತಹ ಸ್ಥಿತಿ ಉಂಟಾಗಲಾರದು. ಅವಸರಪಡುವುದರಿಂದ ಮತ್ತು ವಿಶ್ವಾಸ ಸುದೃಢವಾಗಿದ್ದರೆ ಎಂದಿಗೂ ಅಂತಹ ಸ್ಥಿತಿ ಉಂಟಾಗಲಾರದು. ಅವಸರಪಡುವುದರಿಂದ ದುಆ ಸ್ವೀಕಾರಗೊಳ್ಳದಂತಾಯಿತು.

ದುಆ ಮಾಡುವವನು ಸಹನೆಯನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೋಡಿರಿ! ದುಆದ ಸ್ಥಿತಿಯು ಒಬ್ಬ ರೈತ ಹೊರಗೆ ಹೋಗಿ ತನ್ನ ಹೊಲದಲ್ಲಿ ಬೀಜವನ್ನು ಬಿತ್ತುವ ಹಾಗೆಯೇ ಆಗಿರುತ್ತದೆ. ಬಾಹ್ಯವಾಗಿ ನೋಡುವುದಾದರೆ, ಅವನು ಒಂದು ಉತ್ತಮ ಬೀಜವನ್ನು ಹೊರಗೆ ಹೋಗಿ ಮಣ್ಣಿನಡಿಯಲ್ಲಿ ಹೂತಿದ್ದಾನೆ ಎಂದು ತೋರುತ್ತದೆ. ಈ ಬೀಜವು ನೆಲದೊಳಗೆ ಒಂದು ಸಸ್ಯದ ರೂಪವನ್ನು ಪಡೆಯುತ್ತಿದೆ ಎಂದು ಹೊರಗಿನ ಪ್ರಪಂಚ ಮತ್ತು ರೈತನು ಸ್ವತಃ ನೋಡುವುದಿಲ್ಲ, ಆದರೆ ಕೆಲವು ದಿನಗಳ ನಂತರ, ಆ ಬೀಜವು ಕೊಳೆಯಲು ಪ್ರಾರಂಭಿಸುತ್ತದೆ ಮತ್ತು ಒಳಗೆ ಸಸ್ಯವಾಗಿ ಬೆಳೆಯುತ್ತದೆ ಮತ್ತು ಅಭಿವೃದ್ಧಿ ಹೊಂದುತ್ತದೆ. ಅದರ ಹಸಿರು ಎಲೆಗಳು ಕೂಡ ಹೊರಬರುತ್ತವೆ. ಬೀಜದ ಒಂದು ವೈಶಿಷ್ಟ್ಯವೆಂದರೆ ಮೊದಲು ಅದರ ಬೇರುಗಳು ಹೊರಬರುತ್ತವೆ, ಬೇರುಗಳು ನೆಲಕ್ಕೆ ಅಂಟಿಕೊಂಡಿರುತ್ತವೆ, ನಂತರ ಮೊಳಕೆ ಹೊರಬರುತ್ತವೆ. ಮತ್ತು ಇತರ ಜನರು ಸಹ ಇದನ್ನು ನೋಡಬಹುದು. ಈಗ ಭೂಮಿಯ ಕೆಳಗೆ ಬಿತ್ತಿದ ಕಾಲದಿಂದಲೂ ಬೀಜವನ್ನು ನೋಡಿ, ನಿಜವಾಗಿ ಆ ಗಂಟೆಯಿಂದಲೇ ಅದು ಗಿಡವಾಗಲು ತಯಾರಿ ನಡೆಸಿತು, ಆದರೆ ಕಣ್ಣಿಗೆ ಅದರ ಬಗ್ಗೆ ತಿಳಿದಿಲ್ಲ, ಮತ್ತು ಈಗ ಅದರ ಹಸಿರು ಹೊರಬಂದಿದೆ, ಎಲ್ಲರೂ ನೋಡಿದ್ದಾರೆ. ಆದರೆ ಅದು ಸರಿಯಾದ ಸಮಯದಲ್ಲಿ ಫಲ ನೀಡುತ್ತದೆ ಎಂದು ಆ ಸಮಯದಲ್ಲಿ ಪ್ರೌಢವಲ್ಲದ ಮಗು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅಜ್ಞಾನದ ಮಗು ಅದು ಚಿಕ್ಕದಾಗಿರುವುದರಿಂದ ಅದು ಫಲ ನೀಡುವುದಿಲ್ಲ ಎಂದು ಭಾವಿಸುತ್ತಾನೆ. ಅದೇ ಸಮಯದಲ್ಲಿ ಅದು ಫಲ ನೀಡುವುದಿಲ್ಲ ಎಂಬ ಕಾರಣದಿಂದ ಅವನು ಅದನ್ನು ತಿಳಿದುಕೊಳ್ಳುತ್ತಾನೆ, ಆದರೆ ಅದು ಯಾವಾಗ ಫಲ ನೀಡುತ್ತದೆ ಎಂದು ಒಬ್ಬ ಬುದ್ಧಿವಂತ ರೈತನಿಗೆ ತಿಳಿದಿರುತ್ತದೆ. ಅವನು ತಾಳ್ಮೆಯಿಂದ ಅದರ ಮೇಲ್ನೋಟ ವಹಿಸುತ್ತಾನೆ ಮತ್ತು ಗಮನವಿಟ್ಟು ಅದರ ಪಾಲನೆ ಪೋಷಣೆ ಮಾಡುತ್ತಾನೆ. ಈ ರೀತಿಯಾಗಿ ಅದರ ಫಲ ನೀಡುವ ಸಮಯ ಬಂದು ಬಿಡುತ್ತದೆ ಮತ್ತು ಅದು ಪಕ್ವವಾಗುತ್ತದೆ. ದುಆದ ಸ್ಥಿತಿಯು ಇದೇ ಆಗಿದೆ. ಅವಸರ ಪಡುವವನು ಮೊದಲೇ ಆಯಾಸಗೊಂಡು ಕುಳಿತುಕೊಳ್ಳುತ್ತಾನೆ. ಸಹನೆ ಕೈಗೊಳ್ಳುವವನು ಪ್ರತಿಫಲವನ್ನು ಕಾಯುತ್ತಾ ಸ್ಥಿರಚಿತ್ತತೆಯಿಂದ ಇರುತ್ತಾನೆ. (ಮಲ್‌ಫೂಝಾತ್, ಸಂಪುಟ–4, ಪುಟ–417, 1984 ಆವೃತ್ತಿ)

ನಂತರ ದುಆ ಮಾಡುವವನ ಸಹನೆಯ ಗುಣಮಟ್ಟವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸತ್ಯಸಂಗತಿ ಏನೆಂದರೆ ದುಆವಿನಲ್ಲಿ ಮಹತ್ತರವಾದ ಮೆಟ್ಟಿಲುಗಳು ಮತ್ತು ಶ್ರೇಣಿಗಳಿವೆ, ಅದರ ಅಜ್ಞಾನದಿಂದಾಗಿ ದುಆ ಮಾಡುವವರು ವಂಚಿತರಾಗುತ್ತಾರೆ. ಅವರು ಅವಸರದಲ್ಲಿರುತ್ತಾರೆ ಮತ್ತು ಸರ್ವಶಕ್ತನಾದ ಅಲ್ಲಾಹನ ಕಾರ್ಯಗಳಲ್ಲಿ ಕ್ರಮೇಣತೆ ಇದ್ದರೂ ಸಹ ಅವರು ಸಹನೆಯಿಂದಿರಲು ಸಾಧ್ಯವಿಲ್ಲ.

ನೋಡಿರಿ, ಒಬ್ಬ ವ್ಯಕ್ತಿ ಇಂದು ವಿವಾಹ ಮಾಡಿಕೊಂಡು ನಾಳೆ ಅವನ ಮನೆಯಲ್ಲಿ ಮಗು ಜನಿಸುವುದಿಲ್ಲ. ಅಲ್ಲಾಹನು ಹಾಗೆ ಮಾಡಲು ಶಕ್ತನು. ಆದರೆ ಅವನು ನಿಯಮ ಮತ್ತು ಒಂದು ವ್ಯವಸ್ಥೆಯನ್ನು ನಿಶ್ಚಯಿಸಿದ್ದಾನೆ. ಅದು ಅಗತ್ಯ. ಮೊದಮೊದಲು ಸಸ್ಯಗಳ ಬೆಳವಣಿಗೆಯಂತೆ ಏನೂ ತಿಳಿಯದು." ಗಿಡಗಳು ಸಸ್ಯಗಳು ಬೆಳೆಯುವ ರೀತಿಯ ಬಗ್ಗೆ ಮೊದಮೊದಲು ಗೊತ್ತಾಗುವುದಿಲ್ಲ ಮನುಷ್ಯ ಅಥವಾ ಯಾವುದೇ ಪ್ರಾಣಿ ಹುಟ್ಟುವ ಸಮಯದಲ್ಲಿ ಏನೂ ತಿಳಿಯುವುದಿಲ್ಲ. ಈಗ ಮನುಷ್ಯನ ಉದಾಹರಣೆ ಇದೆ "ನಾಲ್ಕು ತಿಂಗಳವರೆಗೆ ಯಾರೂ ಏನನ್ನೂ

ಖಚಿತವಾಗಿ ಹೇಳಲು ಸಾಧ್ಯವಿಲ್ಲ. ನಂತರ ಕೆಲವು ಚಲನೆಯನ್ನು ಅನುಭವಿಸಲು ಪ್ರಾರಂಭವಾಗುತ್ತದೆ ಮತ್ತು ಪೂರ್ಣ ಅವಧಿಯ ಕೊನೆಯಲ್ಲಿ, ಬಹಳಷ್ಟು ನೋವು ಅನುಭವಿಸಿದ ನಂತರ, ಮಗು ಜನಿಸುತ್ತದೆ." ವೈದ್ಯರೂ ಸಹ ಪ್ರಸ್ತುತ ಕಾಲದಲ್ಲಿ ಹನ್ನೆರಡು ವಾರಗಳ ನಂತರವೇ ಸ್ಕ್ಯಾನಿಂಗ್ ಮೂಲಕ ತಿಳಿಸುತ್ತಾರೆ. ಹೀಗೆ ಮಗುವಿನ ಜನನದ ಬಗ್ಗೆ ಎಲ್ಲಾ ಆಧುನಿಕ ತಂತ್ರಜ್ಞಾನಗಳಿದ್ದರೂ, ವೈದ್ಯರಿಗೆ ಸರಿಯಾಗಿ ತಿಳಿದಿದ್ದರು ಅವರು ಹನ್ನೆರಡು ವಾರಗಳು ಕಳೆದಾಗ ಸ್ಕ್ಯಾನ್ ಮಾಡುತ್ತಾರೆ. ಆ ಸಮಯದಲ್ಲಿ, ಅಂದರೆ ಹಝ್ರತ್ ಮಸೀಹ್ ಮೌಊದ್(ಅ) ವಿವರಿಸುವಾಗ, ಅಷ್ಟೊಂದು ತಂತ್ರಜ್ಞಾನ ಇರಲಿಲ್ಲ, ಆದರೆ ಈ ಹೊರತಾಗಿಯೂ, ಅವರು(ಅ) ಪ್ರಕೃತಿಯ ನಿಯಮದ ಬಗ್ಗೆ ಈ ವಿವರಣೆಯನ್ನು ನೀಡಿದ್ದರು. "ಮಗುವಿನ ಜನನವು ಅದೇ ಸಮಯದಲ್ಲಿ ತಾಯಿಯ ಜನನವೂ ಆಗಿರುತ್ತದೆ" ತಾಯಿಯೂ ಮರುಹುಟ್ಟು ಪಡೆಯಬೇಕು. ಗರ್ಭಾವಸ್ಥೆಯ ಈ ಅವಧಿಯಲ್ಲಿ ಮಹಿಳೆ ಅನುಭವಿಸುವ ನೋವು ಮತ್ತು ಸಂಕಟಗಳನ್ನು ಪುರುಷರಿಗೆ ಅಂದಾಜು ಮಾಡಲು ಸಾಧ್ಯವಾಗುವುದಿಲ್ಲ ಎಂದು ಅವರು(ಅ) ಹೇಳಿದರು. ಆದರೆ ಹೆಣ್ಣಿಗೂ ಹೊಸ ಜೀವನವಿರುವುದು ಸತ್ಯಸಂಗತಿಯಾಗಿದೆ. ಈಗ ಯೋಚಿಸಿ ನೋಡಿ! ಸಂತಾನಕ್ಕಾಗಿ ಮೊದಲು ಅವಳು ಸ್ವತಃ ಮರಣವನ್ನು ಒಪ್ಪಿಕೊಳ್ಳಬೇಕು. ನಂತರ ಅವಳು ಈ ಸಂತೋಷವನ್ನು ನೋಡುತ್ತಾಳೆ. ಅದೇ ರೀತಿ ಹಂಬಲಿಕೆ ಮತ್ತು ಆತುರವನ್ನು ಬಿಟ್ಟು ಎಲ್ಲ ಸಂಕಟಗಳನ್ನು ಭರಿಸಲು ಸುಆ ಮಾಡುವ ವ್ಯಕ್ತಿಗೆ ಅಗತ್ಯವಾಗಿದೆ. ಆದ್ದರಿಂದ ಆತುರ ಪಡಬಾರದು, ತೊಂದರೆಗಳನ್ನು ಅನುಭವಿಸಬೇಕು, ಮತ್ತು ದುಆ ಮಾಡುತ್ತಿರಬೇಕು. "ದುಆ ಸ್ವೀಕೃತವಾಗುತ್ತಿಲ್ಲ ಎಂದು ಭಾವಿಸಬಾರದು. ಅಂತಿಮವಾಗಿ ನಿಶ್ಚಿತವಾದ ಸಮಯ ಬರುತ್ತದೆ. ದುಆವಿನ ಫಲಿತಾಂಶ ವ್ಯಕ್ತವಾಗುವ ಕಾಲವೂ ಬರುತ್ತದೆ. ದುಆವನ್ನು ಮೊದಲು ಈ ಹಂತಕ್ಕೆ ಮತ್ತು ಮಟ್ಟಿಗೆ ಕೊಂಡೊಯ್ಯಬೇಕು. ಆ ಮಟ್ಟಕ್ಕೆ ತಲುಪಿದಾಗ ಅದು ಫಲಪ್ರದವಾಗಿದೆ ಎಂದು ಸಾಬೀತಾಗುತ್ತದೆ." ಅವರು(ಅ) ಹೇಳಿದರು, "ಭೂತಗನ್ನಡಿಯ ಕೆಳಗೆ ಬಟ್ಟೆಯನ್ನು ಇರಿಸಲಾಗುತ್ತದೆ ಮತ್ತು ಸೂರ್ಯದ ಕಿರಣಗಳು ಆ ಭೂತಗನ್ನಡಿಯಲ್ಲಿ ಸಂಗ್ರಹವಾಗುತ್ತವೆ ಮತ್ತು ಅವುಗಳ ಶಾಖ ಮತ್ತು ತೀವ್ರತೆಯು ಕೆಳಗೆ ಇರಿಸಿರುವ ಬಟ್ಟೆಯನ್ನು ಸುಡುವ ಹಂತಕ್ಕೆ ತಲುಪುತ್ತದೆ. ಆಗ ಇದ್ದಕ್ಕಿದ್ದಂತೆ ಆ ಬಟ್ಟೆಗೆ ಬೆಂಕಿ ಹತ್ತಿಕೊಳ್ಳುತ್ತದೆ. ಈ ರೀತಿಯಾಗಿ, ಪ್ರಾರ್ಥನೆಯು ನಕಾರಾತ್ಮಕತೆಯನ್ನು ಸುಟ್ಟುಹಾಕಲು ಮತ್ತು ಉದ್ದೇಶವನ್ನು ಪೂರೈಸಲು ಸಾಬೀತುಪಡಿಸುವ ಶಕ್ತಿಯನ್ನು ಅದರಲ್ಲಿ ರಚಿಸುವ ಹಂತವನ್ನು ತಲುಪುವುದು ಅವಶ್ಯಕವಾಗಿರುತ್ತದೆ. (ಮಲ್‌ಫ಼ೂಝಾತ್, ಸಂಪುಟ-4, ಪುಟ-418, 1984 ಆವೃತ್ತಿ)

ಆದ್ದರಿಂದ ಪ್ರತಿಯೊಬ್ಬ ದುಆ ಮಾಡುವವನು ತನ್ನ ಸ್ವಂತ ಮೌಲ್ಯಮಾಪನದಿಂದ ಅವನು ಈ ಮಾನದಂಡವನ್ನು ಸಾಧಿಸಿದ್ದಾನೋ ಇಲ್ಲವೋ ಎಂದು ತಿಳಿಯುತ್ತಾನೆ. ಸರ್ವಶಕ್ತನಾದ ಅಲ್ಲಾಹನ ಕುರಿತು ಪರ್ಷಿಯನ್ ಶ್ಲೋಕವೊಂದರ ಉದಾಹರಣೆ ನೀಡುತ್ತ ಹೇಳುತ್ತಾರೆ "ಪೈದಾ ಅಸ್ತ್ ನದಾರಾ ಕೆ ಬಿಲಂದ್ ಅಸ್ತ್ ಜನಾಬತ್" ಅಂದರೆ ಕೂಗಿನಿಂದ ನಿನ್ನ ಆಸ್ಥಾನವು ಬಹಳ ವಿಶಾಲವಾಗಿದೆ ಎಂದು ಸ್ಪಷ್ಟವಾಗುತ್ತದೆ.

ಅವರು(ಅ) ಹೇಳುತ್ತಾರೆ: ಒಬ್ಬ ವ್ಯಕ್ತಿ ಬಹಳ ದೀರ್ಘಕಾಲ ದುಆವಿನಲ್ಲಿ ನಿರತನಾಗಿರಬೇಕೂ. ಅಂತಿಮವಾಗಿ, ಸರ್ವಶಕ್ತನಾದ ಅಲ್ಲಾಹನು ವ್ಯಕ್ತಪಡಿಸುತ್ತಾನೆ. ನಾನು ನನ್ನ ಸ್ವಂತ ಅನುಭವದಿಂದ ನೋಡಿದ್ದೇನೆ ಮತ್ತು ಹಿಂದಿನ ಸಜ್ಜನರ ಅನುಭವವೂ ಸಾಕ್ಷಿಯಾಗಿದೆ, ಒಬ್ಬ ವ್ಯಕ್ತಿಯು ಒಂದು ವಿಷಯದಲ್ಲಿ ದೀರ್ಘಕಾಲ ಮೌನವಾಗಿದ್ದರೆ ಯಶಸ್ಸಿನ ಭರವಸೆ ಇರುತ್ತದೆ. ಅವನು ಯಶಸ್ಸನ್ನು ನೀಡುತ್ತಾನೆ. ಆದರೆ ಯಾವ ವಿಷಯದಲ್ಲಿ ಉತ್ತರವು ಬೇಗ ಸಿಗುತ್ತದೆಯೊ." ಒಂದು ವೇಳೆ ಉತ್ತು ಇಲ್ಲ ಎಂದಾದರೆ "ಅದು ಆಗುವುದಿಲ್ಲ." ಅವರು ಹೇಳುತ್ತಾರೆ "ಒಬ್ಬ ಭಿಕ್ಷುಕನು ಭಿಕ್ಷೆ ಬೇಡಲು ಯಾರೊಬ್ಬರ ಮನೆಬಾಗಿಲಿಗೆ ಹೋಗುತ್ತಾನೆ ಮತ್ತು ಬಹಳ ಉದ್ವೇಗದಿಂದ ಮತ್ತು ವಿನಮ್ರತೆಯಿಂದ ಕೇಳಿದಾಗ ಮತ್ತು ಸ್ವಲ್ಪ ಸಮಯದವರೆಗೆ ಗದರಿಸಿದ ನಂತರವೂ ತನ್ನ ಸ್ಥಳದಿಂದ ಕದಲುವುದಿಲ್ಲ." ಮನೆಯವನು ಅವನಿಗೆ ಅವಮಾನಿಸುತ್ತಾನೆ ಬೈಯುತ್ತಾನೆ ಆದರೆ ಆತನು ತನ್ನ ಸ್ಥಳದಿಂದ ಅಲ್ಲಾಡುವುದಿಲ್ಲ. ಆತನು ಪ್ರಶ್ನೆ ಕೇಳುತ್ತಲೇ ಇರುತ್ತಾನೆ ಕೊನೆಗೆ ಅವನಿಗೆ" ಅಂದರೆ ಮನೆಯವನಿಗೆ ನಾಚಿಕೆ ಬರುತ್ತದೆ, ಅವನು ಎಷ್ಟೇ ಜಿಪುಣವಾದರೂ ಆತನು ಆ ಬಿಕ್ಷುಕನಿಗೆ ಏನನ್ನಾದರೂ ನೀಡುತ್ತಾನೆ. ಹೀಗೆ, ಸುಆ ಮಾಡಿವವನಿಗೆ ಸಾಮಾನ್ಯ ಬಿಕ್ಷುಕನಂತೆ ತಾಳ್ಮೆ ಇರಬೇಕಲ್ಲವೇ? ಕರುಣಾಮಯಿಯಾದ ಸರ್ವಶಕ್ತನಾದ ಅಲ್ಲಾಹನು ತನ್ನ ವಿನಮ್ರ ದಾಸನು ದೀರ್ಘಕಾಲ ತನ್ನ ಆಶ್ರಯದಲ್ಲಿ ಬಿದ್ದಿರುವುದನ್ನು ನೋಡಿದಾಗ ಅವನ ಅದೃಷ್ಟವನ್ನು ಕೆಟ್ಟದಾಗಿ ಮಾಡುವುದಿಲ್ಲ.

ಓರ್ವ ಗರ್ಭಿಣಿ ಮಹಿಳೆ ನಾಲ್ಕೈದು ತಿಂಗಳ ನಂತರ ಈಗ ಮಗು ಏಕೆ ಜನಿಸುತ್ತಿಲ್ಲ ಎಂದು ಹೇಳಿದರೆ ಮತ್ತು ತನ್ನ ಈ ಅಭಿಲಾಷೆಯನ್ನು ತೀರಿಸುವುದಕ್ಕೆ ಮಸ್ಕತ್ ಔಷಧಿಯನ್ನು ತಿಂದರೆ ಆ ಸಮಯದಲ್ಲಿ ಯಾವ ಮಗು ಹುಟ್ಟುತ್ತದೆ?" ಮಗು ಕಳೆದು ಹೋಗುತ್ತದೆ. ಅಥವಾ ಅವಳೇ ಸ್ವತಃ ಹತಾಶದ ಪರಿಸ್ಥಿತಿಯಲ್ಲಿ ಬೀಳುತ್ತಾಳೆ? ಅದೇ ರೀತಿಯಲ್ಲಿ, ಅಕಾಲಿಕವಾಗಿ ಆತುರಪಡುವ ವ್ಯಕ್ತಿಯು ನಷ್ಟವನ್ನು ಮಾತ್ರ ಅನುಭವಿಸುತ್ತಾನೆ. ಮತ್ತು ನಷ್ಟವನ್ನು ಮಾತ್ರವಲ್ಲ, ನಂಬಿಕೆಗೆ ಆಘಾತವನ್ನೂ ಉಂಟುಮಾಡುತ್ತಾನೆ. ಅಂತಹ ಪರಿಸ್ಥಿತಿಯಲ್ಲಿ ಕೆಲವರು ನಾಸ್ತಿಕರಾಗುತ್ತಾರೆ. ಅವರು ಹೇಳುತ್ತಾರೆ, "ನಮ್ಮ ಹಳ್ಳಿಯಲ್ಲಿ ಒಬ್ಬ ಬಡಗಿ ಇದ್ದನು." ಅವನು ತರ್ಖಾನ್ ಆಗಿದ್ದನು. "ಅವನ ಹೆಂಡತಿ ಅನಾರೋಗ್ಯಕ್ಕೆ ಒಳಗಾಗಿದ್ದಳು ಮತ್ತು ಅಂತಿಮವಾಗಿ ಅವಳು ಮರಣ ಹೊಂದಿದಳು." ಅಲ್ಲಾಹನ ಅಸ್ತಿತ್ವ ಇರುತ್ತಿದ್ದರೆ ನಾನು ಇಷ್ಟೆಲ್ಲಾ ಪ್ರಾರ್ಥನೆಗಳನ್ನು ಮಾಡಿದ್ದೆ, ಆತನು ನನ್ನ ದುಆಗಳನ್ನು ಸ್ವೀಕರಿಸಿದ್ದರೆ ನನ್ನ ಹೆಂಡತಿಯು ಸಾಯುತ್ತಿರಲಿಲ್ಲ ಎಂದು ಹೇಳಿದನು. ಹೀಗೆ ಆತನು ನಾಸ್ತಿಕನಾದನು. ಹೇಳಿದರು: "ಆದರೆ ನಿಷ್ಠಾವಂತನು ತನ್ನ ನಿಷ್ಠೆ ಹಾಗೂ ನೈತಿಕತೆಯಿಂದ ಕಾರ್ಯ ನಿರ್ವಹಿಸಿದರೆ ಆತನ ಈಮಾನ್ ವರ್ಧಿಸುತ್ತಿತ್ತು ಮತ್ತು ಎಲ್ಲವು ಸರಿಯಾಗುತ್ತಿತ್ತು. ಲೌಕಿಕ ಸಂಪತ್ತು ಅಲ್ಲಾಹನ ಮುಂದೆ ಏನು? ಅವನು ಎಲ್ಲವನ್ನೂ ಒಂದೇ ಬಾರಿಗೆ ಮಾಡಬಲ್ಲನು." ಅವರು ಹೇಳಿದರು, "ಯಾರಿಗೂ ತಿಳಿದಿಲ್ಲದ ಜನರನ್ನು ಅವನು ಅರಸನನ್ನಾಗಿ ಮಾಡಿದ್ದು ನೀವು ನೋಡಲಿಲ್ಲವೇ?" ಅರಬ್‌ನ ಅನಕ್ಷರಸ್ಥ ಜನರು ಏನಾಗಿದ್ದರು, ಪ್ರಪಂಚದ ಮೇಲೆ ಅವರು ಆಳ್ವಿಕೆ ನಡೆಸಿದರು. "ಮತ್ತು ದೊಡ್ಡ ದೊಡ್ಡ ರಾಜ್ಯಗಳನ್ನು ಅವರ ಅಧೀನದಲ್ಲಿರಿಸಿದನು ಮತ್ತು ಗುಲಾಮರನ್ನು ರಾಜರನ್ನಾಗಿ ಮಾಡಿದನು. ಒಬ್ಬ ವ್ಯಕ್ತಿಯು ಧರ್ಮನಿಷ್ಠನಾದರೆ, ಅಲ್ಲಾಹನಿಗೆ ಸಮರ್ಪಿತನಾದರೆ ಅವನು ಜಗತ್ತಿನಲ್ಲಿ ಉನ್ನತ ಶ್ರೇಣಿಯ ಜೀವನವನ್ನು ಹೊಂದುತ್ತಾನೆ, ಆದರೆ ಅವನು ತನ್ನನ್ನು ತಾನು ನೀತಿವಂತ ಮತ್ತು ಧೈರ್ಯವಂತನಾಗಿ ತೋರಿಸಬೇಕು. ಹೃದಯವನ್ನು ಕಂಪಿಸಬಾರದು ಮತ್ತು ಅವನಲ್ಲಿ ಯಾವುದೇ ಬೂಟಾಟಿಕೆ ಮತ್ತು ಬಹುದೇವತೆಯ ಮಿಶ್ರಣ ಇರಬಾರದು. ಇಬ್ರಾಹೀಮ್ ಅಲೈಹಿಸ್ಸಲಾಮ್ ಅವರಲ್ಲಿ ಯಾವ ವೈಶಿಷ್ಟತೆ ಇತ್ತು ಅವರನ್ನು ಅಬುಲ್ ಮಿಲ್ಲತ್ ಮತ್ತು ಅಬುಲ್ ಹುನಾಫಾ ಎಂದು ಕರೆದರು ಮತ್ತು ಸರ್ವಶಕ್ತನಾದ ಅಲ್ಲಾಹನು ಅವರಿಗೆ ಎಂತಹ ಮಹಾನ್ ಅನುಗ್ರಹಗಳನ್ನು ನೀಡಿದನು ಎಂದರೆ ಅದನ್ನು ಎಣಿಸಲು ಸಾಧ್ಯವಿಲ್ಲ. ಇದು ನಿಷ್ಠೆ ಮತ್ತು ಪ್ರಾಮಾಣಿಕತೆಯಾಗಿತ್ತು.

ನೋಡಿರಿ, ಹಝ್ರತ್ ಇಬ್ರಾಹೀಂ(ಅ) ಒಂದು ದುಆವನ್ನು ಮಾಡಿದ್ದರು. ಅವರ ಸಂತಾನಗಳಲ್ಲಿ ಅರೇಬಿಯದಲ್ಲಿ ಪ್ರವಾದಿಯೊಬ್ಬರು ಆಗಮಿಸಬೇಕೆಂದಾಗಿತ್ತು ಆ ದುಆ. ಅದು ತಕ್ಷಣವೇ ಸ್ವೀಕಾರಗೊಂಡಿತೇ? ಇಬ್ರಾಹೀಂ ಅಲೈಹಿಸ್ಸಲಾಮರ ನಂತರ ಒಂದು ದೀರ್ಘ ಕಾಲದ ವರೆಗೂ ಆ ದುಆದ ಪ್ರಭಾವ ಏನಾಗಿದೆ ಎಂಬುದುರ ಬಗ್ಗೆ ಯಾರಿಗೂ ಆಲೋಚನೆ ಕೂಡ ಉಂಟಾಗಿರಲಿಲ್ಲ. ಆದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದೊಂದಿಗೆ ಆ ದುಆ ಬಹಳ ವೈಭವಶಾಲಿಯಾದ ರೀತಿಯಲ್ಲಿ ಈಡೇರಲ್ಪಟ್ಟಿತು.
(ಮಲ್‌ಫೂಝಾತ್, ಸಂಪುಟ-4, ಪುಟ-419-420, 1984 ಆವೃತ್ತಿ)

ದುಆ ಸ್ವೀಕಾರಗೊಳ್ಳಲು ದೇಹ ಮತ್ತು ಆತ್ಮದ ಸಂಬಂಧ ಹೇಗಿರಬೇಕು ಎಂಬುದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಬಾಹ್ಯವಾದ ನಮಾಝ್ ಮತ್ತು ಉಪವಾಸದೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆ ಇಲ್ಲದಿದ್ದರೆ ಅದರಲ್ಲಿ ಯಾವುದೇ ಗುಣವಿಲ್ಲ. ಯೋಗಿಗಳು ಮತ್ತು ಸನ್ಯಾಸಿಗಳು ಕೂಡ ತಮ್ಮ ಜಾಗಗಳಲ್ಲಿ ಹಿರಿದಾದ ಪರಿಶ್ರಮಗಳನ್ನು ಮಾಡುತ್ತಾರೆ. ಆದರೆ ಈ ಕಷ್ಟತೆಗಳು ಅವರಿಗೆ ಯಾವುದೇ ಪ್ರಕಾಶ ಮತ್ತು ನೆಮ್ಮದಿಯನ್ನು ನೀಡುವುದಿಲ್ಲ. ದೈಹಿಕವಾದ ಕಠಿಣ ಪರಿಶ್ರಮಗಳನ್ನು ಮಾಡುತ್ತಾರೆ ಅದಕ್ಕೆ ಅಂತರಂಗದೊಂದಿಗೆ ಬಹಳ ಕಡಿಮೆ ಸಂಬಂಧವಿರುತ್ತದೆ. ಅವರ ಆತ್ಮದ ಮೇಲೆ ಯಾವುದೇ ಪ್ರಭಾವ ಉಂಟಾಗುವುದಿಲ್ಲ. ಆದರೆ ನಿಮ್ಮ ಕುರ್ಬಾನಿಗಳ ಮಾಂಸ ಮತ್ತು ರಕ್ತ ಅಲ್ಲಾಹನಿಗೆ ತಲುಪುವುದಿಲ್ಲ, ಬದಲಾಗಿ ದೇವಭಕ್ತಿ ತಲುಪತ್ತದೆ ಎಂದು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿರುವನು. **ಲೈಂಯನಾಲಲ್ಲಾಹ ಲುಹೂಮುಹಾ ವಲಾ ದಿಮಾಉಹಾ ವಲಾಕಿನ್ ಯನಾಲುಹುತ್ತಖ್ವ ಮಿನ್‌ಕುಮ್** (ಅಲ್‌ಹಜ್ಜ್: 38) ಅಂದರೆ ಅಲ್ಲಾಹನನ್ನು ನಿಮ್ಮ ಖುರ್ಬಾನಿಯ ಮಾಂಸ ಮತ್ತು ರಕ್ತ ತಲುಪುವುದಿಲ್ಲ ಬದಲಿಗೆ ನಿಮ್ಮ ತಖ್ವ ತಲುಪುತ್ತದೆ. ಸತ್ಯದಲ್ಲಿ ಅಲ್ಲಾಹನು ಸಿಪ್ಪೆಯನ್ನು ಇಷ್ಟಪಡುವುದಿಲ್ಲ. ಬದಲಾಗಿ ತಿರುಳನ್ನು ಬಯಸುತ್ತಾನೆ. ಮಾಂಸ ಮತ್ತು ರಕ್ತ ತಲುಪುವುದಿಲ್ಲವೆಂದಾದರೆ, ಕುರ್ಬಾನಿಯ ಆವಶ್ಯಕತೆಯೇನು? ಅದೇ ರೀತಿಯಲ್ಲಿ ನಮಾಝ್ ಮತ್ತು ಉಪವಾಸ ಆತ್ಮಕ್ಕೆ ಆಗಿವೆ ಎಂದಾದರೆ, ಬಾಹ್ಯ ರೂಪದ ಆವಶ್ಯಕತೆಯೇನು ಎಂಬೀ ಪ್ರಶ್ನೆಗಳು ಏಳುತ್ತವೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿಶ್ಚಿತವಾದ ಸಂಗತಿಯೇನೆಂದರೆ, ಯಾರು ದೈಹಿಕವಾದ ಸೇವೆಗಳನ್ನು ಮಾಡುವುದಿಲ್ಲವೋ ಅವರ ಆತ್ಮಗಳು ಕೂಡ ವಿಮುಖತೆ ತೋರಿಸುತ್ತವೆ. ಅಂಥವರಲ್ಲಿ ಯಥಾರ್ಥವಾಗಿ ಬೇಕಾದ ವಿನಯ ಮತ್ತು ಆರಾಧನಾ ಭಾವ ಉಂಟಾಗುವುದಿಲ್ಲ. ಅದೇ ರೀತಿಯಲ್ಲಿ ಕೇವಲ ದೈಹಿಕ ಶ್ರಮಕ್ಕೆ ಒತ್ತುಕೊಟ್ಟು ಆತ್ಮವನ್ನು ಅದರೊಂದಿಗೆ ಸೇರಿಸದವರು ಕೂಡ ಅಪಾಯಕರವಾದ ತಪ್ಪಲ್ಲಿ ಸಿಲುಕುತ್ತಾರೆ. ದೇಹ ಮತ್ತು ಆತ್ಮದ ನಡುವೆ ಅಲ್ಲಾಹನು ಪರಸ್ಪರ ಸಂಬಂಧವನ್ನು ಇರಿಸಿದ್ದಾನೆ. ದೇಹದ ಪ್ರಭಾವ ಆತ್ಮದ ಮೇಲೆ ಉಂಟಾಗುತ್ತದೆ. ಉದಾಹರಣೆಗೆ ಒಬ್ಬ ವ್ಯಕ್ತಿ ನಾಟ್ಯವಾಗಿ ಅಳಲು ಪ್ರಯತ್ನಿಸಿದರೆ, ಅವನಿಗೆ ಅಳು ಖಂಡಿತ ಬರುವುದು. ಅದೇ ರೀತಿಯಲ್ಲಿ, ನಮಾಝ್‌ನಲ್ಲಿ ನಿಲ್ಲುವುದು, ಬಾಗುವುದು ಎಂಬೀ ಕೃತ್ಯಗಳನ್ನು ಮಾಡುವಾಗ ಅವುಗಳ ಪ್ರಭಾವ ಆತ್ಮದ ಮೇಲೂ ಆಗುತ್ತದೆ. ದೈಹಿಕವಾಗಿ ತೋರಿಸುವಷ್ಟೇ ವಿನಯವು ಆತ್ಮಕ್ಕೂ ಉಂಟಾಗುತ್ತದೆ. ಅಲ್ಲಾಹನು ಸಜದಗಳನ್ನು ಮಾತ್ರ ಸ್ವೀಕಾರ ಮಾಡುವುದಿಲ್ಲವಾದರೂ ಸಜದಕ್ಕೆ ಆತ್ಮದೊಂದಿಗೆ ಒಂದು ಸಂಬಂಧವಿರುತ್ತದೆ. ಆದ್ದರಿಂದಲೇ ನಮಾಝಿನಲ್ಲಿ ಅತ್ಯುನ್ನತವಾದ ಸ್ಥಾನ ಸಜದಕ್ಕೆ ಆಗಿದೆ. ಮನುಷ್ಯನು ತನ್ನ ವಿನಯವಂತಿಕೆಯ ಅಂತಿಮ ಸ್ಥಾನವನ್ನು ತಲುಪುವಾಗ ಸಾಷ್ಟಾಂಗವನ್ನು ಮಾಡಲು ಬಯಸುತ್ತಾನೆ. ಅವರು(ಅ) ಹೇಳುತ್ತಾರೆ, "ಈ ಸ್ಥಿತಿಯನ್ನು

ಪ್ರಾಣಿಗಳಲ್ಲಿಯೂ ಗಮನಿಸಲಾಗಿದೆ. ನಾಯಿಗಳು ಕೂಡ ತಮ್ಮ ಒಡೆಯನನ್ನು ಪ್ರೀತಿಸಿದಾಗ ಬಂದು ಆತನ ಪಾದದ ಮೇಲೆ ತಲೆಯಿಟ್ಟು ಸಜದದ ರೂಪದಲ್ಲಿ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತವೆ. ಒಟ್ಟಿನಲ್ಲಿ, ದೇಹಕ್ಕೆ ಆತ್ಮದೊಂದಿಗೆ ಒಂದು ವಿಶಿಷ್ಟವಾದ ಸಂಬಂಧವಿದೆ. ಆತ್ಮದ ಅದೇ ಸ್ಥಿತಿಗಳ ಪರಿಣಾಮವು ದೇಹದ ಮೇಲೆ ಕಾಣಿಸಿಕೊಳ್ಳುತ್ತದೆ. ಆತ್ಮವು ದುಃಖಿತವಾದಾಗ, ಅದರ ಚಿಹ್ನೆಗಳು ದೇಹದ ಮೇಲೆ ಕಾಣಿಸಿಕೊಳ್ಳುತ್ತವೆ ಮತ್ತು ಕಣ್ಣೀರು ಮತ್ತು ಮೂರ್ಛೆ ಕಾಣಿಸಿಕೊಳ್ಳುತ್ತದೆ. ಆತ್ಮದಲ್ಲಿ ದುಃಖವಿದ್ದರೆ, ಹೃದಯದಲ್ಲಿ ದುಃಖವಿದ್ದರೆ, ದೇಹವೂ ದಣಿದಿದೆ, ಆರೋಗ್ಯವು ನಿಸ್ತೇಜವಾಗಿರುತ್ತದೆ, ಅವನ ಸ್ಥಿತಿ ಏನಾಗುತ್ತಿದೆ ಎಂಬುದು ಇತರರಿಗೆ ಸ್ಪಷ್ಟವಾಗುತ್ತದೆ. ಅವರು ಯಾವುದೇ ಸಭೆಗಳಲ್ಲಿ ಕುಳಿತುಕೊಳ್ಳಲು ಇಷ್ಟಪಡುವುದಿಲ್ಲ. ಕುಳಿತುಕೊಂಡರೆ ಏನಾಯಿತು ಎಂದು ಜನ ಕೇಳುತ್ತಿರುತ್ತಾರೆ. ಅವರು(ಅ) ಹೇಳುತ್ತಾರೆ "ಆತ್ಮಕ್ಕೂ ದೇಹಕ್ಕೂ ಸಂಬಂಧವಿಲ್ಲದಿದ್ದರೆ ಹೀಗೇಕೆ ಆಗುತ್ತದೆ." ರಕ್ತಪರಿಚಲನೆಯು ಹೃದಯದ ಒಂದು ಕಾರ್ಯವಾಗಿದೆ, ಆದರೆ ಹೃದಯವು ದೇಹದ ನೀರಾವರಿಗೆ ಒಂದು ಎಂಜಿನ್ ಆಗಿದೆ ಎಂಬುದರಲ್ಲಿ ಸಂದೇಹವಿಲ್ಲ." ರಕ್ತ ಚಲಿಸುವುದು ಹೃದಯದ ಮೂಲಕ ಆದರೆ ಒಂದು ಎಂಜಿನ್ ರೂಪದಲ್ಲಿ ಹೃದಯವು ಚಲಿಸುತ್ತದೆ. "ಅದರ ಚಲನವಲನದಿಂದಲೇ ಎಲ್ಲವೂ ಸಾಧ್ಯವಾಗಿದೆ." ಎಲ್ಲವೂ ಹೃದಯದ ಪಂಪ್‌ನಿಂದ ಸಂಭವಿಸುತ್ತದೆ."

"ಹೀಗಾಗಿ, ಭೌತಿಕ ಮತ್ತು ಆಧ್ಯಾತ್ಮಿಕ ವ್ಯವಸ್ಥೆಗಳು ಒಟ್ಟಿಗೆ ನಡೆಯುತ್ತವೆ." ಕೆಲವೊಮ್ಮೆ ಹೃದಯವು ವಿಸ್ತರಿಸುತ್ತದೆ ಮತ್ತು ನಂತರ ಸಂಕುಚಿತಗೊಳ್ಳುತ್ತದೆ. ಹಿಗ್ಗುತ್ತದೆ ಮತ್ತು ಸಂಕುಚಿತಗೊಳ್ಳುತ್ತದೆ. ದೈಹಿಕ ಮತ್ತು ಆಧ್ಯಾತ್ಮಿಕ ಸಂಬಂಧಗಳು ಸಹ ಸಮಾನವಾಗಿವೆ ಎಂದು ಹೇಳಲಾಗುತ್ತದೆ. ಆದ್ದರಿಂದ, ಆತ್ಮದಲ್ಲಿ ನಮ್ರತೆ ಮತ್ತು ಅಗತ್ಯತೆ ಇದ್ದಾಗ, ಅದರ ಚಿಹ್ನೆಗಳು ದೇಹದಲ್ಲಿ ಸ್ವಯಂಚಾಲಿತವಾಗಿ ಪ್ರಕಟವಾಗುತ್ತವೆ ಮತ್ತು ದೇಹದ ಮೇಲೆ ವಿಭಿನ್ನ ಪರಿಣಾಮವಿದ್ದರೆ, ಆತ್ಮವೂ ಅದರಿಂದ ಪ್ರಭಾವಿತವಾಗಿರುತ್ತದೆ. ಆದ್ದರಿಂದ, ನೀವು ಪ್ರಾರ್ಥನೆಯಲ್ಲಿ ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ ನಿಂತಾಗ, ನಿಮ್ಮ ಅಸ್ತಿತ್ವದೊಂದಿಗೆ ನೀವು ನಮ್ರತೆ ಮತ್ತು ಉದ್ದೇಶವನ್ನು ತೋರಿಸಬೇಕು.

ಆ ಸಮಯದಲ್ಲಿ ಅದು ಒಂದು ರೀತಿಯ ವಿರೋಧವಾಗಿರುತ್ತದೆ." ಅಂದರೆ ಮನಸ್ಸು ಒಪ್ಪದಿದ್ದರೂ ಬಲವಂತದಿಂದ ವಿನಯವನ್ನು ತೋರಿಸುವುದು ವಿರೋಧವೇ ಆಗಿದೆ ಅಲ್ಲವೇ ಆದರೂ ನೀವು ಅದನ್ನು ತೋರಿಸಬೇಕು. ಆದರೆ ಕ್ರಮೇಣ ಅದರ ಪರಿಣಾಮವು ಶಾಶ್ವತವಾಗಿರುತ್ತದೆ." ಆತ್ಮ ಮತ್ತು ದೇಹ ಎರಡೂ ಒಟ್ಟಿಗೆ ಕೆಲಸ ಮಾಡಲು ಪ್ರಾರಂಭಿಸುತ್ತವೆ ಮತ್ತು ಅವರು ಹೇಳಿದರು: "ಮತ್ತು ನಿಜವಾಗಿಯೂ ಆತ್ಮದಲ್ಲಿ ವಿನಯಶೀಲತೆ ಮತ್ತು ನಮ್ರತೆ ಹುಟ್ಟಲು ಪ್ರಾರಂಭಿಸುತ್ತದೆ." (ಮಲ್‌ಫೂಝಾತ್, ಸಂಪುಟ–4, ಪುಟ–420–422, 1984 ಆವೃತ್ತಿ) ಮತ್ತು ಈ ಸ್ಥಿತಿಯು ಉದ್ಭವಿಸಲು ಪ್ರಾರಂಭಿಸಿದಾಗ, ಒಬ್ಬ ವ್ಯಕ್ತಿಯನ್ನು ಮತ್ತೆ ನಮಾಝಿನಲ್ಲಿ ಅಭಿರುಚಿ ಪಡೆಯಲು ಪ್ರಾರಂಭಿಸುತ್ತಾನೆ. ಅವನು ಕೇವಲ ತನ್ನ ಸ್ವಂತ ಇಚ್ಛೆಗಾಗಿ ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಗೆ ಹೋಗುವುದಿಲ್ಲ, ಬದಲಿಗೆ ಅವನು ಸರ್ವಶಕ್ತನಾದ ಅಲ್ಲಾಹನಿಗೆ ಸಂಬಂಧಿಸಿದಂತೆ ಮತ್ತು ಅಲ್ಲಾಹನ ಸಂಪ್ರೀತಿಗಾಗಿ ನಮಾಝ್‌ನ ಕಡೆ ಗಮನಹರಿಸುತ್ತಾನೆ.

ನಂತರ ಮತ್ತಷ್ಟು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮಾಝಿನಲ್ಲಿ ಅನುಭೂತಿ ಲಭಿಸುತ್ತಿಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ಅನುಭೂತಿ ಎಂಬುದು ನಮ್ಮ ನಿಯಂತ್ರಣದಲ್ಲಿಲ್ಲವೆಂದು ಅವರಿಗೆ ಗೊತ್ತಿಲ್ಲ. ಅದಲ್ಲದೇ ಆ ರುಚಿಯ ಮಟ್ಟವು ಬೇರೆಯೇ ಆಗಿದೆ. ಕೆಲವೊಮ್ಮೆ ವ್ಯಕ್ತಿಯೊಬ್ಬನು ಕಠಿಣ ಮಟ್ಟದ ಕಷ್ಟದಲ್ಲಿ ಸಿಲುಕುತ್ತಾನೆ. ಆದರೆ ಆ ಕಷ್ಟತೆಯನ್ನು ಕೂಡ ಅನುಭೂತಿಯೆಂದು ಭಾವಿಸುತ್ತಾನೆ. ಒಬ್ಬ ವ್ಯಕ್ತಿಯು ತೀವ್ರವಾದ ನೋವಿನಿಂದ ಬಳಲುತ್ತಿದ್ದಾನೆ ಆದರೆ ಅವನು ಈ ನೋವನ್ನು ಸಂತೋಷವೆಂದು ಪರಿಗಣಿಸುತ್ತಾನೆ." ಹಝ್ರತ್ ಮಸೀಹ್ ಮೌಊದ್(ಅ)ರವರು ಈ ಮಾತನ್ನು ಹೇಳುತ್ತಿರುವಾಗ ಆ ಕಾಲದಲ್ಲಿ ಟ್ರಾನ್ಸ್‌ವಾಲ್‌ನಲ್ಲಿ ಜನರು ಸ್ವತಂತ್ರದ ಹೋರಾಟ ನಡೆಸುತ್ತಿದ್ದರು. ಅವರು(ಅ) ಹೇಳುತ್ತಾರೆ "ಟ್ರಾನ್ಸ್‌ವಾಲ್‌ನಲ್ಲಿ ಹೋರಾಡುತ್ತಿರುವ ಜನರನ್ನು ನೋಡಿ ಈ ಹೋರಾಟದಲ್ಲಿ ಜನರ ಜೀವ ಹೋಗುತ್ತಿದೆ ಅವರ ಹೆಂಡತಿಯರು ವಿದವೇಯಾಗುತ್ತಿದ್ದಾರೆ ಮತ್ತು ಮಕ್ಕಳು ನಿರ್ಗತಿಕರಾಗುತ್ತಿದ್ದಾರೆ ಆದರೂ ಅವರು ಈ ತ್ಯಾಗಗಳಲ್ಲಿ ಅನುಭೂತಿ ಹಾಗೂ ಸಂತೋಷದೊಂದಿಗೆ ಜೀವಗಳನ್ನು ಅರ್ಪಿಸುತ್ತಿದ್ದಾರೆ." ಅವರು ರಾಷ್ಟಕ್ಕಾಗಿ ತ್ಯಾಗವನ್ನು ನಿಡುತ್ತಿದ್ದಾರೆ.

"ಅವರನ್ನು ರಾಷ್ಟ್ರೀಯ ಹೆಮ್ಮೆ ಮತ್ತು ನಿಷ್ಠೆಯೊಂದಿಗೆ ಸಾವಿನ ಮುಖಕ್ಕೆ ಒಯ್ಯಲಾಗುತ್ತದೆ. ಮತ್ತೊಂದೆಡೆ, ರಾಷ್ಟ್ರೀಯ ಗುರಿಗಳು ಒಂದಾಗಿರುವಾಗ ರಾಷ್ಟವು ಅವರ ಪ್ರಯತ್ನಗಳು ಮತ್ತು ತ್ಯಾಗಗಳನ್ನು ಶ್ಲಾಘಿಸುತ್ತಿದೆ. ಒಂದು ಕಡೆ ತ್ಯಾಗ ಮಾಡುವುದು ಮತ್ತೊಂದು ಕಡೆ ಅವರನ್ನು ಪ್ರೋತ್ಸಾಹಿಸುವುದು, ಗೌರವಿಸುವುದು. ಹಾಗಾದರೆ ಅವರ ಶ್ರಮಕ್ಕೆ ಬೆಲೆ ಏಕೆ? ಅವರ ನೋವು ಮತ್ತು ಸಂಕಟದ ಕಾರಣ ಅವರ ಶ್ರಮಕ್ಕೆ ಬೆಲೆ ಇರುವುದು. ಅವರು ಬಳಲುತ್ತಿರುವ ಕಾರಣ ಅವರು ಮೌಲ್ಯಯುತರಾಗಿದ್ದಾರೆ." ಅವರ ಶ್ರಮ ಮತ್ತು ಸಮರ್ಪಣೆಯಿಂದಾಗಿ ಅವರು ಮೌಲ್ಯಯುತರಾಗಿದ್ದಾರೆ.

ಸಕಲ ಸವಿ ಮತ್ತು ಆರಾಮ ದುಃಖದ ನಂತರವೇ ಬರುತ್ತವೆ. ಆದ್ದರಿಂದಲೇ **ಇನ್ನ ಮಅಲ್ ಉಸ್ರಿ ಯುಸ್ರ** ಎಂಬ ನಿಯಮವನ್ನು ಪವಿತ್ರ ಖುರ್‌ಆನ್ ಮುಂದಿರಿಸಿದೆ. ಎಂದರೆ ಕಷ್ಟತೆಯೊಂದಿಗೆ ಸುಖವಿದೆ. ಯಾವುದಾದರೂ ಸುಖದ ಮುಂಚೆ ಕಷ್ಟತೆ ಇರದಿದ್ದರೆ ಸುಖ ಸುಖವಾಗಿ ಅನುಭವವಾಗುವುದಿಲ್ಲ. ಅದೇ ರೀತಿಯಲ್ಲಿ ನಮಗೆ ಆರಾಧನೆಯ ಅನುಭೂತಿ ಲಭಿಸುವುದಿಲ್ಲವೆಂದು ಹೇಳುವವರು ತಮ್ಮ ಆರಾಧನೆಗಾಗಿ ಎಷ್ಟು ದುಃಖ ಮತ್ತು ಕಷ್ಟತೆಗಳನ್ನು ಸಹಿಸುತ್ತಾರೆ ಎಂದು ಮೊದಲು ಯೋಚಿಸಬೇಕಾಗಿದೆ.

ಎಷ್ಟರ ಮಟ್ಟಿಗೆ ಮನುಷ್ಯನು ಕಷ್ಟತೆಗಳನ್ನು ಸಹಿಸುತ್ತಾನೋ ಅದೇ ತನ್ನ ರೂಪವನ್ನು ಬದಲಾಯಿಸಿದ ನಂತರ ಅನುಭೂತಿಯಾಗುತ್ತದೆ. ಮನುಷ್ಯನು ತನ್ನನ್ನು ತಾನೇ ಅನಾವಶ್ಯಕವಾದ ಕಷ್ಟತೆಗಳಿಗೆ ಹಾಕುಕೊಂಡು ಉಂಟಾಗುವ ಅಥವಾ ತನಗೆ ಎತ್ತಲು ಸಾಧ್ಯವಲ್ಲದಂತಹ ಕಷ್ಟತೆಗಳನ್ನು ಎತ್ತಿ ಉಂಟಾಗುವ ದುಃಖಗಳ ಬಗ್ಗೆ ನಾನು ಹೇಳುತ್ತಿಲ್ಲ. (ಮಲ್‌ಫೂಝಾತ್, ಸಂಪುಟ–4, ಪುಟ–422–423, 1984 ಆವೃತ್ತಿ) ಬದಲಾಗಿ ನಾನು ಹೇಳಿದುದರ ಉದ್ದೇಶವೇನೆಂದರೆ, ಸಮಯಕ್ಕೆ ಸರಿಯಾಗಿ ನಮಾಝ್‌ಗಳನ್ನು ಅವುಗಳ ನಿಬಂಧನೆಗಳನ್ನು ಪಾಲಿಸುತ್ತಾ ನಿರ್ವಹಿಸಲು ಪ್ರಯತ್ನಿಸಬೇಕು. ನಿದ್ರೆಯನ್ನೂ ತಮ್ಮ ವ್ಯಾಪಾರವನ್ನೂ ತ್ಯಾಗಮಾಡಿಕೊಂಡು ಸಮಯನಿಷ್ಠೆಯೊಂದಿಗೆ ಅನುಷ್ಠಿಸಲು ಪ್ರಯತ್ನಿಸಬೇಕು. ಅಲ್ಲಾಹನ ಮೇಲಿನ ಭಯವನ್ನು ಹೃದಯದಲ್ಲಿ ಉಂಟುಮಾಡಬೇಕು.

ಕೆಲವರು ಸ್ವತಃ ಯಾವುದೇ ರೀತಿಯ ಕಷ್ಟತೆಗಳನ್ನು ಸಹಿಸಲು ತಯಾರಾಗುವುದಿಲ್ಲ ಮತ್ತು ಇತರರಿಂದ ದುಆ ಮಾಡಿಸುವುದರಿಂದ ಕಾರ್ಯ ಸಾಧಿಸಬಹುದು ಎಂದು ಭಾವಿಸುತ್ತಾರೆ. ಅವರನ್ನು ಕೆಲವೊಮ್ಮೆ ಕೇಳಿದಾಗ ಅವರು ನಿಯಮಿತವಾಗಿ ಐದು ಹೊತ್ತು ನಮಾಝನ್ನು ನಿರ್ವಹಿಸುವುದಿಲ್ಲ ಎಂಬ ಉತ್ತರ ಬರುತ್ತದೆ. ಒಮ್ಮೆ ಒಬ್ಬ ಮಗನು ತನ್ನ ತಂದೆಗಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ದುಆಗಾಗಿ ಹೇಳಿದನು ಮತ್ತು ಈ ದುಆ ಯಾವುದೇ ವೈಯಕ್ತಿಕ ಉದ್ದೇಶಕ್ಕಾಗಿ ಇರಲಿಲ್ಲ ಬದಲಿಗೆ ಅವನ ಧರ್ಮಕ್ಕಾಗಿ ಇತ್ತು. ಇದಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ಸ್ವತಃ ಎಚ್ಚರಿಕೆಯಿಂದ ಪ್ರಾರ್ಥಿಸಿರಿ. ನೀವು ಗಮನವಿಟ್ಟು ಪ್ರಾರ್ಥಿಸುತ್ತೀರಿ. ತಂದೆಯ ಪ್ರಾರ್ಥನೆಯು ಮಗನಿಗಾಗಿ ಮತ್ತು ಮಗನ ಪ್ರಾರ್ಥನೆಯು ತಂದೆಗಾಗಿ ಅಂಗೀಕರಿಸಲ್ಪಡುತ್ತದೆ. ನೀವೂ ಶ್ರದ್ಧೆಯಿಂದ ದುಆ ಮಾಡಿದರೆ ಆ ಸಮಯದಲ್ಲಿ ನಮ್ಮ ಪ್ರಾರ್ಥನೆಯೂ ಸಹ ಪರಿಣಾಮಕಾರಿಯಾಗುತ್ತದೆ. (ಮಲ್‌ಫೂಝಾತ್, ಸಂಪುಟ–4, ಪುಟ–187–188, 1984 ಆವೃತ್ತಿ) ನೀವು ಸ್ವತಃ ದುಆ ಮಾಡಿದಾಗ ನಮ್ಮ ದುಆ ಸಹ ಪರಿಣಾಮಕಾರಿಯಾಗುತ್ತದೆ. ಇಲ್ಲದಿದ್ದರೆ, ಯಾವುದೂ ಇರುವುದಿಲ್ಲ. ಆದ್ದರಿಂದ, ದುಆ ಮಾಡಿಸುವವರು ಇತರರ ದುಆವಿನ ಮೇಲೆ ಅವಲಂಬಿತರಾಗಬೇಡಿ ಬದಲಿಗೆ ಸ್ವತಃ ಗಮನವಿಟ್ಟು ದುಆ ಮಾಡಿ.

ಆರಾಧನೆಯಲ್ಲಿ ಅನುಭೂತಿಯನ್ನು ಗಳಿಸುವ ವಿಧಾನವನ್ನು ಕುರಿತು ಹೇಳುತ್ತಾರೆ: "ನೆನಪಿಡಿ ಮನುಷ್ಯ ಅಲ್ಲಾಹನಿಗಾಗಿ ತನ್ನ ಪ್ರೀತಿಯ ವಸ್ತುಗಳನ್ನು ಅದು ಅಲ್ಲಾಹನ ದೃಷ್ಟಿಯಲ್ಲಿ ಅಸಹ್ಯಕರ ಹಾಗೂ ಆತನ ಉದ್ದೇಶಕ್ಕೆ ವಿರುದ್ಧವಾದದನ್ನು ತ್ಯಜಿಸಿ ತನ್ನನ್ನು ತಾನೇ ದುಃಖಕ್ಕೆ ಒಳಪಡಿಸುತ್ತಾನೆ, ಹೀಗೆ ಅಂತಹ ನೋವುಗಳನ್ನು ಹೊಂದಿರುವ ದೇಹವು ಆತ್ಮದ ಮೇಲೂ ಪರಿಣಾಮ ಬೀರುತ್ತದೆ. ಮತ್ತು ಅವನು ಸಹ ಇದರಿಂದ ಪ್ರಭಾವಿತನಾಗಿ ಅದರೊಂದಿಗೆ ಪರಿಪೂರ್ಣ ವಿನಶೀಲತೆಯೊಂದಿಗೆ ಅಸಹಾಯಕನಾಗಿ ಅಲ್ಲಾಹನ ಆಸ್ಥಾನದಲ್ಲಿ ರೂಪಾಂತರವಾಗಿ ಬೀಳುತ್ತದೆ. ಹೀಗೆ ಸಂಕಟಗಳನ್ನು ಅನುಭವಿಸಿದರೆ, ಅಲ್ಲಾಹನಿಗಾಗಿ ಕೆಲವು ವಸ್ತುಗಳನ್ನು ತ್ಯಜಿಸಿದರೆ ಆತ್ಮದ ಮೇಲೆ ಅದರ ಪ್ರಭಾವ ಬೀರುತ್ತದೆ ಹೀಗೆ ಆತ್ಮದ ಮೇಲೆ ಪ್ರಭಾವ ಬೀರಿದಾಗ ನಮಾಝಿನಲ್ಲಿ, ಸಜದದಲ್ಲಿ, ರುಕುವಿನಲ್ಲಿ ಆ ಆತ್ಮವು ಅಲ್ಲಾಹನ ಆಸ್ತಾನದಲ್ಲಿ ಬೀಳುತ್ತದೆ. "ಆರಾಧನೆಯಲ್ಲಿ ಅನುಭೂತಿಯನ್ನು ಪಡೆಯುವ ಮಾರ್ಗ ಇದಾಗಿದೆ."

ಅವರು ಹೇಳಿದರು: "ತಮ್ಮ ಆರಾಧನೆಯಲ್ಲಿ ಅನುಭೂತಿಯನ್ನು ಅನುಭವಿಸುವ ಮಾರ್ಗವೆಂದರೆ ಹಾಡು ಅಥವಾ ವಾದ್ಯವನ್ನು ನುಡಿಸುವುದು ಮತ್ತು ಈದು ಆರಾಧನೆ ಎಂದು ಭಾವಿಸುತ್ತಾರೆ." ಅವರು ಕಣ್ಣು ಮುಚ್ಚಿ ಧ್ಯಾನಕ್ಕೆ ಹೋದರೆ ಇದು ಆರಾಧನೆ ಎಂದು ಭಾವಿಸುತ್ತಾರೆ ಅಥವಾ ಹಾಡು ಕೇಳಿದ ನಂತರ ಈದೇ ಆರಾಧನೆ ಮಾಡಲಾಗಿದೆ ಎಂದು ಭಾವಿಸುತ್ತಾರೆ. ಅವರು ಹೇಳುತ್ತಾರೆ: "ಇದರಿಂದ ಮೋಸ ಹೋಗಬೇಡಿ. ಈ ವಿಷಯಗಳು ದೇಹಕ್ಕೆ ಅನುಭುತಿಯನ್ನು ನೀಡಬಹುದು ಆದರೆ ಆತ್ಮಕ್ಕೆ ಅದರಲ್ಲಿ ಯಾವುದೇ ಅನುಭೂತಿ ಇಲ್ಲ. ಇದರಿಂದಾಗಿ ಆತ್ಮದಲ್ಲಿ ವಿನಯ ಮತ್ತು ನಮ್ರತೆಯ ಸಾರವನ್ನು ಸೃಷ್ಟಿಸುವುದಿಲ್ಲ ಮತ್ತು ಆರಾಧನೆಯ ಮೂಲ ಉದ್ದೇಶವು ಮರೆಮಾಚಿಹೋಗುತ್ತದೆ. ಇದು ಇತರ ಧರ್ಮೀಯರು ಅರ್ಥಮಾಡಿಕೊಳ್ಳಲು ಸಾಧ್ಯವಾಗದ ಸೂಕ್ಷ್ಮ ವಿಷಯವಾಗಿದೆ ಏಕೆಂದರೆ ಅವರು ಆರಾಧನೆಯ ನಿಜವಾದ ಉದ್ದೇಶ ಮತ್ತು ಗುರಿಯನ್ನು ಅರ್ಥಮಾಡಿಕೊಳ್ಳಲಿಲ್ಲ." (ಮಲ್‌ಫೂಝಾತ್, ಸಂಪುಟ–4, ಪುಟ–423–424, 1984 ಆವೃತ್ತಿ)

ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಅವರ ನಿಷ್ಠೆ ಹಾಗೂ ಅವರು ಸರ್ವಶಕ್ತನಾದ ಅಲ್ಲಾಹನಿಗಾಗಿ ಕಷ್ಟತೆಗಳನ್ನು ಅನುಭವಿಸುವುದು ಹಾಗೂ ಅದರ ಫಲವಾಗಿ ಸರ್ವಶಕ್ತನಾದ ಅಲ್ಲಾಹನು ಅವರೊಂದಿಗೆ ನಡೆಸಿಕೊಂಡ ರೀತಿಯ ಕುರಿತುಯ ಉದಾಹರಣೆಯನ್ನು ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳುತ್ತಾರೆ: "ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿ ಪಡೆಯುವ ಮಾರ್ಗ ಅಲ್ಲಾಹನೊಂದಿಗೆ ಪ್ರಾಮಾಣಿಕತೆಯನ್ನು ತೋರಿಸುವುದಾಗಿದೆ.

ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಸಾಧಿಸಿದ ಸಾಮೀಪ್ಯಕ್ಕೆ ಇದು ಕಾರಣವಾಗಿತ್ತು. ಹೀಗಾಗಿ ಅಲ್ಲಾಹನು ಪವಿತ್ರ ಖುರ್‌ಆನನಲ್ಲಿ ನುಡಿಯುತ್ತಾನೆ: **ವ ಇಬ್ರಾಹೀಮಲ್ಲಝೀ ವಫ್ಫಾ** (ಅನ್ನಜಮ್:38) ಅಂದರೆ ಇಬ್ರಾಹೀಮ್ ಯಾರಂದರೆ ಅವರು ನಿಷ್ಠೆಯನ್ನು ತೋರಿಸಿದ ಇಬ್ರಾಹೀಮ್ ಆಗಿದ್ದಾರೆ. ಅಲ್ಲಾಹನಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ತೋರಿಸಲು ಮರಣದ ಅಗತ್ಯವಿದೆ. ಎಲ್ಲಿಯವರೆಗೆ ಮನುಷ್ಯ ಪ್ರಪಂಚ ಹಾಗೂ ಪ್ರಾಪಂಚಿಕ ಭೂಗಗಳನ್ನು ತ್ಯಜಿಸಲು ಸಿದ್ಧನಾಗಿರುವುದಿಲ್ಲವೊ ಮತ್ತು ಅಲ್ಲಾಹನಿಗಾಗಿ ಪ್ರತಿ ಅವಮಾನ, ಕಷ್ಟ ಮತ್ತು ತೊಂದರೆಗಳನ್ನು ಸ್ವೀಕರಿಸಲು ಸಿದ್ಧವಾಗಿಲ್ಲದಿದ್ದರೆ ಈ ಗುಣ ತನ್ನಲ್ಲಿ ಸೃಷ್ಟಿಸಿಕೊಳ್ಳಲು ಸಾಧ್ಯವಿಲ್ಲ. ವಿಗ್ರಹಾರಾಧನೆ ಎಂದರೆ ಒಬ್ಬ ವ್ಯಕ್ತಿಯು ಮರ ಅಥವಾ ಕಲ್ಲನ್ನು ಪೂಜಿಸುವುದು ಮಾತ್ರವಲ್ಲ, ಸರ್ವಶಕ್ತನಾದ ಅಲ್ಲಾಹನ ಸಾಮೀಪ್ಯವನ್ನು ತಡೆಯುವ ಮತ್ತು ಅದಕ್ಕಿಂತ ಮೊದಲು ಇರುವ ಎಲ್ಲವೂ ಸಹ ವಿಗ್ರಹವಾಗಿದೆ ಮತ್ತು ಒಬ್ಬ ವ್ಯಕ್ತಿಯು ಅಂತಹ ವಿಗ್ರಹಗಳನ್ನು ತನ್ನೊಳಗೆ ಇಟ್ಟುಕೊಳ್ಳುತ್ತಾನೆ ಮತ್ತು ಅವನು ವಿಗ್ರಾಹಾರಾಧನೆ ಮಾಡುತ್ತಿದ್ದಾನೆ ಎಂದು ಅವನಿಗೆ ತಿಳಿಯುವುದಿಲ್ಲ. ಹೀಗಾಗಿ, ಎಲ್ಲಿಯವರೆಗೆ ಆತನು ಸರ್ವಶಕ್ತನಾದ ಅಲ್ಲಾಹನಿಗಾಗಿ ಮಾತ್ರ ನಿಷ್ಠನಾಗಿರುವುದಿಲ್ಲವೊ ಮತ್ತು ಅಲ್ಲಾಹನ ಮಾರ್ಗದಲ್ಲಿ ಪ್ರತಿಯೊಂದು ಕಷ್ಟವನ್ನು ಸಹಿಸಿಕೊಳ್ಳಲು ಸಿದ್ಧನಾಗಿರುವುದಿಲ್ಲವೊ ಪ್ರಾಮಾಣಿಕತೆ ಮತ್ತು ವಿನಯಶೀಲತೆಯ ಗುಣಗಳು ಅವನಲ್ಲಿ ಸೃಷ್ಟಿಸಿಕೊಳ್ಳುವುದು ಕಷ್ಟ. ಇಬ್ರಾಹೀಮ್‌ಅಲೈಹಿಸ್ಸಲಾಮ್ ಅವರಿಗೆ ಈ ಬಿರುದು ಹಾಗೆ ಸುಮನ್ನೆ ಪಡೆಯಲಿಲ್ಲ. ಇಲ್ಲ. **ವ ಇಬ್ರಾಹೀಮಲ್ಲಝೀ ವಫ್ಫಾ** ಎಂಬ ಧ್ವನಿ ಯಾವಾಗ ಕೇಳಿಸಿತು ಎಂದರೆ ಅವರು ತನ್ನ ಪುತ್ರನನ್ನು ವಧಿಸಲು ಸಿದ್ದರಿದ್ದರು. ಸರ್ವಶಕ್ತನಾದ ಅಲ್ಲಾಹನು ಕ್ರಿಯೆಯನ್ನು ಬಯಸುತ್ತಾನೆ ಮತ್ತು ಕ್ರಿಯೆಯಿಂದಲೇ ಸಂತೋಷಪಡುತ್ತಾನೆ. ಮತ್ತು ಕ್ರಿಯೆಯು ಕಷ್ಟತೆಗಳಿಂದ ಬರುತ್ತದೆ ಆದರೆ ಒಬ್ಬ ವ್ಯಕ್ತಿಯು ಅಲ್ಲಾಹನಿಗಾಗಿ ಕಷ್ಟತೆಗಳನ್ನು ಅನುಭವಿಸಲು ಸಿದ್ಧನಾಗಿದ್ದಾಗ, ಸರ್ವಶಕ್ತನಾದ ಅಲ್ಲಾಹನು ಅವನನ್ನು ನೋಯಿಸುವುದಿಲ್ಲ. ನೋಡಿರಿ! ಇಬ್ರಾಹೀಮ್ ಅಲೈಹಿಸ್ಸಲಾಮ್ ರವರು ಸರ್ವಶಕ್ತನಾದ ಅಲ್ಲಾಹನ ಆಜ್ಞೆಯನ್ನು ಪಾಲಿಸಲು ತನ್ನ ಮಗನನ್ನು ಬಲಿಕೊಡಲು ಬಯಸಿದಾಗ ಮತ್ತು ಎಲ್ಲಾ ಸಿದ್ಧತೆಗಳನ್ನು ಮಾಡಿದಾಗ, ಸರ್ವಶಕ್ತನಾದ ಅಲ್ಲಾಹನು ತನ್ನ ಮಗನನ್ನು ರಕ್ಷಿಸಿದನು. ಅವರನ್ನು ಬೆಂಕಿಗೆ ಎಸೆಯಲಾಯಿತು ಆದರೆ ಬೆಂಕಿಯು ಅವರ ಮೇಲೆ ಪರಿಣಾಮ ಬೀರಲಿಲ್ಲ.

ನೀವು ಅಲ್ಲಾಹನ ಮಾರ್ಗದಲ್ಲಿ ಕಷ್ಟಗಳನ್ನು ಅನುಭವಿಸಲು ಸಿದ್ಧರಿದ್ದರೆ, ಅಲ್ಲಾಹನು ನಿಮ್ಮನ್ನು ಕಷ್ಟತೆಗಳಿಂದ ರಕ್ಷಿಸುತ್ತಾನೆ. ದೇಹವು ನಮ್ಮ ಕೈಯಲ್ಲಿದೆ ಆದರೆ ಆತ್ಮ ಇಲ್ಲ. ಆದ್ದರಿಂದ, ದೇಹವು ಆತ್ಮದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಎಂದಿಗೂ ಭಾವಿಸಬಾರದು. ಮಾನವನು ಎಷ್ಟು ಕ್ರಿಯೆಗಳನ್ನು ಮಾಡುತ್ತಾನೋ ಅಷ್ಟೇ ಈ ಸಂಯೋಜಿತ ರೂಪದಿಂದ ಮಾಡಲಾಗುತ್ತದೆ. ಅಂದರೆ ದೇಹ ಮತ್ತು ಆತ್ಮ ಎರಡನ್ನೂ ಸಂಯೋಜಿಸಿ. ದೇಹ ಮತ್ತು ಆತ್ಮ ವಿಭಿನ್ನ ವಿಭಿನ್ನ ಓಳಿತು ಮತ್ತು ಕೆಟ್ಟದನ್ನು ಮಾಡುವುದಿಲ್ಲ. ಈ ಕಾರಣಕ್ಕಾಗಿಯೇ ಇಬ್ಬರ ಸಂಬಂಧವನ್ನು ಶಿಕ್ಷ ಹಾಗೂ ಪ್ರತಿಫಲಕ್ಕಾಗಿ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಕೆಲವರು ಈ ರಹಸ್ಯವನ್ನು ಅರ್ಥಮಾಡಿಕೊಳ್ಳದ ಕಾರಣ, ಮುಸ್ಲಿಮರ ಸ್ವರ್ಗವು ಭೌತಿಕವಾಗಿದೆ ಎಂದು ಅವರು ಆಕ್ಷೇಪಿಸುತ್ತಾರೆ. ಆದರೂ ದೇಹವು ಕ್ರಿಯೆಗಳ ಸಂದರ್ಭದಲ್ಲಿ ದೇಹವು ಒಟ್ಟಿಗೆ ಇದ್ದಾಗ, ಶಿಕ್ಷೆಯ ಸಮಯದಲ್ಲಿ ಅದನ್ನು ಏಕೆ ಬೇರ್ಪಡಿಸಬೇಕು ಎಂದು ಅವರಿಗೆ ತಿಳಿದಿಲ್ಲ? ಇದರ ಉದ್ದೇಶವೇನೆಂದರೆ ಇಸ್ಲಾಂ ಧರ್ಮವು ಬಹಳ ತೀವ್ರ ಅಥವಾ ಬಹಳ ಸುಲಭ ಈ ಎರಡು ವಿಧಾನಗಳನ್ನು ಬಿಟ್ಟು ಮಿತವಾದ ಮಾರ್ಗವನ್ನು ನೀಡಿದೆ. ಇವೆರಡೂ ಅಪಾಯಕಾರಿ ಅಂಶಗಳಾಗಿದ್ದು, ಅವುಗಳನ್ನು ತಪ್ಪಿಸಬೇಕು. ದೇಹಕ್ಕೆ ಪ್ರತ್ಯೇಕವಾದ ಚಿತ್ರಹಿಂಸೆಯು ಏನನ್ನೂ ಉಂಟುಮಾಡುವುದಿಲ್ಲ ಮತ್ತು ವಿಶ್ರಾಂತಿ ಪಡೆಯಲು ಏನೂ ಉತ್ಪತ್ತಿಯಾಗುವುದಿಲ್ಲ.(ಮಲ್‌ಫೂಝಾತ್, ಸಂಪುಟ-4, ಪುಟ-429-430, 1984 ಆವೃತ್ತಿ) ಕಷ್ಟತೆಗಳಲ್ಲಿ ಹಾಕುವುದರಿಂದ ದೇಹಕ್ಕೆ ಯಾವುದೇ ಪ್ರಯೋಜನವಾಗುವುದಿಲ್ಲ ಮತ್ತು ಕೇವಲ ವಿಶ್ರಾಂತಿಯಿಂದಲೂ ಸಹ ಏನು ಪ್ರಯೋಜನವಿಲ್ಲ. ಆತ್ಮ ಮತ್ತು ದೇಹವನ್ನು ಒಂದುಗೂಡಿಸುವುದು ಮುಖ್ಯ.

ದುಆವಿನ ಕಾಲದಲ್ಲಿಯೂ ಪರೀಕ್ಷೆಗಳು ಬರುತ್ತವೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಝ್ರತ್ ಮೂಸ ಅಲೈಹಿಸ್ಸಲಾಮ್ ಅವರ ಸಮೂದಾಯದ ಮೇಲೆ ಎಂತಹ ಪರೀಕ್ಷೆಗಳ ಬಂದವು ಮತ್ತು ಅದು ಎಷ್ಟು ವಿಲಂಬವಾಯಿತು ಎಂಬುದರ ಬಗ್ಗೆ ಉದಾಹರಣೆಯನ್ನು ನೀಡುತ್ತ ಹೇಳುತ್ತಾರೆ: ಪ್ರತಿಯೊಂದು ಕೆಲಸಕ್ಕೂ ಒಂದು ಸಮಯವಿದೆ ಮತ್ತು ನಿಷ್ಠಾವಂತರು ಅದಕ್ಕಾಗಿ ಕಾಯುತ್ತಾರೆ. ಯಾರು ಕಾಯುವುದಿಲ್ಲ ಮತ್ತು ಫಲಿತಾಂಶವು ಹೊರಬರಬೇಕೆಂದು ಉತ್ಸುಕರಾಗಿ ಬಯಸುತ್ತಾನೊ ಅವನು ಆತುರನಾಗಿದ್ದಾನೆ ಮತ್ತು ಅದರ ಉದ್ದೇಶವು ಗಳಿಸಲಿಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಪ್ರಕಾರ, ದುಆವಿನ ಸಮಯದಲ್ಲಿ, ಹೆಚ್ಚಿನ ಪರೀಕ್ಷೆಗಳು ಪರೀಕ್ಷೆಗಳಾಗಿ ಬರುವುದು ಸಹ ಸಾಧ್ಯ ಮತ್ತು ಸಂಭವಿಸುತ್ತದೆ.

ಇಸ್ರಾಈಲ್ಯರನ್ನು ಫಿರ್‌ಔನ್‌ನ ಗುಲಾಮಗಿರಿಯಿಂದ ಸ್ವತಂತ್ರಗೊಳಿಸಲು ಹಝ್ರತ್ ಮೂಸಾ(ಅ) ಅವರು ಆಗಮಿಸಿದಾಗ ಈಜಿಪ್ಟ್‌ನಲ್ಲಿ ಅರ್ಧ ದಿನ ಇಟ್ಟಿಗೆಗಳನ್ನು ಹಾಕುವ ಮತ್ತು ಅರ್ಧ ದಿನ ತನ್ನ ಕೆಲಸವನ್ನು ಮಾಡುವ ಕೆಲಸವನ್ನು ನೀಡಲಾಯಿತು. ಅರ್ಧ ದಿನ ಅವರಿಗೆ ರಜೆ ಇತ್ತು. ಅರ್ಧ ದಿನ ಫಿರ್‌ಔನ್‌ಗಾಗಿ ಕೆಲಸ ಮಾಡಬೇಕಾಗಿತ್ತು. "ಆದರೆ ಯಾವಾಗ ಹಝ್ರತ್ ಮೂಸಾ(ಅ) ಅವರು ಅವರನ್ನು ರಕ್ಷಿಸಲು ಪ್ರಯತ್ನಿಸಿದರು ಆಗ ದುಷ್ಟರ ದುಷ್ಟತನದಿಂದ ಇಸ್ರಾಈಲ್ಯರ ಕೆಲಸವು ಹೆಚ್ಚಾಯಿತು. ಅವರಿಗೆ ಅರ್ಧ ದಿನ ಇಟ್ಟಿಗೆಯನ್ನು ತಯಾರಿಸಿರಿ ಮತ್ತು ಅರ್ಧ ದಿನ ಹುಲ್ಲು ತನ್ನಿ ಎಂದು ಆದೇಶಿಸಲಾಯಿತು." ಅದು ಸಹ ಫಿರ್‌ಔನ್‌ನ ಕೆಲಸವೇ ಆಗಿರುತ್ತದೆ. ಅವರಿಗಾಗಿ ಸಮಯವಿರುವುದಿಲ್ಲ. "ಹಝ್ರತ್ ಮೂಸಾ(ಅ) ಅವರು ಈ ಆಜ್ಞೆಯನ್ನು ಸ್ವೀಕರಿಸಿದಾಗ ಮತ್ತು ಅದನ್ನು ಇಸ್ರಾಈಲ್ಯರಿಗೆ ಈ ಆಜ್ಞೆಯನ್ನು ತಿಳಿಸಿದಾಗ ಅವರು ಬಹಳ ಕೋಪಗೊಂಡರು" ಅವರ ಸಮೂದಾಯವು "ಅವರು ಹೇಳಿದರು: ಮೂಸಾ! ನಾವು ಅನುಭವಿಸಿದ ನೋವನ್ನು ದೇವರು ನಿಮಗೆ ನೀಡಲಿ. ಅದಲ್ಲದೆ ಅವರು ಇನ್ನೂ ಹೆಚ್ಚಾಗಿ ಮೂಸಾರನ್ನು ಶಪಿಸಿದರು ಆದರೆ ಮೂಸಾ(ಅ) ಅವರಿಗೆ ತಾಳ್ಮೆಯಿಂದಿರಿ ಎಂದು ಹೇಳಿದರು. ಈ ಸಂಪೂರ್ಣ ಕಥೆಯು ತೌರಾತ್‌ನಲ್ಲಿ ಬರೆಯಲ್ಪಟ್ಟಿದೆ. ಮೂಸಾ(ಅ) ಅವರನ್ನು ಸಮಾಧಾನಪಡಿಸಿದಾಗ, ಅವರು ಇನ್ನಷ್ಟು ಕೋಪಗೊಂಡರು. "ಅಂತಿಮವಾಗಿ ಅವರೆಲ್ಲರು ಈಜಿಪ್ಟ್‌ನಿಂದ ಓಡಿಹೋಗಲು ಪ್ರಸ್ತಾಪಿಸಲಾಯಿತು" ಮತ್ತು ಅಲ್ಲಿಂದ ವಲಸೆ ಹೋಗಲು ಪ್ರಸ್ತಾಪಿಸಲಾಯಿತು "ಮತ್ತು ಈಜಿ[ಟ್‌ನವರು ತಮ್ಮ ಬಟ್ಟೆ, ಪಾತ್ರೆ ಇತ್ಯಾದಿಗಳನ್ನು ತೆಗೆದುಕೊಂಡು ಬಂದರು." ಹಝ್ರತ್ ಮೂಸಾ(ಅ) ತಮ್ಮ ಸಮೂದಾಯದವರನ್ನು ಕರೆದುಕೊಂಡು ಹೊರಬಂದಾಗ ಫಿರ್‌ಔನ್ ತನ್ನ ಸೈನ್ಯವನ್ನು ತೆಗೆದುಕೊಂಡು ಅವರನ್ನು ಹಿಂಬಾಲಿಸಿದನು. ಬನೀ ಇಸ್ರಾಈಲ್‌ನವರು ಫಿರ್‌ಔನ್‌ನ ಸೈನ್ಯವನ್ನು ಅವರ ಸಮೀಪ ಕಂಡಾಗ ಅವರು ತುಂಬಾ ಚಿಂತಿತರಾದರು. ಆದುದರಿಂದ, ಪವಿತ್ರ ಖುರ್‌ಆನಿನಲ್ಲಿ ಆ ಸಮಯದಲ್ಲಿ ಅವರು ಕೂಗಿ ಹೇಳಿದರು **ಇನ್ನಾ ಲಮುದ್ರಕೂನ್** ಓ ಮೂಸಾ! ನಾವು ಸಿಕ್ಕಿಬಿದ್ದೆವು ಎಂದು ಹೇಳಿದರು. ಆದರೆ ಭವಿಷ್ಯವಾಣಿಯ ಕಣ್ಣಿನಿಂದ ಅಂತ್ಯವನ್ನು ಕಂಡ ಮೂಸಾ ಅಲೈಹಿಸ್ಸಲಾಮ್ ಅವರಿಗೆ ಅದೇ ಉತ್ತರವನ್ನು ನೀಡಿದರು. **ಕಲ್ಲಾ ಇನ್ನ ಮಇಯ ರಬ್ಬಿ ಸಯಹ್ದೀನ್** ಖಂಡಿತವಾಗಿಯೂ ಇಲ್ಲ. ನನ್ನ ಪ್ರಭು ನನ್ನೊಂದಿಗಿದ್ದಾನೆ.

ಈಜಿಪ್ಟ್‌ನಲ್ಲಿ ನಮಗೆ ಸಮಾಧಿಗಳಿರಲಿಲ್ಲವೇ ಎಂದು ಅವರು ಕೇಳಿದರು ಮತ್ತು ಹಿಂದೆ ಫಿರ್‌ಔನ್‌ನ ಸೈನ್ಯ ಮತ್ತು ಮುಂದೆ ನೈಲ್ ನದಿ ಇದ್ದುದರಿಂದ ಈ ಚಿಂತೆ ಹುಟ್ಟಿಕೊಂಡಿತು ಎಂದು ತೌರಾತಿನಲ್ಲಿ ಬರೆಯಲಾಗಿದೆ, ಅವರು ಹೇಳುತ್ತಿದ್ದರು ನಾವು ಈಜಿಪ್ಟ್‌ನಲ್ಲಿರುತ್ತಿದ್ದರೆ ಅಲ್ಲಿಯೂ ನಾವು ಸಾಯಬೇಕಾಯಿತು. ಅವರನ್ನೂ ಅಲ್ಲಿಯೇ ಸಮಾಧಿ ಮಾಡಲಾಗುತ್ತಿತ್ತು. ಆದರೆ ಈಗ ಬಹಳ ತೊಂದರೆಯಲ್ಲಿ ಸಿಲುಕಿದ್ದೇವೆ ಏಕೆಂದರೆ ಮುಂದೆ ನದಿ ಇದೆ ಮತ್ತು ನಮ್ಮೆಲ್ಲರನ್ನು ಕೊಲ್ಲುವ ಸೈನ್ಯವಿದೆ. ಅವರು ತುಂಬಾ ಚಿಂತಿತರಾಗಿದ್ದರು. ಹಿಂದೆ ಹೋಗುವುದಾಗಲೀ, ಮುಂದೆ ಹೋಗುವುದಾಗಲೀ ತಪ್ಪಿಸಿಕೊಳ್ಳಲು ಆಗುವುದಿಲ್ಲ ಎಂದು ನೋಡುತ್ತಿದ್ದರು. ಆದರೆ ಸರ್ವಶಕ್ತನಾದ ಅಲ್ಲಾಹನು ಅವರು ನೈಲ್ ನದಿಯ ಮೂಲಕ ದಾರಿ ಕಂಡುಕೊಂಡರು ಮತ್ತು ಎಲ್ಲಾ ಇಸ್ರಾಈಲ್‌ನ ಮಕ್ಕಳು ಸರಾಗವಾಗಿ ದಾಟಿದರು, ಆದರೆ ಫಿರ್‌ಔನ್‌ನ ಸೈನ್ಯವು ಮುಳುಗಿತು ...... ಅಂತಹ ಸಮಯದಲ್ಲಿ ಅಲ್ಲಾಹನು ಅವರಿಗೆ ಒಂದು ಮಾರ್ಗವನ್ನು ಸೃಷ್ಟಿಸಿದ ಮಹಾನ್ ಪವಾಡವಾಗಿತ್ತು ಮತ್ತು ಧರ್ಮನಿಷ್ಠರೊಂದಿಗೆ ಸಂಭವಿಸುತ್ತದೆ. ಪ್ರತಿಯೊಂದು ಸಂಕಟದಿಂದ "ಪ್ರತಿ ಕಷ್ಟಗಳಿಂದ" ಅವರಿಗೆ ಮೋಕ್ಷವಿದೆ ಮತ್ತು ಮಾರ್ಗವನ್ನು ಪಡೆಯುತ್ತಾರೆ. **ಯಜ್‌ಅಲ್ಲಹೂ ಮಖ್ರಜ** (ಅಲ್-ತಲಾಕ್: 3) ಈ ಕಾರಣಕ್ಕಾಗಿ, ದುಆವಿನ ಸಮಯ ಮತ್ತು ಅದನ್ನು ಸ್ವೀಕರಿಸುವ ಸಮಯದ ನಡುವೆ, ಆಗಾಗ್ಗೆ ಪ್ರಯೋಗಗಳ ಮೇಲೆ ಪ್ರಯೋಗಗಳಿವೆ, ಮತ್ತು ಬೆನ್ನನ್ನು ಮುರಿಯುವ ಪ್ರಯೋಗಗಳೂ ಇವೆ, ಆದರೆ ದೃಢವಾದ ನಿಷ್ಠಾವಂತರು ಈ ಪರೀಕ್ಷೆಗಳು ಮತ್ತು ಕ್ಲೇಶಗಳನ್ನು ಜಯಿಸುತ್ತಾನೆ. ಕಷ್ಟಗಳಲ್ಲಿಯೂ ಅವನು ತನ್ನ ಭಗವಂತನ ಅನುಗ್ರಹದ ಪರಿಮಳವನ್ನು ಅನುಭವಿಸುತ್ತಾನೆ ಮತ್ತು ಅವನ ನಂತರ ವಿಜಯವು ಬರುತ್ತದೆ ಎಂದು ಹತಾಶೆಯ ಕಣ್ಣುಗಳಿಂದ ನೋಡುತ್ತಾನೆ.

ಈ ಪ್ರಯೋಗಗಳು ಬರಲು ಒಂದು ಕಾರಣವೆಂದರೆ ದುಆವಿನ ಉತ್ಸಾಹವು ಹೆಚ್ಚಾಗುತ್ತದೆ. ಏಕೆಂದರೆ ಆತಂಕಗಳು ಹೆಚ್ಚಾದಷ್ಟೂ ಆತ್ಮದಲ್ಲಿ ಶ್ರದ್ಧೆಯು ವರ್ಧಿಸುತ್ತದೆ ಮತ್ತು ದುಆವಿನ ಸ್ವೀಕಾರಕ್ಕೆ ಇದು ಒಂದು ಕಾರಣ. ಸರ್ವಶಕ್ತನಾದ ಅಲ್ಲಾಹನು ಪ್ರಾರ್ಥನೆಗಳನ್ನು ಸ್ವೀಕರಿಸಲು ಬಯಸುತ್ತಾನೆ. ನನ್ನ ಪ್ರಾರ್ಥನೆಗಳನ್ನು ಸ್ವೀಕರಿಸುವುದಿಲ್ಲ ಎಂದು ಎಂದಿಗೂ ಭಾವಿಸಬಾರದು. (ಮಲ್‌ಫೂಝಾತ್, ಸಂಪುಟ-4, ಪುಟಗಳು 433-435, 1984 ಆವೃತ್ತಿ)

ಅಲ್ಲಾಹನು ನಮಗೆ ಏನು ನೀಡಿರುವನು, ಧರ್ಮದ ಪ್ರಯೋಜನವೇನು, ಧರ್ಮ ಮನುಷ್ಯನನ್ನು ಸೋಮಾರಿಯನ್ನಾಗಿ ಮಾಡುತ್ತದೆ, ಧರ್ಮ ಕಾಲ್ಪನಿಕ ಸಂಗತಿಗಳನ್ನು ಮೆದುಳಿನಲ್ಲಿ ಉಂಟುಮಾಡುತ್ತದೆ ಎಂಬೀ ಸಂಗತಿಗಳನ್ನು ಹೃದಯಗಳಿಗೆ ಹಾಕುವುದರ ಕಡೆಗೆ ಇತ್ತೀಚಿನ ದಿನಗಳಲ್ಲಿ ಧರ್ಮದ ಮತ್ತು ದೇವನ ವಿರೋಧಿಗಳ ಹಾಗೂ ನಾಸ್ತಿಕತೆಯನ್ನು ಬೆಂಬಲಿಸುವವರ ಗಮನ ಉಂಟಾಗಿದೆ. ಇಂತಹ ಸ್ಥಿತಿಯಲ್ಲಿ ಅಲ್ಲಾಹನೊಂದಿಗೆ ಸುದೃಢವಾಧ ಸಂಬಂಧ ಸ್ಥಾಪಿಸುವುದು ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ಜಮಾಅತಿನವರು ತಮ್ಮ ವಿಶ್ವಾಸ ವರ್ಧಿಸುವ ಆವಶ್ಯಕತೆಯಿದೆ. ಅವರಲ್ಲಿ ಅಲ್ಲಾಹನ ಮೇಲೆ ನಿಜವಾದ ದೃಢವಿಶ್ವಾಸ ಮತ್ತು ಪರಿಜ್ಞಾನ ಉಂಟಾಗಬೇಕು. ಸತ್ಕರ್ಮಗಳಲ್ಲಿ ಆಲಸ್ಯ ಮತ್ತು ಸೋಮಾರಿತನ ಇರಬಾರದು. ಏಕೆಂದರೆ, ಸೋಮಾರಿತನವಿದ್ದರೆ

*(ಪುಟ 12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ಇದು ಎಂತಹ ಅನುಗ್ರಹೀತ ಕಾಲಘಟ್ಟವಾಗಿದೆ ಎಂದರೆ, ಇಂತಹ ಆಪತ್ಕಾರಿ ದಿನಗಳಲ್ಲಿ ಅಲ್ಲಾಹನು ಕೇವಲ ತನ್ನ ಕೃಪೆಯಿಂದ ಹಝ್ರ್ರತ್ ಪೈಗಂಬರ್(ಸ)ರ ಶ್ರೇಷ್ಠತೆಯನ್ನು ಪ್ರಕಟಿಸಲಿಕ್ಕಾಗಿ ಅದೃಶ್ಯವಾಗಿ ಇಸ್ಲಾಮಿನ ಸಹಾಯ ಮಾಡುವ ಏರ್ಪಾಡು ಮಾಡುವ ಅನುಗ್ರಹೀತ ಉದ್ದೇಶವನ್ನು ಇರಿಸುತ್ತಾ ಒಂದು ಜಮಾಅತನ್ನು ಸ್ಥಾಪಿಸಿರುವನು." (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ಹಝ್ರ್ರತ್ ಮಸೀಹ್ ಮೌಊದ್(ಅ) ತನ್ನ ಆಗಮನದ ಉದ್ದೇಶವನ್ನು ವಿವರಿಸುತ್ತಾ ಹೇಳುತ್ತಾರೆ: ಹಝ್ರ್ರತ್ ಪೈಗಂಬರ್(ಸ)ರ ನಷ್ಟಹೊಂದಿರುವ ಮಹಿಮೆಯನ್ನು ಪುನಃ ಸ್ಥಾಪಿಸಲು ಮತ್ತು ಪವಿತ್ರ ಖುರ್‌ಆನಿನ ಸತ್ಯತೆಯನ್ನು ಲೋಕಕ್ಕೆ ತೋರಿಸಲು ನನ್ನನ್ನು ಕಳುಹಿಸಲಾಗಿದೆ.

ಲೋಕದ ವಿವಿಧ ದೇಶಗಳಲ್ಲಿ ಇಂದು ಜಲ್ಸಗಳಲ್ಲಿ ಅಹ್ಮದಿಯರು ಭಾಗವಹಿಸುತ್ತಿರುವುದು ಕೂಡ ಈ ದೃಷ್ಟಾಂತಗಳಲ್ಲಿ ಒಂದು ದೃಷ್ಟಾಂತವಾಗಿದೆ.

ಯಥಾರ್ಥವಾದ ಏಕದೇವ ವಿಶ್ವಾಸವನ್ನು ಸ್ಥಾಪಿಸಲು ಅಲ್ಲಾಹನ ಪ್ರೀತಿಯಿಂದ ಪೂರ್ಣವಾದ ಪಾಲನ್ನು ಪಡೆಯಬೇಕು. ಕೃತ್ಯರೂಪದ ಪಾಲು ಇರುವ ತನಕ ಈ ಪ್ರೀತಿ ಪರಿಪೂರ್ಣವಾಗುವುದಿಲ್ಲ. ಬಾಯಿಮಾತಿನಿಂದ ಇದು ಸಾಬೀತಾಗುವುದಿಲ್ಲ.

ಅಲ್ಲಾಹನ ಮಾರ್ಗದಲ್ಲಿ ತಮ್ಮ ಜೀವಿತವನ್ನು ಸಮರ್ಪಿಸಬೇಕು. ಎಂದರೆ ಎಲ್ಲದಕ್ಕಿಂತ ಪ್ರಾಮುಖ್ಯ ಅಲ್ಲಾಹನಿಗೆ ಆಗಿರಬೇಕು. ಅವನ ಆಜ್ಞೆಗಳು ಅತ್ಯಂತ ಪ್ರಧಾನವಾಗಿರಬೇಕು. ಅವನು ಕಳುಹಿಸಿದ ಧರ್ಮಕ್ಕೆ ಎಲ್ಲಕ್ಕಿಂತ ಆದ್ಯತೆ ನೀಡಬೇಕು.

ಇದೇ ಇಸ್ಲಾಮಾಗಿದೆ. ಇದೇ ಉದ್ದೇಶಕ್ಕಾಗಿ ಅಲ್ಲಾಹನು ನನ್ನನ್ನು ಕಳುಹಿಸಿರುವನು. ಯಾರು ಈಗ ಈ ಚಿಲುಮೆಯ ಸಮೀಪಕ್ಕೆ ಬರುವುದಿಲ್ಲವೋ ಅವನು ನತದೃಷ್ಟನು.

ನಿಮ್ಮಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆ ಇಲ್ಲದಿದ್ದರೆ, ನೀವು ಸುಳ್ಳುಗಾರರಾಗಿ ಉಳಿಯುತ್ತೀರಿ ಮತ್ತು ಸರ್ವಶಕ್ತನಾದ ಅಲ್ಲಾಹನ ಮುಂದೆ ನೀತಿವಂತರಾಗಲು ಸಾಧ್ಯವಿಲ್ಲ ಎಂದು ನೀವು ನೆನಪಿನಲ್ಲಿಡಬೇಕು.

ನೆನಪಿಡಬೇಕಾದ ಸಂಗತಿಯೇನೆಂದರೆ, ಹಿಂದಿನ ದೈವಿಕ ಗ್ರಂಥಗಳು ಮತ್ತು ಪ್ರವಾದಿಗಳ ಮೇಲೆ ಪವಿತ್ರ ಖುರ್‌ಆನ್ ಔದಾರ್ಯವನ್ನು ಮಾಡಿದೆ. ಕಥೆಯ ರೂಪದಲ್ಲಿದ್ದ ಅವುಗಳ ಪಾಠಗಳಿಗೆ ಅಧ್ಯಾಪನೆಗಳ ರೂಪವನ್ನು ನೀಡಿದೆ. ನಾನು ಸತ್ಯವಾಗಿಯೂ ಹೇಳುತ್ತೇನೆ: ಪವಿತ್ರ ಖುರ್‌ಆನ್ ಪಠಿಸುವ ತನಕ ಯಾವನೇ ವ್ಯಕ್ತಿ ಆ ಕಥೆಗಳಿಂದ ಮುಕ್ತಿಯನ್ನು ಗಳಿಸಲಾರನು. ಏಕೆಂದರೆ ಪವಿತ್ರ ಖುರ್‌ಆನ್ ಮಾತ್ರವೇ ತೀರ್ಪುದಾಯಕ ವಚನವಾಗಿದೆ ಎಂಬುದು ಅದರ ಮಹತ್ವವಾಗಿದೆ. ಪವಿತ್ರ ಖುರ್‌ಆನ್ ಅಪ್ಪಟ ಪ್ರಕಾಶ, ಯುಕ್ತಿ ಮತ್ತು ಜ್ಞಾನವಾಗಿದೆ ಎಂದು ಅಲ್ಲಾಹನು ಹೇಳಿದ ರೀತಿಯಲ್ಲೇ ನಾವು ತೋರಿಸಲು ಬಯಸುತ್ತೇವೆ ಎಂಬುದರಿಂದಲೇ ನಮ್ಮ ಎದುರಾಳಿಗಳು ನಮ್ಮನ್ನು ವಿರೋಧಿಸುವುದಲ್ಲಿ ತೀವ್ರತೆ ತೋರಿಸುತ್ತಾರೆ. ಪವಿತ್ರ ಖುರ್‌ಆನನ್ನು ಬಹಳವಾಗಿ ಒಂದು ತತ್ವಜ್ಞಾನವೆಂದು ಅರಿತುಕೊಂಡು ಓದಿರಿ.

**ಜಲ್ಸಾದ ದಿನಗಳ ಸಂದರ್ಭದಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳ ಬೆಳಕಿನಲ್ಲಿ ಅವರ(ಅ) ಆಗಮನದ ಧ್ಯೇಯೋದ್ದೇಶಗಳ ಮತ್ತು ಅಹ್ಮದಿಯಾ ಜಮಾಅತ್ತಿನ ಸ್ಥಾಪನೆಯ ಉದ್ದೇಶಗಳ ಈಮಾನ್ ವರ್ಧಕ ಪ್ರಸ್ತಾವನೆ**

ಮೂರು ದಿವಂಗತರಾದ ಗೌರವಾನ್ವಿತ ಫಝ್ಲುಲ್ ಅಹ್ಮದ್ ಡೋಗರ್ ಸಾಹಿಬ್, ಗೌರವಾನ್ವಿತ ಮಲಿಕ್ ಮನ್ಸೂರ್ ಅಹ್ಮದ್ ಸಾಹಿಬ್ ಉಮರ್ ಮತ್ತು ಗೌರವಾನ್ವಿತ ಇಸಾ ಜೌಫ್ ಸಾಹಿಬ್ (ಗ್ಯಾಂಬಿಯಾದ ಮುಬಲ್ಲಿಗ್) ಅವರ ಸದ್ಗುಣಗಳ ಪ್ರಸ್ತವನೆ ಹಾಗೂ ನಮಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23–12–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದಿನಿಂದ ಖಾದಿಯಾನ್ ಮತ್ತು ಆಫ್ರಿಕದ ಕೆಲವು ದೇಶಗಳಲ್ಲಿ ಜಲ್ಸಸಾಲಾನಗಳು ಆರಂಭವಾಗುತ್ತಿವೆ. ಅಲ್ಲಾಹನು ಪ್ರತಿಯೊಂದು ದೇಶದ ಜಲ್ಸಗಳನ್ನು ಎಲ್ಲ ವಿಧದಲ್ಲೂ ಅನುಗ್ರಹೀತಗೊಳಿಸಲಿ. ಜಲ್ಸದ ಕೊನೆಯ ದಿನವಾದ ರವಿವಾರದಂದು ಖಾದಿಯಾನಿನ ಜಲ್ಸವನ್ನು ಸಂಬೋಧಿಸಿ ನನ್ನ ಭಾಷಣವಿರುವುದು. ಅದರಲ್ಲಿ ಇತರ 8 ದೇಶಗಳು ಸಹ ಭಾಗಿಯಾಗುವುವು. ಈ ಎಲ್ಲ ದೇಶಗಳನ್ನು ಎಂ.ಟಿ.ಎ.ಯ ಮೂಲಕ ನೇರವಾಗಿ ಒಂದು ಸೇರಿಸಲು ಪ್ರಯತ್ನಿಸಲಾಗುವುದು. ಇಂದು ಆ ದೇಶಗಳಲ್ಲಿ ಎಲ್ಲರೂ ಒಂದೆಡೆ ಒಟ್ಟು ಸೇರಿಕೊಂಡು ಖುತ್ಬ ಆಲಿಸುತ್ತಿರಬಹುದು. ಆದ್ದರಿಂದ ಇಂತಹ ವಾತಾವರಣದಲ್ಲಿ ಹಝ್ರ್ರತ್ ಮಸೀಹ್ ಮೌಊದ್(ಅ)ರ ಮಾತಿನಲ್ಲೇ ಅವರ ಆಗಮನದ ಮತ್ತು ಜಮಾಅತಿನ ಉದ್ದೇಶವನ್ನು ವಿವರಿಸುವುದು ಸಮಂಜಸವೆಂದು ನನಗೆ ಅನಿಸಿತು. ಈ ಕುರಿತು ಅವರು ಅನೇಕ ಉಪದೇಶಗಳನ್ನು ನೀಡಿರುವರು.

ಅನೇಕ ನವ ಅಹ್ಮದಿಯರು ಮತ್ತು ಅಹ್ಮದಿಯರ ಹೊಸ ಪೀಳಿಗೆ ಈ ಜಲ್ಸಗಳಲ್ಲಿ ಭಾಗಿಯಾಗುವರು. ಆದ್ದರಿಂದ ಈ ದಿನಗಳಲ್ಲಿ ತಮ್ಮ ನಂಬಿಕೆ, ದೃಢವಿಶ್ವಾಸ, ಪ್ರಾಮಾಣಿಕತೆ ಮತ್ತು ನಿಷ್ಠೆ ವರ್ಧಿಸಲು ಹಾಗೂ ಅಲ್ಲಾಹನ ಸಹಾಯವನ್ನು ಬೇಡುತ್ತಾ ಹಝ್ರ್ರತ್ ಮಸೀಹ್ ಮೌಊದ್(ಅ)ರ ಆವಿರ್ಭಾವ ಮತ್ತು ನಮ್ಮ ಹೊಣೆಗಾರಿಕೆಗಳ ಅರಿವು ಗಳಿಸಲು ಈ ಮಾತುಗಳನ್ನು ಅವರು ಅರಿಯಬೇಕು.

ಅಹ್ಮದಿಯಾ ಜಮಾಅತಿನ ಉದ್ದೇಶವೇನು ಮತ್ತು ಈ ಕಾಲದಲ್ಲಿ ಇದರ ಸ್ಥಾಪನೆಯ ಆವಶ್ಯಕತೆಯೇನು ಎಂಬುದರ ಬಗ್ಗೆ ಹಝ್ರ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇದು ಎಂತಹ ಅನುಗ್ರಹೀತ ಕಾಲಘಟ್ಟವಾಗಿದೆ ಎಂದರೆ, ಇಂತಹ ಆಪತ್ಕಾರಿ ದಿನಗಳಲ್ಲಿ ಅಲ್ಲಾಹನು ಕೇವಲ ತನ್ನ ಕೃಪೆಯಿಂದ ಹಝ್ರ್ರತ್ ಪೈಗಂಬರ್(ಸ)ರ ಶ್ರೇಷ್ಠತೆಯನ್ನು ಪ್ರಕಟಿಸಲಿಕ್ಕಾಗಿ ಅದೃಶ್ಯವಾಗಿ ಇಸ್ಲಾಮಿನ ಸಹಾಯ ಮಾಡುವ ಏರ್ಪಾಡು ಮಾಡುವ ಅನುಗ್ರಹೀತ ಉದ್ದೇಶವನ್ನು ಇರಿಸುತ್ತಾ ಒಂದು ಜಮಾಅತನ್ನು ಸ್ಥಾಪಿಸಿರುವನು. ಇಷ್ಟು ಹೆಚ್ಚಾಗಿ ಹಝ್ರ್ರತ್ ಪೈಗಂಬರ್(ಸ)ರನ್ನು ಅವಹೇಳನ ಮಾಡಿದಂತಹ ಮತ್ತು ನಿಂದಿಸಿದಂತಹ ಹಾಗೂ ಪವಿತ್ರ ಖುರ್‌ಆನನ್ನು ಅಪಮಾನಿಸಿದಂತಹ ಯಾವುದಾದರೂ ಕಾಲಘಟ್ಟವು ದಾಟಿ ಹೋಗಿದೆಯೇ ಎಂದು ಇಸ್ಲಾಮಿನ ಬಗ್ಗೆ ಹೃದಯಗಳಲ್ಲಿ ನೋವನ್ನು ಇರಿಸುವವರು ತಿಳಿಸಲಿ. ಹಝ್ರ್ರತ್ ಪೈಗಂಬರ್(ಸ)ರ ಗೌರವ ಕಾಪಾಡುವುದು ಅಲ್ಲಾಹನಗೆ ಇಷ್ಟವಾಗಿರಲಿಲ್ಲವೇ? ಇಷ್ಟೆಲ್ಲ ಅವಹೇಳನಕಾರಿ ಮಾತುಗಳ ನಂತರವೂ ಯಾವುದಾದರೂ ಆಧ್ಯಾತ್ಮಿಕ ಜಮಾಅತನ್ನು ಸ್ಥಾಪಿಸುವುದು ಮತ್ತು ಇಸ್ಲಾಮಿನ

ಈ ಎದುರಾಳಿಗಳ ಬಾಯಿ ಮುಚ್ಚಿಸಿಕೊಂಡು ಹಝ್ರತ್ ಪೈಗಂಬರ್(ಸ)ರ ಮಹಿಮೆ ಮತ್ತು ಪರಿಶುದ್ಧತೆಯನ್ನು ಲೋಕದಲ್ಲಿ ಹರಡುವುದು ಅಗತ್ಯವಾಗಿರಲಿಲ್ಲವೇ? ಸತ್ಯದಲ್ಲಿ ಅಲ್ಲಾಹನು ಮತ್ತು ಅವನ ಮಲಕುಗಳು ಹಝ್ರತ್ ಪೈಗಂಬರ್(ಸ)ರ ಮೇಲೆ ದುರೂದ್ ಪ್ರಾರ್ಥನೆ ಮಾಡುತ್ತಾರೆ. ಒಟ್ಟಿನಲ್ಲಿ ಅದನ್ನು ಪ್ರಕಟಿಸಲಿಕ್ಕಾಗಿ ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿರುವನು. (ಮಲ್ಫೂಝಾತ್, ಸಂಪುಟ–5, ಪುಟ–13–14, 1984 ಆವೃತ್ತಿ)

ಆದ್ದರಿಂದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಿರುವ ಮತ್ತು ಈ ಜಮಾಅತಿನಲ್ಲಿ ಸೇರಿರುವ ನಾವು ನಮ್ಮ ಅವಸ್ಥೆಗಳನ್ನು ಸರಿಪಡಿಸುವುದು ಮತ್ತು ಹಝ್ರತ್ ಪೈಗಂಬರ್(ಸ)ರ ಮೇಲೆ ದುರೂದ್ ಪ್ರಾರ್ಥನೆ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ಈ ದಿನಗಳಲ್ಲಿ ವಿಶೇಷವಾಗಿ ದುರೂದ್ ಪ್ರಾರ್ಥನೆಯ ಬಗ್ಗೆ ಗಮನವಿರಬೇಕು.

ನಾವು ಹಝ್ರತ್ ಪೈಗಂಬರ್(ಸ)ರ ಮೇಲೆ ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡುವವರಾದರೆ ಹಝ್ರತ್ ಪೈಗಂಬರ್(ಸ)ರ ಗೌರವ ಮತ್ತು ಮಹಿಮೆಯನ್ನು ಸ್ಥಾಪಿಸಲಿಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ವಿವರಿಸಿದ ಉದ್ದೇಶವನ್ನು ಈಡೇರಿಸಲು ನಮಗೆ ಸಾಧ್ಯವಾಗುವುದು.

ಹಝ್ರತ್ ಮಸೀಹ್ ಮೌಊದ್(ಅ) ತನ್ನ ಆಗಮನದ ಉದ್ದೇಶವನ್ನು ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ನಷ್ಟಹೊಂದಿರುವ ಮಹಿಮೆಯನ್ನು ಪುನಃ ಸ್ಥಾಪಿಸಲು ಮತ್ತು ಪವಿತ್ರ ಖುರ್‌ಆನಿನ ಸತ್ಯತೆಯನ್ನು ಲೋಕಕ್ಕೆ ತೋರಿಸಲು ನನ್ನನ್ನು ಕಳುಹಿಸಲಾಗಿದೆ. ಈ ಎಲ್ಲ ಕೆಲಸಗಳು ನಡೆಯುತ್ತಿವೆ. ಆದರೆ ಯಾರ ಕಣ್ಣುಗಳಲ್ಲಿ ಮರೆಯಿದೆಯೋ ಅವರು ಅದನ್ನು ಕಾಣಲಾರರು. ಸತ್ಯದಲ್ಲಿ ಈಗ ಈ ಜಮಾಅತ್ ಸೂರ್ಯನ ಹಾಗೆ ಬೆಳಗುತ್ತಿದೆ. ಇದರ ದೃಷ್ಟಾಂತಗಳು ಮತ್ತು ಕುರುಹುಗಳಿಗೆ ಎಷ್ಟು ಹೆಚ್ಚು ಜನರು ಸಾಕ್ಷಿಗಳಾಗಿರುವವರು ಎಂದರೆ, ಅವರನ್ನೆಲ್ಲ ಒಂದೆಡೆ ಒಟ್ಟು ಸೇರಿಸಿದರೆ ಅಷ್ಟು ಹಿರಿದಾದ ಸೇನೆ ಭೂಮಿಯಲ್ಲಿ ಯಾವನೇ ಅರಸನಿಗೆ ಇರದು.

ಲೋಕದ ವಿವಿಧ ದೇಶಗಳಲ್ಲಿ ಇಂದು ಜಲ್ಸಗಳಲ್ಲಿ ಅಹ್ಮದಿಯರು ಭಾಗವಹಿಸುತ್ತಿರುವುದು ಕೂಡ ಈ ದೃಷ್ಟಾಂತಗಳಲ್ಲಿ ಒಂದು ದೃಷ್ಟಾಂತವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಜಮಾಅತಿನ ಸತ್ಯತೆಯ ಎಷ್ಟೆಲ್ಲ ವಿಧಗಳು ಇವೆ ಎಂದರೆ, ಅವೆಲ್ಲವನ್ನು ವಿವರಿಸುವುದು ಸುಲಭವಲ್ಲ. ಇಸ್ಲಾಮನ್ನು ಅತಿಯಾಗಿ ನಿಂದಿಸಲಾಗಿತ್ತು. ಆದ್ದರಿಂದ ಅಲ್ಲಾಹನು ಆ ನಿಂದನೆಯ ಪ್ರಮಾಣದಲ್ಲೇ ಈ ಜಮಾಅತಿನ ಮಹಿಮೆಯನ್ನು ತೋರಿಸಿರುವನು.
(ಮಲ್ಫೂಝಾತ್, ಸಂಪುಟ–5, ಪುಟ–14, 1984 ಆವೃತ್ತಿ)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಕಾಲಘಟ್ಟ ಕೂಡ ಆಧ್ಯಾತ್ಮಿಕ ಹೋರಾಟದ ಕಾಲಘಟ್ಟವಾಗಿದೆ. ಶೈತಾನಿನ ವಿರುದ್ಧವಾಗಿ ಯುದ್ಧ ಆರಂಭವಾಗಿದೆ. ಶೈತಾನನು ತನ್ನ ಎಲ್ಲ ಅಸ್ತ್ರಗಳ ಮತ್ತು ಕುತಂತ್ರಗಳ ಜೊತೆಗೆ ಇಸ್ಲಾಮಿನ ಕೋಟೆಯ ಮೇಲೆ ದಾಳಿ ನಡೆಸುತ್ತಿದೆ ಮತ್ತು ಇಸ್ಲಾಮನ್ನು ಪರಾಜಿತಗೊಳಿಸಲು ಬಯಸುತ್ತಿದೆ. ಆದರೆ ಅಲ್ಲಾಹನು ಈಗ ಶೈತಾನನ ಕೊನೆಯ ಯುದ್ಧದಲ್ಲಿ ಆತನನ್ನು ಸದಾ ಕಾಲಕ್ಕೆ ಪರಾಜಿತಗೊಳಿಸಲಿಕ್ಕಾಗಿ ಈ ಜಮಾಅತನ್ನು ಸ್ಥಾಪಿಸಿರುವನು. ಒಟ್ಟಿನಲ್ಲಿ ಈ ಸಂಗತಿಗಳು ಪ್ರತಿಯೊಬ್ಬ ಅಹ್ಮದಿಯ ಹೊಣೆಗಾರಿಕೆಯ ಬಗ್ಗೆ ಗಮನ ಸೆಳೆಯುತ್ತವೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇದನ್ನು ಗುರುತಿಸುವವನು ಅನುಗ್ರಹೀತನು. ಈಗ ಸ್ವಲ್ಪ ಕಾಲ ಉಳಿದಿದೆ. ಈಗ ಪ್ರತಿಫಲ ಲಭಿಸುವುದು. ಆದರೆ ಸಮೀಪ ಕಾಲದಲ್ಲೇ ಅಲ್ಲಾಹನು ಈ ಜಮಾಅತಿನ ಸತ್ಯತೆಯನ್ನು ಸೂರ್ಯನಿಗಿಂತಲೂ ಹೆಚ್ಚು ಪ್ರಕಾಶಿತಗೊಳಿಸುವನು. ಆ ಸಮಯದ ವಿಶ್ವಾಸಕ್ಕೆ ಪ್ರತಿಫಲ ಲಭಿಸಲಾರದು. ಅದು ಪಶ್ಚಾತ್ತಾಪದ ಬಾಗಿಲುಗಳು ಮುಚ್ಚಲ್ಪಡುವಂತಹ ಕಾಲವಾಗಿರುವುದು. ಈಗಿನ ಸಮಯದಲ್ಲಿ ನನ್ನನ್ನು ಸ್ವೀಕರಿಸಲು ಬಾಹ್ಯವಾಗಿ ಒಂದು ಮಹಾನ್ ಯುದ್ಧ ತನ್ನ ಆತ್ಮದೊಂದಿಗೆ ಮಾಡಬೇಕಾಗಿತ್ತು. ಆತನು ಕೆಲವೊಮ್ಮೆ ಸಂಬಂಧಿಕರೊಂದಿಗೆ ಬೇರ್ಪಡಿಸಲಾಗುವುದನ್ನು ಅನುಭವಿಸುತ್ತಾನೆ. ಆತನ ಪ್ರಾಪಂಚಿಕ ವ್ಯವಹಾರಗಳಲ್ಲಿ ತಡೆ ಹಾಕಲು ಪ್ರಯತ್ನಿಸಬಹುದು. ಆತನಿಗೆ ನಿಂದನೆಗಳನ್ನು ಕೇಳಬೇಕಾಗುವುದು ಆದರೆ ಈ ಎಲ್ಲಾ ವಿಷಯಗಳ ಪ್ರತಿಫಲ ಸರ್ವಶಕ್ತನಾದ ಅಲ್ಲಾಹನು ನಿಡುವನು."

ಹಝ್ರತ್ ಮಸೀಹ್ ಮೌಊದ್(ಅ) ಅವರು ಹೇಳಿದರು: "ಮತ್ತೆ ಎರಡನೇ ಕಾಲ ಬಂದಾಗ" ಅಂದರೆ ಆ ಸಮಯ ಯಾವಾಗ ಬಂದಾಗ "ಮತ್ತು ಎತ್ತರದ ಬೆಟ್ಟದಿಂದ ಕೆಳಗೆ ಬೀಳುವ ನೀರಿನಂತೆ ಜಗತ್ತು ಈ ಶಕ್ತಿಯ ಕಡೆ ಮರಳಿತು" ಅಂದರೆ ಪ್ರಗತಿಯ ಸಮಯ ಬಂದಾಗ "ಅದನ್ನು ಯಾರೂ ನಿರಾಕರಿಸುವವನನ್ನು ನೋಡಲಿಲ್ಲ. ಆ ಸಮಯದಲ್ಲಿ ಸ್ವೀಕಾರವು ಎಂತಹ ಮಟ್ಟದ್ದಾಗಿರುವುದು?" ಆ ಕಾಲದಲ್ಲಿ ಸ್ವೀಕರಿಸುವುದು ಧೈರ್ಯವಂತರ ಕೆಲಸವಲ್ಲ. ಪ್ರತಿಫಲವು ದುಃಖದ ಕಾಲದಲ್ಲಿಯೇ ಯಾವಾಗಲೂ ಇರುತ್ತದೆ."

ಅವರು ಹೇಳಿದರು: "ಹಝ್ರತ್ ಅಬೂಬಕರ್(ರ) ರವರು ರಸೂಲುಲ್ಲಾಹ್(ಸ) ಅವರನ್ನು ಸ್ವೀಕರಿಸಿಕೊಂಡು ಮಕ್ಕಾದ ರಾಜ್ಯಪಾಲತ್ವವನ್ನು ತೊರೆದರೆ ಅಲ್ಲಾಹನು ಅವರಿಗೆ ಒಂದು ಲೋಕದ ರಾಜ್ಯವನ್ನು ನೀಡಿದನು. ಮತ್ತೆ ಹಝ್ರತ್ ಉಮರ್(ರ.ಅ) ರವರೂ ಕಂಬಳಿಯನ್ನು ಹೊದ್ದಿಕೊಂಡರು. ಮತ್ತು 'ಹರ್‌ಚೆ ಬಾದ್‌ಅಬಾದ್ ಮಾ ಕಶ್ತಿ ದರಾಬ್ ಅಂದಾಖ್ತೇಮ್' ಅಂದರೆ ನಾವು ದೋಣಿಯನ್ನು ನೀರಿಗೆ ಎಸೆದಿದ್ದೇವೆ, ಈಗ ಏನಾಗಲಿದೇಯೋ ಆಗಲಿ ಎಂದು ಹೇಳಿದರು. ಹೀಗೆ ಅವರು ರಸೂಲುಲ್ಲಾಹ್(ಸ) ಅವರನ್ನು ಸ್ವೀಕರಿಸಿದಾಗ ಸರ್ವಶಕ್ತನಾದ ಅಲ್ಲಾಹನು ಅವರ ಪ್ರತಿಫಲವನ್ನು ಬಾಕಿ ಇರಿಸಿದ್ದಾನೆಯೇ? ಖಂಡಿತವಾಗಿಯೂ ಇಲ್ಲ. ಯಾರು ಅಲ್ಲಾಹನಿಗಾಗಿ ಚಿಕ್ಕ ಕಾರ್ಯವನ್ನು ಮಾಡುವವನು ತನ್ನ ಪ್ರತಿಫಲವನ್ನು ಪಡೆಯುವವರೆಗೆ ಸಾಯುವುದಿಲ್ಲ. ಆದರೆ ಇದಕ್ಕೆ ಚಲನೆ ಒಂದು ಷರತ್ತು ಆಗಿದೆ. ಯಾರಾದರೂ ಮಧ್ಯಮ ವೇಗದಲ್ಲಿ ಸರ್ವಶಕ್ತನಾದ ಅಲ್ಲಾಹನ ಬಂದರೆ ಅಲ್ಲಾಹನು ಅವನ ಕಡೆಗೆ ಓಡಿಬರುತ್ತಾನೆ ಎಂದು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಈಮಾನ್ (ಸತ್ಯ ವಿಶ್ವಾಸ) ಅಂದರೆ ಸ್ವಲ್ಪ ರಹಸ್ಯವಾಗಿದ್ದರೆ ಅದನ್ನು ಸ್ವೀಕರಿಸಿಕೊಳ್ಳಬೇಕು. ಯಾರು ಬಿದಿಗೆ ಚಂದ್ರನನ್ನು ನೋಡುತ್ತಾನೊ ಅವನು ತೀಕ್ಷ್ಣದೃಷ್ಟಿವುಳ್ಳವನು ಎಂದು ಕರೆಯಲಾಗುತ್ತದೆ. ಅಂದರೆ ಮೊದಲ ದಿನದ ಚಂದ್ರನನ್ನು ನೋಡುವವನನ್ನು ತೀಕ್ಷ್ಣದೃಷ್ಟಿ ಎಂದು ಕರೆಯಲಾಗುತ್ತದೆ. ಆದರೆ ಬೆಳದಿಂಗಳನ್ನು ಚಂದ್ರನನ್ನು ನೋಡಿ ಕಿರುಚಾಡುವನು" ಅಂದರೆ ನಾನು ಚಂದ್ರನನ್ನು ನೋಡಿದೆ ಎಂದು ಕಿರುಚಾಡಿದರೆ ಅವನನ್ನು ಹುಚ್ಚನೆಂದು ಕರೆಯಲ್ಪಡುತ್ತಾನೆ."

(ಮಲ್ಫೂಝಾತ್, ಸಂಪುಟ–5, ಪುಟ 25–26, 1984 ಆವೃತ್ತಿ)

ಆದ್ದರಿಂದ ಇಂದು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವವರು ಮತ್ತು ವಿರೋಧಗಳನ್ನು ಎದುರಿಸಿಕೊಂಡು ಅಲ್ಲಾಹನ ಪ್ರೀತಿಯನ್ನು ಗಳಿಸುವವರು ಸೌಭಾಗ್ಯಶಾಲಿಗಳು.

ಕೇವಲ ನಂಬುವುದು ಸಾಕಲ್ಲ. ಬದಲಾಗಿ ಯಥಾರ್ಥವಾದ ಉದ್ದೇಶ ಒಂದು ಪರಿಶುದ್ಧವಾದ ಬದಲಾವಣೆ ಉಂಟಾಗಬೇಕು ಎಂದಾಗಿದೆ.

ಅಪ್ಪಟ ಏಕದೇವ ವಿಶ್ವಾಸದಲ್ಲಿ ಹೆಜ್ಜೆ ಹಾಕುವ ಮನುಷ್ಯರಾಗಬೇಕು. ಆಗ ಅಲ್ಲಾಹನು ವರದಾನಗಳು ವರ್ಧಿಸುತ್ತಾ ಹೋಗುತ್ತವೆ. ಹಝ್ರತ್ ಮಈಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾರು ಅಲ್ಲಾಹನಿಗೆ ಭಯಪಟ್ಟು ಅವನ ಮಾರ್ಗದ ಹುಡುಕಾಟದಲ್ಲಿ ಪ್ರಯತ್ನ ಮಾಡುತ್ತಾರೋ ದುಆಗಳನ್ನು ಮಾಡುತ್ತಾರೋ ಅವರಿಗೆ ಅಲ್ಲಾಹನು **ವಲ್ಲದೀನ ಜಾಹದೂ ಫೀನಾ ಲನಹ್‌ದಿಯನ್ನಹುಂ ಸುಬುಲನಾ** (ಅರ್ಥ: ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನ ಪಡುತ್ತಾರೋ, ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು.) ಎಂಬ ತನ್ನ ನಿಯಮ ಪ್ರಕಾರ ತನ್ನ ಮಾರ್ಗವನ್ನು ತೋರಿಸುತ್ತಾನೆ. ಎಲ್ಲಿಯ ವರೆಗೆ ಮನುಷ್ಯನು ಪರಿಶುದ್ಧ ಹೃದಯ ಮತ್ತು ಪ್ರಾಮಾಣಿಕತೆಯೊಂದಿಗೆ ಎಲ್ಲ ನಿಷಿದ್ಧ ಮಾರ್ಗಗಳನ್ನು ಮುಚ್ಚಿಕೊಂಡು ಅಲ್ಲಾಹನ ಮುಂದೆ ಕೈಯನ್ನು ಚಾಚುವುದಿಲ್ಲವೋ ಅಲ್ಲಿಯ ವರೆಗೆ ಆತನಿಗೆ ಅಲ್ಲಾಹನ ಸಹಾಯ ಮತ್ತು ನೆರವು ಲಭಿಸಲು ಅರ್ಹನಾಗಿರುವುದಿಲ್ಲ.

ಆತನ ಹೃದಯ ಪ್ರತಿಯೊಂದು ವಿಧದ ಸ್ವಾರ್ಥ ಉದ್ದೇಶಗಳಿಂದ ಮುಕ್ತ ಮತ್ತು ಸ್ವಚ್ಛವಾಗಿದೆ ಎಂದು ಅಲ್ಲಾಹನು ಕಾಣುವಾಗ ಆತನಿಗಾಗಿ ತನ್ನ ಕೃಪೆಯ ಬಾಗಿಲುಗಳನ್ನು ತೆರೆಯುತ್ತಾನೆ. ಆತನನ್ನು ತನ್ನ ನೆರಳಿನಲ್ಲಿ ಇರಿಸಿಕೊಂಡು ಸ್ವತಃ ಆತನ ಪರಿಪಾಲನೆಯನ್ನು ಮಾಡುತ್ತಾನೆ.

ಅವರು(ಅ) ಹೇಳಿದರು: "ಸರ್ವಶಕ್ತನಾದ ಅಲ್ಲಾಹನು ತನ್ನ ಸ್ವಂತ ಕೈಗಳಿಂದ ಈ ಸರಪಳಿಯನ್ನು ಸ್ಥಾಪಿಸಿದ್ದಾನೆ ಮತ್ತು ಅನೇಕ ಜನರು ಕೇವಲ ಉದ್ದೇಶಗಳನ್ನು ಸಾಧಿಸಲು ಬಂದಿರುವುದನ್ನು ನಾವು ನೋಡುತ್ತೇವೆ. ಉದ್ದೇಶಗಳು ಈಡೇರಿದರೆ ಉತ್ತಮ ಇಲ್ಲದಿದ್ದರೆ ಧರ್ಮ ಎಲ್ಲಿದೆ ಮತ್ತು ವಿಶ್ವಾಸ ಎಲ್ಲಿದೆ." ಕೆಲವರು ಬೈಅತ್ ಮಾಡುವ ಉದೇಶವೇ ಬೇರೆಯದ್ದಾಗಿರುತ್ತದೆ. ಅದನ್ನು ವಿವರಿಸುತ್ತಾ ಇನ್ನೊಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸ್ವಂತ ಉದ್ದೇಶಗಳು ಸಹ ಶಿರ್ಕ್ ಆಗಿವೆ. ಅವು ಹೃದಯದ ಮೇಲೆ ಮುಸುಕನ್ನು ತರುತ್ತದೆ. ಒಬ್ಬ ವ್ಯಕ್ತಿಯು ಬೈಅತ್ ಮಾಡಿದ್ದರೂ ಅವನಿಗೆ ಎಡವು ಇದೆ.

ಮನುಷ್ಯರು ತಮ್ಮ ಸ್ವಾರ್ಥವನ್ನು ತೊರೆದು ಅಪ್ಪಟ ಏಕದೇವ ವಿಶ್ವಾಸದಲ್ಲಿ ಹೆಜ್ಜೆ ಹಾಕುವುದೇ ನಮ್ಮ ಸರಪಳಿಯ ಮೂಲ ಉದ್ದೇಶವಾಗಿದೆ.

ಸತ್ಯವನ್ನು ಪಡೆಯುವ ಅಂಶವಿರಬೇಕು ಇಲ್ಲದಿದ್ದರೆ ಇರಬಾರದು ಏಕೆಂದರೆ ಆತನು ತನ್ನ ಮೂಲ ಉದ್ದೇಶವನ್ನು ಪಡೆಯುವಲ್ಲಿ ವ್ಯತ್ಯಾಸವನ್ನು ಕಂಡರೆ ಆತನು ಆ ಸಮಯದಲ್ಲಿಯೇ ಬೇರ್ಪಡುತ್ತಾನೆ. ಸಂಪತ್ತು ಮತ್ತು ಸಂಪತ್ತನ್ನು ಹೆಚ್ಚಿಸುವ ಉದ್ದೇಶದಿಂದ ರಸೂಲುಲ್ಲಾಹ್(ಸ) ರವರ ಸಹಾಬರುಗಳು ರಸೂಲುಲ್ಲಾಹ್(ಸ.ಅ) ಅವರನ್ನು ಸ್ವೀಕರಿಸಿದ್ದಾರೆಯೇ? ಇಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "... ನಾವು ಸಹಾಬರವರ ಜೀವನವನ್ನು ಆಲಿಸಿದರೆ ಅವರಲ್ಲಿ ಅಂತಹ ಒಂದು ಘಟನೆಯನ್ನು ಸಹ ನಾವು ಕಾಣುವುದಿಲ್ಲ. ನಮ್ಮ ಬೈಅತ್ ಪಶ್ಚಾತ್ತಾಪದ ಬೈಅತ್ ಆಗಿದೆ ಆದರೆ ಈ ಜನರ ಬೈಅತ್ ಶಿರಚ್ಛೇದನದ ಬೈಅತ್ ಆಗಿತ್ತು." ಸಹಾಬರವರ. ಈಗಷ್ಟೆ ನಾನು ಅನೇಕ ಘಟನೆಗಳನ್ನು ವಿವರಿಸಿದ್ದೇನೆ. ಕಳೆದ ಅನೇಕ ಖುತ್‌ಬಗಳಲ್ಲಿ ಸಹಾಬರವರ ಸುದೀರ್ಘ ಸರಣಿಯು ಅವರು ತಮ್ಮ ತಲೆಗಳನ್ನು ಹೇಗೆ ಕತ್ತರಿಸುತ್ತಿದ್ದರು ಎಂಬುದರ ಕುರಿತು ಹೇಳಿದೆ. "ಒಂದೆಡೆ ಬೈಅತ್(ನಿಷ್ಠೆಯ ಪ್ರತಿಜ್ಞೆ) ಮಾಡುತ್ತಿದ್ದರು ಮತ್ತೊಂದೆಡೆ ತಮ್ಮ ಆಸ್ತಿ, ಅಂತಸ್ತು, ಗೌರವ, ಕೀರ್ತಿ, ಪ್ರಾಣ ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದರು. ಅವರು ಏನನ್ನೂ ಹೊಂದಿಲ್ಲ ಎಂಬಂತೆ ಇರುತ್ತಿದ್ದರು ಹೀಗೆ ಅವರು ಎಲ್ಲಾ ಪ್ರಾಪಂಚಿಕ

ಭೋಗಗಳನ್ನು ಪ್ರಪಂಚದಿಂದ ಕತ್ತರಿಸಲ್ಪಟ್ಟವು. ಎಲ್ಲಾ ರೀತಿಯ ಗೌರವ ಮತ್ತು ವೈಭವ ಮತ್ತು ಪ್ರತಿಷ್ಠೆಯನ್ನು ಸಾಧಿಸುವ ಉದ್ದೇಶಗಳು ಕಳೆದುಹೋದವು. ನಾವು ರಾಜರಾಗುತ್ತೇವೆ ಅಥವಾ ದೇಶವನ್ನು ಅಧೀನಪಡಿಸಿಕೊಳ್ಳುತ್ತೇವೆ ಎಂದು ಯಾರು ಭಾವಿಸಿದ್ದರು? ಈ ವಿಷಯಗಳು ಅವರ ಭ್ರಮೆಯಲ್ಲಿಯೂ ಇರಲಿಲ್ಲ, ಆದರೆ ಅವರು ಎಲ್ಲಾ ರೀತಿಯ ವಾಗ್ದಾನಗಳಿಂದ ಬೇರ್ಪಟ್ಟರು ಮತ್ತು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಪ್ರತಿ ದುಃಖ ಮತ್ತು ತೊಂದರೆಗಳನ್ನು ಸಂತೋಷದಿಂದ ಸಹಿಸಿಕೊಳ್ಳಲು ಯಾವಾಗಲೂ ಸಿದ್ಧರಾಗಿದ್ದರು. ಅವರು ತಮ್ಮ ಪ್ರಾಣವನ್ನು ನೀಡಲು ಸಹ ಸಿದ್ಧರಾಗಿದ್ದರು. ಅವರದೇ ಸ್ಥಿತಿಯೆಂದರೆ ಅವರು ಇಹಲೋಕದಿಂದ ಸಂಪೂರ್ಣವಾಗಿ ಬೇರ್ಪಟ್ಟು ದೂರವಾಗಿದ್ದರು, ಆದರೆ ಸರ್ವಶಕ್ತನಾದ ಅಲ್ಲಾಹನು ಅವರ ಮೇಲೆ ತನ್ನ ಕೃಪೆಯನ್ನು ದಯಪಾಲಿಸುತ್ತಾನೆ ಮತ್ತು ಅವರನ್ನೂ ಹೀಗೆ ಎಲ್ಲವನ್ನೂ ತ್ಯಾಗ ಮಾಡಿದವರನ್ನು ಅನುಗ್ರಹಿಸಿದನು ಎಂಬ ವಿಷಯವೂ ಸತ್ಯವಾಗಿದೆ. (ಮಲ್‌ಫೂಝಾತ್, ಸಂಪುಟ–5, ಪುಟಗಳು 396–398 ಅಡಿಟಿಪ್ಪಣಿಗಳೊಂದಿಗೆ, 1984 ಆವೃತ್ತಿ)

ನಂತರ ಜಮಾಅತ್‌ನ ಸ್ಥಾಪನೆಯ ಉದ್ದೇಶವು ಮೂಲ ಏಕದೇವೋಪಾಸನೆಯನ್ನು ಸ್ಥಾಪಿಸುವುದು ಮತ್ತು ದೈವಿಕ ಪ್ರೀತಿಯನ್ನು ಸೃಷ್ಟಿಸುವುದು ಎಂದು ಸೂಚನೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅಲ್ಲಾಹನನ್ನು ಪ್ರೀತಿಸುವುದು ಎಂದರೇನು? ಅದೇನೆಂದರೆ, ತನ್ನ ಹೆತ್ತವರು, ಮಕ್ಕಳು ಮತ್ತು ಸ್ವಂತಿಕೆ ಎಲ್ಲದರ ಮೇಲೆ ಅಲ್ಲಾಹನ ಸಂಪ್ರೀತಿಗೆ ಪ್ರಾಮುಖ್ಯತೆಯನ್ನು ನೀಡಬೇಕು. ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಉಲ್ಲೇಖಿಸಲಾಗಿದೆ: **ಫಝ್‌ಕುರು ಲ್ಲಾಹ ಕಝಿಕ್ರಿಕುಮ್ ಆಬಾಯಿಕುಮ್ ಔ ಅಶದ್ದು ಝಿಕ್ರನ್** (ಅಲ್‌ಬಖರ: 201) ಅಂದರೆ ನೀವು ನಿಮ್ಮ ಪಿತೃಗಳನ್ನು ಸ್ಮರಿಸುವಂತೆ ಅಲ್ಲಾಹನನ್ನು ಸ್ಮರಿಸಿರಿ. ಬದಲಾಗಿ, ಅದರಿಂದಲೂ ಹೆಚ್ಚಾಗಿ ಮತ್ತು ಬಲವಾದ ಪ್ರೀತಿಯೊಂದಿಗೆ ನೆನಪಿಡಿ. ಇಲ್ಲಿ ಒಂದು ವಿಷಯ ನೆನಪಿನಲ್ಲಿಡಬೇಕು ಅಂದರೆ ಸರ್ವಶಕ್ತನಾದ ಅಲ್ಲಾಹನು ನೀವು ಅಲ್ಲಾಹನನ್ನು ತಂದೆ ಎಂದು ಕರೆಯಬೇಕೆಂದು ಕಲಿಸಲಿಲ್ಲ, ಅಂದರೆ ನೀವು ಕ್ರಿಶ್ಚಿಯನ್ನರಂತೆ ಮೋಸಹೋಗಬಾರದು ಮತ್ತು ಅಲ್ಲಾಹನನ್ನು ತಂದೆ ಎಂದು ಕರೆಯಬಾರದು ಎಂದು ಅವನು ಕಲಿಸಿದನು, ಮತ್ತು ಯಾರಾದರೂ ಅವನಿಗೆ ತಂದೆಯಿಂದ ಕಡಿಮೆ ಮಟ್ಟದ ಪ್ರೀತಿಯಾಯಿತು ಎಂದು ಹೇಳಿದರೆ ಈ ಆಕ್ಷೇಪಣೆಯನ್ನು ತೆಗೆದು ಹಾಕಲು **ವಶದ್ದ ಝಿಕ್ರ** ಎಂದು ಹೇಳಿರುವನು. ಒಂದು ವೇಳೆ **ಔಅಶದ್ದ ಝಿಕ್ರ** ಎಂದು ಹೇಳಿರಲಿಲ್ಲವಾದರೆ ಈ ಆಕ್ಷೇಪಣೆ ಮಾಡಬಹುದಾಗಿತ್ತು. ಆದರೆ ಈಗ ಆತನು ಅದನ್ನು ಪರಿಹರಿಸಿದ್ದಾನೆ. (ಮಲ್‌ಫೂಝಾತ್, ಸಂಪುಟ–3, ಪುಟ–188, 1984 ಆವೃತ್ತಿ)

ಇದು ಎಲ್ಲಾ ಲೌಕಿಕ ಸಂಬಂಧಗಳಿಗಿಂತ ಸರ್ವಶಕ್ತನಾದ ಅಲ್ಲಾಹನಿಗಾಗಿ ಒಬ್ಬ ಮುಉಮಿನ್‌ನಲ್ಲಿ ಇರಬೇಕಾದ ಪ್ರೀತಿಯಾಗಿದೆ. ನಾವು ಅಂತಹ ಪ್ರೀತಿಯನ್ನು ನಮ್ಮೊಳಗೆ ಉಂಟುಮಾಡಲು ಪ್ರಯತ್ನಿಸುತ್ತೇವೆಯೇ ಎಂದು ನೋಡಬೇಕಾಗಿದೆ. ಅದಕ್ಕಾಗಿ ನಮ್ಮ ಹೃದಯಗಳಲ್ಲಿ ಯಾವುದಾದರೂ ಬಯಕೆ ಮತ್ತು ಕಳವಳ ಇದೆಯೇ?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಪ್ರೀತಿಯನ್ನು ಮತ್ತಷ್ಟು ವಿವರಿಸುತ್ತಾ ಮತ್ತು ಅದರ ಗುಣಮಟ್ಟವನ್ನು ವಿವರಿಸುತ್ತಾ ಹೇಳುತ್ತಾರೆ:ಯಥಾರ್ಥವಾದ ಏಕದೇವ ವಿಶ್ವಾಸವನ್ನು ಸ್ಥಾಪಿಸಲು ಅಲ್ಲಾಹನ ಪ್ರೀತಿಯಿಂದ ಪೂರ್ಣವಾದ ಪಾಲನ್ನು ಪಡೆಯಬೇಕು. ಕೃತ್ಯರೂಪದ ಪಾಲು ಇರುವ ತನಕ ಈ ಪ್ರೀತಿ ಪರಿಪೂರ್ಣವಾಗುವುದಿಲ್ಲ. ಬಾಯಿಮಾತಿನಿಂದ ಇದು ಸಾಬೀತಾಗುವುದಿಲ್ಲ. ಯಾರಾದರೂ ಸಕ್ಕರೆಯ ಹೆಸರನ್ನು ನಾಲಗೆಯಿಂದ ಉಚ್ಚರಿಸುವುದರಿಂದ ನಾಲಗೆ ಸಿಹಿಯಾಗುವುದಿಲ್ಲ. ಯಾರಾದರೂ ಗೆಳೆತನವೆಂದು ಹೇಳಿಕೊಂಡು ಕಷ್ಟಬರುವಾಗ ಸಹಾಯಕ್ಕೆ ಬರದಿದ್ದರೆ ಅವರ ಗೆಳೆತನ ನೈಜವಾದದ್ದು ಅಲ್ಲ. ಅದೇ ರೀತಿಯಲ್ಲಿ ಅಲ್ಲಾಹನ ಏಕತ್ವವನ್ನು ಕೇವಲ ನಾಲಗೆಯಿಂದ ಒಪ್ಪಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ. ನಾಲಗೆಯ ಒಪ್ಪಿಗೆಯ ಜೊತೆಗೆ ಕೃತ್ಯರೂಪದ ಒಪ್ಪಿಗೆ ಕಡ್ಡಾಯವಾದದ್ದು ಆಗಿದೆ. ಅಲ್ಲಾಹನ ಮಾರ್ಗದಲ್ಲಿ ತಮ್ಮ ಜೀವಿತವನ್ನು ಸಮರ್ಪಿಸಬೇಕು. ಎಂದರೆ ಎಲ್ಲದಕ್ಕಿಂತ ಪ್ರಾಮುಖ್ಯ ಅಲ್ಲಾಹನಿಗೆ ಆಗಿರಬೇಕು. ಅವನ ಆಜ್ಞೆಗಳು ಅತ್ಯಂತ ಪ್ರಧಾನವಾಗಿರಬೇಕು. ಅವನು ಕಳುಹಿಸಿದ ಧರ್ಮಕ್ಕೆ ಎಲ್ಲಕ್ಕಿಂತ ಆದ್ಯತೆ ನೀಡಬೇಕು.

ಇದೇ ಇಸ್ಲಾಮಾಗಿದೆ. ಇದೇ ಉದ್ದೇಶಕ್ಕಾಗಿ ಅಲ್ಲಾಹನು ನನ್ನನ್ನು ಕಳುಹಿಸಿರುವನು. ಯಾರು ಈಗ ಈ ಚಿಲುಮೆಯ ಸಮೀಪಕ್ಕೆ ಬರುವುದಿಲ್ಲವೋ ಅವನು ನತದೃಷ್ಟನು. ಏನನ್ನಾದರೂ ತೆಗೆದುಕೊಂಡು ಗುರಿ ಸಾಧಿಸಬೇಕಾದರೆ, ಸತ್ಯವನ್ನು ಯಾಚಿಸುವವನು ಚಿಲುಮೆಯ ಕಡೆಗೆ ಹೋಗಬೇಕು ಮತ್ತು ಮುಂದೆ ಹೆಜ್ಜೆ ಹಾಕಬೇಕು ಮತ್ತು ಹರಿಯುವ ಚಿಲುಮೆಯ ಅಂಚಿನಲ್ಲಿ ತನ್ನ ಮುಖವನ್ನು ಇಡಬೇಕು ಮತ್ತು ಅಲ್ಲಾಹನ ಮುಂದೆ ಪರಕೀಯತೆಯ ವಸ್ತ್ರವನ್ನು ತ್ಯಜಿಸಿ ಆತನ ಆಸ್ಥಾನದಲ್ಲಿ ಬೀಳಿ ಪ್ರಾಪಂಚಿಕ ಗೌರವ ಹೋದರೂ ಸರಿ, ಕಷ್ಟಗಳ ಪರ್ವತಗಳು ಆವರಿಸಿದರೂ ಸರಿ ನಾನು ಸರ್ವಶಕ್ತನಾದ ಅಲ್ಲಾಹನ ಆಸ್ಥಾನವನ್ನಯ ತ್ಯಜಿಸುವುದಿಲ್ಲ ಎಂದು ಹೇಳುವ ತನಕ ಇದು ಸಾಧ್ಯವಿಲ್ಲ. ಅಲ್ಲಾಹನ ಮಾರ್ಗದಲ್ಲಿ ಎಲ್ಲಾ ರೀತಿಯ ತ್ಯಾಗಗಳನ್ನು ನೀಡಲು ಸಿದ್ಧನಿರಬೇಕು. ಇಬ್ರಾಹೀಂ ಅಲೈಹಿಸ್ಸಲಾಮರ ನಿಷ್ಠೆ ಇದೇ ಆಗಿತ್ತು. ಅವರು ಪುತ್ರನನ್ನು ಅಲ್ಲಾಹನಿಗೆ ಅರ್ಪಿಸಲು ತಯಾರಾದರು.

ಅನೇಕ ಇಬ್ರಾಹೀಮರನ್ನು ಉಂಟುಮಾಡುವುದೇ ಇಸ್ಲಾಮಿನ ಉದ್ದೇಶವಾಗಿದೆ. ಆದ್ದರಿಂದ ನಿಮ್ಮಲ್ಲಿ ಪ್ರತಿಯೊಬ್ಬರು ಇಬ್ರಾಹೀಂ ಆಗಬೇಕು. ನಾನು ನಿಮಗೆ ನಿಜವಾಗಿ ಹೇಳುತ್ತೇನೆ, ದೇವಪ್ರೀಯರಾಧಕರಾಗಬೇಡಿ ಬದಲಿಗೆ ದೇವಪ್ರೀಯರಾಗಿರಿ ಮತ್ತು ಸಂತರಾಧಕರಾಗಬೇಡಿ ಬದಲಿಗೆ ಸಂತರಾಗಿರಿ ನೀವು ಕಷ್ಟ ಸಂಕಟಗಳಿಂದ ಕೂಡಿರ ಮಾರ್ಗಗಳಿಂದ ಆಗಮಿಸಿರಿ." ಅಂದರೆ ತಮ್ಮ ಸ್ಥಾನಮಾನವನ್ನು ಈ ಮಟ್ಟಕ್ಕೆ ತಲುಪಿಸಿರಿ. ಶೀಷ್ಯತ್ವಗಳನ್ನು ಪ್ರಾರಂಭಿಸಬೇಡಿ ಬದಲಿಗೆ ತಮ್ಮನ್ನು ಸ್ವತಃ ದೇವಪ್ರೀಯ ಎಂದುಎನಿಸಿಕೊಳ್ಳುವ ಮಟ್ಟಕ್ಕೆ ತಮ್ಮನ್ನು ಕೊಂಡೊಯ್ಯಿರಿ. ಜನರು ಹೌದು ಅವನು ಒಳ್ಳೆಯ ಕಾರ್ಯಗಳನ್ನು ಮಾಡುವವನು, ಅವನನ್ನು ಅನುಸರಿಸಬೇಕು ಎಂದು ಹೇಳಬೇಕು. ಅವರು ಹೇಳಿದರು: "ನೀವು ಆ ಮಾರ್ಗಗಳಿಂದ ಬನ್ನಿ. ವಾಸ್ತವವಾಗಿ, ಅವು ಕಿರಿದಾದ ಮಾರ್ಗಗಳಾಗಿವೆ, ಆದರೆ ಅವುಗಳನ್ನು ಪ್ರವೇಶಿಸಿದರೆ ಶಾಂತಿ ಮತ್ತು ಸೌಕರ್ಯವನ್ನು ನೀಡುತ್ತದೆ. ಆದರೆ ಈ ಬಾಗಿಲನ್ನು ಬಹಳ ಲಘುವಾಗಿ ಹಾದುಹೋಗುವುದು ಮುಖ್ಯ. ತಲೆಯ ಮೇಲೆ ದೊಡ್ಡ ಭಾರವಿದ್ದರೆ ಕಷ್ಟ ಅಂದರೆ ಲೌಕಿಕ ಆಸೆಗಳು, ಪ್ರಾಪಂಚಿಕ ಒಲವುಗಳ ಭಾರವನ್ನು ತಲೆಮೇಲೆ ಹೊತ್ತುಕೊಂಡು ಜಗತ್ತು ಪ್ರಭುತ್ವ, ಧರ್ಮ ಹಿಂದೆ ಇದ್ದರೆ ಇಲ್ಲಿ ದಾಟುವುದು ಬಹಳ ಕಷ್ಟ. ಹಾಗಾದರೆ, ಲೌಕಿಕ ಸಂಬಂಧಗಳ ಮೂಟೆಯಾದ ಈ ಮೂಟೆಯನ್ನು ಬಿಸಾಡಿ, ಜಗತ್ತನ್ನು ಧರ್ಮಕ್ಕಿಂತ ಮೊದಲು ಆದ್ಯತೆ ನಿಡಿರಿ. ನಮ್ಮ ಜಮಾಅತ್‌ನವರು ಅಲ್ಲಾಹನನ್ನು ಮೆಚ್ಚಿಸಲು ಬಯಸಿದ್ದಲ್ಲಿ ಅವರು ಇದನ್ನು ಎಸೆಯಬೇಕು.

ನಿಮ್ಮಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆ ಇಲ್ಲದಿದ್ದರೆ, ನೀವು ಸುಳ್ಳುಗಾರರಾಗಿ ಉಳಿಯುತ್ತೀರಿ ಮತ್ತು ಸರ್ವಶಕ್ತನಾದ ಅಲ್ಲಾಹನ ಮುಂದೆ ನೀತಿವಂತರಾಗಲು ಸಾಧ್ಯವಿಲ್ಲ ಎಂದು ನೀವು ನೆನಪಿನಲ್ಲಿಡಬೇಕು. ಸರ್ವಶಕ್ತನಾದ ಅಲ್ಲಾಹನಿಂದ ಮೋಸಹೋಗಲು ಸಾಧ್ಯವಿಲ್ಲ ಮತ್ತು ಯಾರೂ ಅವನನ್ನು ಮೋಸಗೊಳಿಸಲು ಸಾಧ್ಯವಿಲ್ಲ, ಆದ್ದರಿಂದ ನೀವು ನಿಜವಾದ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಸೃಷ್ಟಿಸಿಕೊಳ್ಳುವುದು ಅವಶ್ಯಕ. (ಮಲ್‌ಫೂಝಾತ್, ಸಂಪುಟ–3, ಪುಟ– 188–190, 1984 ಆವೃತ್ತಿ)

ನಂತರ ತೌಹೀದ್ (ಏಕದೇವ ವಿಶ್ವಾಸ) ಸ್ಥಾಪನೆಯೊಂದಿಗೆ, ಸರ್ವಶಕ್ತನಾದ ಅಲ್ಲಾಹನ ಪ್ರೀತಿಯೊಂದಿಗೆ, ಅಲ್ಲಾಹನ ಪ್ರೀತಿಪಾತ್ರರೊಂದಿಗೆ ಪ್ರೀತಿಯ ಸಂಬಂಧವು ಅವಶ್ಯಕವಾಗಿದೆ ಅದರ ಮೂಲಕ ಸರ್ವಶಕ್ತನಾದ ಅಲ್ಲಾಹನು ನಮಗೆ ತನ್ನ ತೌಹೀದ್‌ನ ಮಾರ್ಗಗಳನ್ನು ತೋರಿಸಬೇಕು. ಆದ್ದರಿಂದ, ರಸೂಲುಲ್ಲಾಹ್(ಸ) ಅವರೊಂದಿಗಿನ ಸಂಬಂಧವನ್ನು ಸ್ಥಾಪಿಸುವ ಮತ್ತು ಅವರ(ಸ) ಗೌರವ ಮತ್ತು ಹಿರಿಮೆಯನ್ನು ಸ್ಥಾಪಿಸುವತ್ತ ಗಮನ ಸೆಳೆಯುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಒಂದು ಸ್ಥಳದಲ್ಲಿ ಹೇಳುತ್ತಾರೆ: "ಅಲ್ಲಾಹನು ಈ ಜಮಾಅತ್ ಅನ್ನು ರಸೂಲುಲ್ಲಾಹ್(ಸ) ಅವರ ಪ್ರವಾದಿತ್ವ ಮತ್ತು ಗೌರವವನ್ನು ಪುನಃ ಸ್ಥಾಪಿಸಲು ಸ್ಥಾಪಿಸಿದ್ದಾನೆ." ಸಂತಾರಾಧನೆಯಲ್ಲಿ ಮುಳುಗಿರುವ ಅನ್ಯಜನಾಂಗಗಳ ಉದಾಹರಣೆಯನ್ನು ನೀಡುತ್ತಾ, ಸಮಾಧಿಗಳ ಆರಾಧಕರು ಮತ್ತು ನಾವು ರಸೂಲುಲ್ಲಾಹ್(ಸ)ರವರ ಪ್ರೀತಿಯಲ್ಲಿ ನಾಶವಾಗುತ್ತಿದ್ದೇವೆ ಎಂದು ದಾವೆ ಮಾಡುವವರು ಮತ್ತು ನಮ್ಮನ್ನು ಕಾಫಿರ್ ಎಂದು ಹೇಳುವರು ಮತ್ತು ಅಹ್ಮದೀಯರು ನೌಝುಬಿಲ್ಲಾಹ್(ಅಲ್ಲಾಹನು ಕ್ಷಮಿಸಲಿ) ರಸೂಲುಲ್ಲಾಹ್(ಸ) ಅವರನ್ನು ಅವಮಾನಿಸಿದ್ದಾರೆ ಎಂದು ಘೋಷಿಸುತ್ತಾರೆ. ಇಂತಹವರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಓರ್ವ ವ್ಯಕ್ತಿಯನ್ನು ಪ್ರೀತಿಸುವವನು ಎಂದೆನಿಸಿಕೊಳ್ಳುವವನು. ಒಂದು ವೇಳೆ ಅಂತಹ ಪ್ರೀಯರು ಸಾವಿರಾರು ಸಂಖ್ಯೆಯಲ್ಲಿದ್ದರೆ ಅವನ ಪ್ರೀತಿ ಮತ್ತು ವಾತ್ಸಲ್ಯದ ವೈಶಿಷ್ಟವೇನು?"

ಅಂದರೆ, ಒಬ್ಬ ವ್ಯಕ್ತಿಯನ್ನು ಯಾರೊಬ್ಬರ ಪ್ರೇಮಿ ಎಂದು ಕರೆಯಲಾಗುತ್ತದೆಯೋ ಅಂತಹವನು ಅದೇ ಸಮಯದಲ್ಲಿ, ಇನ್ನೂ ಅನೇಕ ಪ್ರೇಮಿಗಳು ಮಾಡಲ್ಪಟ್ಟಿದ್ದಾನೆ ಎಂದಾದರೆ, ಪ್ರೀತಿಸುವವನ ಲಕ್ಷಣವೇನು? "ಹಾಗಾದರೆ ರಸೂಲುಲ್ಲಾಹ್(ಸ) ರವರ ಪ್ರೀತಿ ಮತ್ತು ವಾತ್ಸಲ್ಯದಲ್ಲಿ ಅವರು ನಾಶವಾದರೆ," ನಮಗೆ ರಸೂಲುಲ್ಲಾಹ್(ಸ)ರವರ ಮೇಲೆ ಪ್ರೀತಿ ಇದೆ ಎಂದು ಹೇಳಿಕೊಳ್ಳುವ ಈ ಜನರು. ರಸೂಲುಲ್ಲಾಹ್(ಸ.ಅ)ರವರ ಪ್ರೇಮದಲ್ಲಿ ಸರ್ವನಾಶವಾಗಿದ್ದರೆ ಅವರೇ ಹೇಳಿಕೊಳ್ಳುವಂತೆ ಸಾವಿರಾರು ಮಠಗಳನ್ನು ಹೊಂದಿ ದೇಗುಲಗಳನ್ನು ಪೂಜಿಸುವುದರಲ್ಲಿ ಅರ್ಥವೇನು?" ಅನೇಕ ಮಠಗಳಿವೆ, ದರ್ಗಾಗಳಿವೆ ಅಲ್ಲಿಗೆಲ್ಲ ಇವರೆಲ್ಲರು ಏಕೆ ಹೋಗುತ್ತಾರೆ, ಅಲ್ಲಿ ಇವರು ಕಾಣಿಕೆಗಳನ್ನು ನೀಡುತ್ತಾರೆ, ಪ್ರಾರ್ಥನೆ ಸಲ್ಲಿಸುತ್ತಾರೆ ಅದಲ್ಲದೆ ಸಜದಗಳನ್ನು ಸಹ ಮಾಡುತ್ತಾರೆ. ಅವರು ಹೇಳುತ್ತಾರೆ: ಮದೀನಾ ತಯ್ಯಬಕ್ಕೆ ಹೋಗುತ್ತಾರೆ ಆದರೆ ಅಜ್ಮೀರ್ ಮತ್ತು ಇತರ ಮಠಗಳಿಗೂ ಸಹ ಬರಿ–ತಲೆ ಮತ್ತು ಬರಿಗಾಲಿನಲ್ಲಿ ಹೋಗುತ್ತಾರೆ. ಪಾಕ್ ಪಟನ್‌ನ ಕಿಟಕಿಯ ಮೂಲಕ ಹಾದುಹೋಗುವುದು ಮೋಕ್ಷಕ್ಕೆ ಸಾಕಾಗುತ್ತದೆ ಎಂದು ಪರಿಗಣಿಸುತ್ತಾರೆ. ಯಾರೋ ಧ್ವಜ ಹಾಕಿದ್ದಾರೆ. ಅಥವಾ ಯಾರೋ ಮತ್ತೊಂದು ರೂಪವನ್ನು ಪಡೆದುಕೊಂಡಿದ್ದಾರೆ ಈ ಜನರ ಉರ್ಸ್ ಮತ್ತು ಮೇಳಗಳನ್ನು ನೋಡಿದಾಗ, ಒಬ್ಬ ನಿಜವಾದ ಮುಸಲ್ಮಾನನ ಹೃದಯವು ಅವರು ಅನುಸರಿಸುತ್ತಿರುವ ಮಾರ್ಗವನ್ನು

ಕಂಡು ಕಂಪಿತವಾಗುತ್ತದೆ. ಪಾಕಿಸ್ತಾನ ಮತ್ತು ಹಿಂದುಸ್ತಾನದಲ್ಲಿ ಈ ವಿಷಯಗಳು ಸಾಮಾನ್ಯವಾಗಿ ಕಾಣುತ್ತವೆ. ಒಂದು ವೇಳೆ ಅಲ್ಲಾಹನಿಗೆ ಇಸ್ಲಾಮ್ ಧರ್ಮದ ಬಗ್ಗೆ ಕಾಳಜಿ ಇರುತ್ತಿಲ್ಲದಿದ್ದರೆ ಮತ್ತು **ಇನ್ನದ್ದೀನ ಇಂದಲ್ಲಾಹಿಲ್ ಇಸ್ಲಾಮು** (ಆಲಿ ಇಮ್ರಾನ್:20) **"**ಮಹೋನ್ನತನಾದ ಅಲ್ಲಾಹನ ವಾಕ್ಯವಿರುತ್ತಿರಲಿಲ್ಲವಾದರೆ ಮತ್ತು ಅಲ್ಲಾಹನು **ಇನ್ನಾ ನಹ್ನು ನಝ್ಝಲ್‌ನಝ್ಝಿಕ್ರ ವ ಇನ್ನಾ ಲಹೂ ಲಹಾಫಿಝೂನ್** (ಅಲ್‌ಹಿಜರ್: 10) ಇರುತ್ತಿಲ್ಲದಿದ್ದರೆ ಇಸ್ಲಾಂನ ಸ್ಥಿತಿಯು ಅದರ ಅಳಿವಿನ ಬಗ್ಗೆ ಯಾವುದೇ ಸಂದೇಹವಿರುತ್ತಿರಲಿಲ್ಲ ಎಂದು ಮಾರ್ಪಡುತ್ತಿತ್ತು. ಆದರೆ ಸರ್ವಶಕ್ತನಾದ ಅಲ್ಲಾಹನು ಅದರ ಸ್ವಾಭಿಮಾನವು ಉತ್ಸುಕವಾಯಿತು ಮತ್ತು ಆತನ ಕರುಣೆ ಮತ್ತು ರಕ್ಷಣೆಯ ಭರವಸೆಯು ರಸೂಲುಲ್ಲಾಹ್(ಸ) ಅವರ ಸದೃಶರೂಪವನ್ನು ಮತ್ತೆ ಬಹಿರಂಗಪಡಿಸಬೇಕು ಮತ್ತು ಈ ಯುಗದಲ್ಲಿ ಅವನ ಪ್ರವಾದಿತ್ವವನ್ನು ಹೊಸದಾಗಿ ತೋರಿಸಬೇಕೆಂದು ಒತ್ತಾಯಿಸಿದನು. ಆದ್ದರಿಂದ ಆತನು ಈ ಜಮಾಅತ್ ಅನ್ನು ಸ್ಥಾಪಿಸಿದನು ಮತ್ತು ನನ್ನನ್ನು ವಾಗ್ದಾತ್ತ ಮಸೀಹ್ ಹಾಗೂ ಮಹದಿ ಎನ್ನಾಗಿ ಕಳುಹಿಸಿದನು." (ಮಲ್‌ಫೂಝಾತ್, ಸಂಪುಟ–3, ಪುಟ–92, 1984 ಆವೃತ್ತಿ) ಆದ್ದರಿಂದ ಇದು ನಮ್ಮ ಕರ್ತವ್ಯವಾಗಿದೆ ಮತ್ತು ನಾವು ನಮ್ಮ ಮತ್ತು ಇತರರ ನಡುವೆ ಸ್ಪಷ್ಟವಾದ ವ್ಯತ್ಯಾಸವನ್ನು ತೋರಿಸಿದಾಗ ಮಾತ್ರ ನಾವು ಬೈಅತ್‌ನ ಹಕ್ಕನ್ನು ಈಡೇರಿಸಬಹುದು ಮತ್ತು ರಸೂಲುಲ್ಲಾಹ್(ಸ) ಅವರ ದೈವಿಕ ಪ್ರೀತಿ ಮತ್ತು ಪ್ರೀತಿಯ ಅಸಾಧಾರಣ ಉದಾಹರಣೆಗಳನ್ನು ಹೊಂದಿಸಬಹುದು.

ನಿಮ್ಮ ನಾಲಿಗೆಯಲ್ಲಿ ತಸ್ಬೀಹ್, ತಹ್ಮೀದ್ ಮತ್ತು ದುರೂದ್ ತುಂಬಿರಲು ಪ್ರಯತ್ನಿಸಿ. ಸಹಾಬರವರ ಮಾದರಿಯನ್ನು ಅಳವಡಿಸಿಕೊಳ್ಳಲು ಮತ್ತು ಅವರಂತೆಯೇ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಸೃಷ್ಟಿಸಲು ಗಮನ ಕೊಡುತ್ತಾ, ಅವರು ಹೇಳುತ್ತಾರೆ: ಸಹಾಬಿಯರಂತಹ ಮಾದರಿಯನ್ನು ಅಳವಡಿಸಿಕೊಳ್ಳಲು ಮತ್ತು ಅವರಂಥ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ತೋರಿಸಲು ಗಮನ ಸೆಳೆಯುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿದ ಮತ್ತು ಅದರ ಬೆಂಬಲಕ್ಕಾಗಿ ನೂರಾರು ದೃಷ್ಟಾಂತಗಳನ್ನು ಪ್ರಕಟಗೊಳಿಸಿದ ಉದ್ದೇಶವು ಇದು ಸಹಾಬರಂತಹ ಜಮಾಅತ್ ಆಗಿಕೊಂಡು ಅತ್ಯುತ್ತಮ ಕಾಲಘಟ್ಟ ಬರಬೇಕು ಎಂದಾಗಿದೆ. ಈ ಜಮಾಅತಿನಲ್ಲಿ ಪ್ರವೇಶಿಸುವವರು **ಆಖರೀನ ಮಿನ್‌ಹುಂ** (ಅವರ ಪೈಕಿಯ ಇನ್ನೊಂದು ಜನತೆ) ಎಂಬ ಸಂಘದಲ್ಲಿ ಪ್ರವೇಶಿಸುತ್ತಿರುವುದರಿಂದ ಅವರು ದುಷ್ಕೃತ್ಯಗಳ ಬಟ್ಟೆಗಳನ್ನು ಕಳಚಿಕೊಂಡು ತಮ್ಮ ಸಕಲ ಗಮನವನ್ನು ಅಲ್ಲಾಹನ ಕಡೆಗೆ ಮಾಡಲಿ. ಇಸ್ಲಾಮಿನ ಮೇಲೆ ಮೂರು ಕಾಲಗಳು ದಾಟಿ ಹೋಗಿವೆ. ಒಂದು **ಖುರೂನೆ ಸಲಾಸ**. ಅನಂತರ **ಫೈಜೀ ಅಲ್‌ವಜಿನ** ಕಾಲ. ಅವರು ನನ್ನಿಂದಲ್ಲ ಮತ್ತು ನಾನು ಅವರಿಂದಲ್ಲ ಎಂದು ಆ ಕಾಲದ ಜನರ ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಮೂರನೆಯದ್ದು ಹಝ್ರತ್ ಮಸೀಹ್ ಮೌಊದ್(ಅ)ರ ಕಾಲಘಟ್ಟವಾಗಿದೆ. ಅದು ಸತ್ಯದಲ್ಲಿ ಹಝ್ರತ್ ಪೈಗಂಬರ್(ಸ)ರ ಕಾಲವಾಗಿದೆ. ಸಹಾಬಿಯರ ರೀತಿಗೆ ವಿರುದ್ಧವಾಗಿರುವ ಒಂದು ಕಾಲ ಕೂಡ ಮಧ್ಯದಲ್ಲಿ ಇದೆ ಎಂದು **ಆಖರೀನ ಮಿನ್‌ಹುಂ ಲಮ್ಮಾ ಯಲ್‌ಹಖೂ ಬಿಹಿಂ** (ಅವರೊಂದಿಗೆ ಇಲ್ಲಿಯ ವರೆಗೂ ಸೇರಿರದ ಅವರ ಪೈಕಿಯ ಇನ್ನೊಂದು ಜನತೆ) ಎಂಬ ವಚನದಿಂದ ಸ್ಪಷ್ಟವಾಗುತ್ತದೆ. ಎಂದರೆ ಅವರ ಕೃತ್ಯಗಳು ಬೇರೆಯೇ ಆಗಿರುವುವು. ಆ ಸಾವಿರ ವರ್ಷಗಳ ನಡುವೆ ಇಸ್ಲಾಂ ಅನೇಕ ವಿಪತ್ತುಗಳಿಗೆ ಗುರಿಯಾಗಿತ್ತು. ಧರ್ಮ ಕೆಡುತ್ತಾ ಹೋಯಿತು ಮತ್ತು ಕೆಲವರನ್ನು ಬಿಟ್ಟರೆ ಉಳಿದ ಎಲ್ಲರೂ ಇಸ್ಲಾಮನ್ನು ಕೈಬಿಟ್ಟರು ಮತ್ತು ಅನೇಕ ಪಂಗಡಗಳು ಉಂಟಾದುವು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮತ್ತೊಂದು ದೊಡ್ಡದಾದ ಒಂದು ಸಂಘವನ್ನು ಉಂಟುಮಾಡಲು ಅಲ್ಲಾಹನು ಉದ್ದೇಶಿಸಿದ್ದಾನೆ. ಅದು ಸಹಾಬಿಯರ ಸಂಘವೆಂದು ಕರೆಯಲ್ಪಡುವುದು. ಆದರೆ ಅಲ್ಲಾಹನು ಸ್ಥಾಪಿಸುವ ಜಮಾಅತುಗಳು ಮೆಲ್ಲ ಮೆಲ್ಲನೇ ಪ್ರಗತಿ ಹೊಂದುವುದು ಎಂಬುದು ಸಹಜ ನಿಯಮವಾಗಿದೆ. ಆದ್ದರಿಂದ ನಮ್ಮ ಜಮಾಅತಿನ ಅಭಿವೃದ್ಧಿ ಕೂಡ ಸ್ವಲ್ಪ ಸ್ವಲ್ಪವಾಗಿ ಕೃಷಿಯ ಹಾಗೆ ಆಗುವುದು. ಅದರ ಗುರಿಗಳು ಮತ್ತು ಉದ್ದೇಶಗಳು ನೆಲದಲ್ಲಿ ಬಿತ್ತಲಾದ ಬೀಜದ ಹಾಗೆಯಾಗಿದೆ. ಅವು ಈಗ ಬಹಳ ದೂರದಲ್ಲಿವೆ. ಅದರ ಸ್ಥಾಪನೆಯಿಂದ ಅಲ್ಲಾಹನು ಉದ್ದೇಶಿಸುವುದನ್ನು ಅಷ್ಟು ಸುಲಭದಲ್ಲಿ ಗಳಿಸಲು ಸಾಧ್ಯವಲ್ಲ.

ಏಕದೇವ ವಿಶ್ವಾಸವನ್ನು ಮನಸ್ಸಾರೆ ಒಪ್ಪುವುದು, ದೇವಸ್ಮರಣೆ, ತನ್ನ ಸಹೋದರನ ಹಕ್ಕುಗಳನ್ನು ಈಡೇರಿಸುವುದರಲ್ಲಿ ವಿಶೇಷವಾದ ಉತ್ಸಾಹ. (ಮಲ್‌ಫೂಝಾತ್, ಸಂಪುಟ–3, ಪುಟ–94–95, 1984 ಆವೃತ್ತಿ) ಇವುಗಳಾಗಿವೆ ಆ ಉದ್ದೇಶಗಳು. ಅವುಗಳನ್ನು ಗಳಿಸಲು ನಾವು ಪ್ರಯತ್ನಿಸಬೇಕು. ಆಗಲೇ ನಾವು ಜಮಾಅತಿನ ಅಭಿವೃದ್ಧಿಗಳನ್ನು ನೋಡುವೆವು.

ಪವಿತ್ರ ಖುರ್‌ಆನನ್ನು ವಿಶೇಷವಾಗಿ ಗಮನವಿಟ್ಟು ಓದುವುದರ ಕಡೆಗೆ ಗಮನ ಸೆಳೆಯುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೆನಪಿಡಬೇಕಾದ ಸಂಗತಿಯೇನೆಂದರೆ, ಹಿಂದಿನ ದೈವಿಕ ಗ್ರಂಥಗಳು ಮತ್ತು ಪ್ರವಾದಿಗಳ ಮೇಲೆ ಪವಿತ್ರ ಖುರ್‌ಆನ್ ಔದಾರ್ಯವನ್ನು ಮಾಡಿದೆ. ಕಥೆಯ ರೂಪದಲ್ಲಿದ್ದ ಅವುಗಳ ಪಾಠಗಳಿಗೆ ಅಧ್ಯಾಪನೆಗಳ ರೂಪವನ್ನು ನೀಡಿದೆ. ನಾನು ಸತ್ಯವಾಗಿಯೂ ಹೇಳುತ್ತೇನೆ: ಪವಿತ್ರ ಖುರ್‌ಆನ್ ಪಠಿಸುವ ತನಕ ಯಾವನೇ ವ್ಯಕ್ತಿ ಆ ಕಥೆಗಳಿಂದ ಮುಕ್ತಿಯನ್ನು ಗಳಿಸಲಾರನು. ಏಕೆಂದರೆ ಪವಿತ್ರ ಖುರ್‌ಆನ್ ಮಾತ್ರವೇ ತೀರ್ಪುದಾಯಕ ವಚನವಾಗಿದೆ ಎಂಬುದು ಅದರ ಮಹತ್ವವಾಗಿದೆ. ಪವಿತ್ರ ಖುರ್‌ಆನ್ ಅಪ್ಪಟ ಪ್ರಕಾಶ, ಯುಕ್ತಿ ಮತ್ತು ಜ್ಞಾನವಾಗಿದೆ ಎಂದು ಅಲ್ಲಾಹನು ಹೇಳಿದ ರೀತಿಯಲ್ಲೇ ನಾವು ತೋರಿಸಲು ಬಯಸುತ್ತೇವೆ ಎಂಬುದರಿಂದಲೇ ನಮ್ಮ ಎದುರಾಳಿಗಳು ನಮ್ಮನ್ನು ವಿರೋಧಿಸುವುದಲ್ಲಿ ತೀವ್ರತೆ ತೋರಿಸುತ್ತಾರೆ. ಪವಿತ್ರ ಖುರ್‌ಆನನ್ನು ಬಹಳವಾಗಿ ಒಂದು ತತ್ವಜ್ಞಾನವೆಂದು ಅರಿತುಕೊಂಡು ಓದಿರಿ. (ಮಲ್‌ಫೂಝಾತ್, ಸಂಪುಟ–3, ಪುಟ–155, 1984 ಆವೃತ್ತಿ) ಅದರ ತಾತ್ಪರ್ಯಗಳು, ಅರ್ಥಗಳು ಮತ್ತು ವ್ಯಾಖ್ಯಾನದ ಕುರಿತು ಪ್ರತಿಯೊಬ್ಬ ಅಹ್ಮದಿ ಗಮನಿಸಬೇಕು.

ನಂತರ, ಒಳ್ಳೆಯ ಕಾರ್ಯಗಳಿಗೆ ಹೆಚ್ಚು ಗಮನವನ್ನು ಸೆಳೆಯುವುದು ಮತ್ತು ಒಳ್ಳೆಯ ಕಾರ್ಯಗಳ ವ್ಯಾಖ್ಯಾನ ಏನು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳುತ್ತಾರೆ: **"**ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಸತ್ಯವಿಶ್ವಾಸದೊಂದಿಗೆ ನೀತಿವಂತ ಕಾರ್ಯಗಳನ್ನು ಇರಿಸಿದ್ದಾನೆ. ಒಳ್ಳೆಯ ಕಾರ್ಯಗಳು ಎಂದರೆ ಅದರಲ್ಲಿ ಕಿಡಿಗೇಡಿತನವಿರಬಾರದು. ಮಾನವ ಕ್ರಿಯೆಗಳಲ್ಲಿ ಯಾವಾಗಲೂ ಕಳ್ಳನಿರುತ್ತಾನೆ ಎಂಬುದನ್ನು ನೆನಪಿಡಿ. ಹಾಗಾದರೇನು? ಯಾರು ಕಳ್ಳರು? ಬೂಟಾಟಿಕೆ (ಒಬ್ಬ ವ್ಯಕ್ತಿ ತೋರ್ಪಡಿಸುವ ಕಾರ್ಯವನ್ನು ಮಾಡಿದಾಗ) ಉಜುಬ್ (ಆ ಕೃತ್ಯವನ್ನು ಮಾಡುವುದರಿಂದ ಅವನು ತನ್ನಲ್ಲಿಯೇ ಸಂತೋಷಪಡುತ್ತಾನೆ)**"** ನಾನು ಅಂತಹ ದೊಡ್ಡ ಒಳ್ಳೆಯ ಕಾರ್ಯವನ್ನು ಮಾಡಿದ್ದೇನೆ ಎಂದು. **"**ಮತ್ತು ಅವನಿಂದ ಸಂಭವಿಸುವ ವಿಭಿನ್ನ ರೀತಿಯ ಪಾಪಗಳು.**"** ಇವೆಲ್ಲವು ಕಳ್ಳರು. **"**ಇದರಿಂದಾಗಿ ಅವರ ಎಲ್ಲಾ ಕಾರ್ಯಗಳು ಅಮಾನ್ಯವಾಗುತ್ತವೆ. ಒಳ್ಳೆಯ ಕಾರ್ಯಗಳು ಎಂದರೆ ಹಿಂಸಾಚಾರ, ಬೂಟಾಟಿಕೆ, ದುರಹಂಕಾರ ಮತ್ತು ಮಾನವ ಹಕ್ಕುಗಳ ವಿನಾಶದ ಬಗ್ಗೆ ಯಾವುದೇ ಯೋಚನೆ ಅವನಲ್ಲಿ ಬರಬಾರದು. ಒಬ್ಬ ವ್ಯಕ್ತಿಯು ಪರಲೋಕದಲ್ಲಿ ಸತ್ಕರ್ಮಗಳನ್ನು ಮಾಡುವುದರಿಂದ ಹೇಗೆ ಮೋಕ್ಷ ಪಡೆಯುತ್ತಾನೋ ಅದೇ ರೀತಿಯಲ್ಲಿ ಅವನು ಇಹಲೋಕದಲ್ಲೂ ಮೋಕ್ಷವನ್ನು ಪಡೆಯುತ್ತಾನೆ.

ಇಡೀ ಮನೆಯಲ್ಲಿ ಒಬ್ಬ ವ್ಯಕ್ತಿಯೂ ನೀತಿವಂತನಾಗಿದ್ದರೆ, ಆಗ ಇಡೀ ಮನೆಯು ರಕ್ಷಣೆಯಲ್ಲಿರುತ್ತದೆ.

ನೀವು ನೀತಿವಂತ ಕಾರ್ಯಗಳನ್ನು ಹೊಂದಿಲ್ಲದಿದ್ದರೆ, ಕೇವಲ ನಂಬಿಕೆಯಿಂದ ಯಾವುದೇ ಪ್ರಯೋಜನವಿಲ್ಲ ಎಂದು ಅರ್ಥಮಾಡಿಕೊಳ್ಳಿ. ವೈದ್ಯರು ಔಷಧ ಚೀಟಿ ಬರೆದುಕೊಟ್ಟರೆ ಅದರಲ್ಲಿ ಬರೆದಿರುವುದನ್ನು ತೆಗೆದುಕೊಂಡು ಕುಡಿಯಬೇಕು. ಈ ಔಷಧಗಳನ್ನು ಬಳಸದೆ ಪ್ರಿಸ್ಕ್ರಿಪ್ಷನ್ ಇಟ್ಟುಕೊಂಡರೆ ಏನು ಪ್ರಯೋಜನ. ಆದ್ದರಿಂದ ಹಝ್ರತ್ ಮಸೀಹ್ ಮೌಊದ್(ಅ)ರ ಉಪದೇಶಗಳನ್ನು ಪಾಲಿಸುವುದು ನಮ್ಮ ಕೆಲಸವಾಗಿದೆ. ಇದು ಮುಖ್ಯವಾದ ಸಂಗತಿಯಾಗಿದೆ. ಇಲ್ಲದಿದ್ದರೆ ಬೈಅತಿನ ಯಾವುದೇ ಪ್ರಯೋಜನವಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈಗ ನೀವು ಪಶ್ಚಾತ್ತಾಪ ಮಾಡಿದ್ದೀರಿ. ಈಗ ಈ ಪಶ್ಚಾತ್ತಾಪದಿಂದ ನೀವು ನಿಮ್ಮನ್ನು ಸ್ವತಃ ಎಷ್ಟು ಶುಚಿಗೊಳಿಸಿದ್ದೀರಿ ಎಂದು ಇನ್ನು ಮುಂದೆ ಅಲ್ಲಾಹನು ನೋಡಲು ಬಯಸುತ್ತಾನೆ. ಸದಾ ಇಸ್ತಿಗ್‌ಫಾರ್ ಮಾಡುತ್ತಾ ಇರಿ. ಇಂದಿನ ಕಾಲದಲ್ಲಿ ಹಝ್ರತ್ ಆದಂ(ಅ)ರ ಪ್ರಾರ್ಥನೆಯನ್ನು ಬಹಳವಾಗಿ ಮಾಡಬೇಕು. **ರಬ್ಬನಾ ಝ್ಲಲಮ್‌ನಾ ಅನ್‌ಫುಸನಾ. ವ ಇಲ್ಲಮ್ ತಗ್‌ಫಿರ್‌ಲನಾ ವ ತರ್‌ಹಮ್‌ನಾ ಲನಕೂನನ್ನ ಮಿನಲ್ ಖಾಸಿರೀನ್**. (ಅರ್ಥ: 'ನಮ್ಮ ಪ್ರಭೂ, ನಾವೇ ನಮ್ಮ ಮೇಲೆ ಅಕ್ರಮವಾಗಿ ವರ್ತಿಸಿದೆವು. ನೀನು ನಮ್ಮನ್ನು ಕ್ಷಮಿಸಿಬಿಟ್ಟು ನಮ್ಮ ಮೇಲೆ ಕರುಣೆ ತೋರಿಸದಿದ್ದರೆ ಖಂಡಿತವಾಗಿಯೂ ನಾವು ನಷ್ಟಹೊಂದಿದವರಾಗುವೆವು.' ಈ ದುಆ ಮೊದಲೇ ಸ್ವೀಕಾರಗೊಂಡಿದೆ. ಅಸಡ್ಡೆಯಿಂದ ಜೀವನವನ್ನು ಸಾಗಿಸಬೇಡಿರಿ. ಯಾರು ಅಸಡ್ಡೆಯಿಂದ ಜೀವನ ಸಾಗಿಸುವುದಿಲ್ಲವೋ ಅವರು ಸಹಿಸಲು ಸಾಧ್ಯವಾಗದ ವಿಪತ್ತಿಗೆ ತುತ್ತಾಗಲಾರರು. ಯಾವುದೇ ವಿಪತ್ತು ಅಲ್ಲಾಹನ ಇಂಗಿತವಿಲ್ಲದೇ ಬರುವುದಿಲ್ಲ. **ರಬ್ಬಿ ಕುಲ್ಲಿ ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್ನೀ ವನ್‌ಸುರ್‌ನೀ ವರ್‌ಹಮ್‌ನೀ**. ಎಂಬ ದುಆ ನನಗೆ ಇಲ್‌ಹಾಮ್ ಆಗಿ ಅವತೀರ್ಣಗೊಂಡಿತ್ತು. ಈ ಪ್ರಾರ್ಥನೆಯನ್ನು ಕೂಡ ಮಾಡಬೇಕು.
(ಮಲ್‌ಫೂಝಾತ್, ಸಂಪುಟ–4, ಪುಟ–274–276, 1984 ಆವೃತ್ತಿ)

ಮತ್ತೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೆನಪಿಡಿರಿ, ಬುದ್ಧಿ ಆತ್ಮವನ್ನು ಶುದ್ಧಿಗೊಳಿಸುವುದರಿಂದ ಉಂಟಾಗುತ್ತದೆ. ಎಷ್ಟರ ಮಟ್ಟಿಗೆ ಮನುಷ್ಯನು ಆತ್ಮಶುದ್ಧಿಯನ್ನು ಮಾಡುತ್ತಾನೋ ಅಷ್ಟೇ ಬುದ್ಧಿ ತೀಕ್ಷ್ಣಗೊಳ್ಳುತ್ತದೆ. ದೇವದೂತರು ಮುಂದೆ ಬಂದು ಅವನಿಗೆ ನೆರವಾಗುತ್ತಾರೆ.

ಆದರೆ ಕೊಳಕು ಜೀವಿತವನ್ನು ಸಾಗಿಸುವವನ ಮೆದುಳಿನಲ್ಲಿ ಪ್ರಕಾಶ ಉಂಟಾಗಲಾರದು. ದೇವಭಕ್ತಿಯನ್ನು ಕೈಗೊಳ್ಳಿರಿ. ಅಲ್ಲಾಹನು ನಿಮ್ಮ ಜೊತೆಗೆ ಇರುವನು. ದೇವಭಕ್ತಿಯ ನೈಜತೆಯನ್ನು ಅರಿಯಲು ಸತ್ಯವಂತನ ಜೊತೆಗೆ ಇರಿ. ಇದೇ ನಮ್ಮ ಉದ್ದೇಶವಾಗಿದೆ. ಇದನ್ನೇ ಸ್ಥಾಪಿಸಲು ನಾವು ಬಯಸುತ್ತಿದ್ದೇವೆ.
(ಮಲ್‌ಫೂಝಾತ್, ಸಂಪುಟ–4, ಪುಟ–448, 1984 ಆವೃತ್ತಿ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೆ ಹೇಳತ್ತಾರೆ: “ನಮ್ಮ ಜಮಾಅತ್ತಿನವರು ಯಾವಾಗಲು ಈ ಉಪದೇಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನನಗೆ ಆಗಾಗ ಯೋಚನೆ ಬರುವುದೇನೆಂದರೆ ಜಗತ್ತಿನಲ್ಲಿ ಸಂಬಂಧಗಳಿರುತ್ತವೆ, ಅವುಗಳಲ್ಲಿ ಕೆಲವು ಸೌಂದರ್ಯದ ವಿಷಯದಲ್ಲಿ, ಕೆಲವು ಕುಟುಂಬಗಳು ಸಂಪತ್ತಿನ ವಿಷಯದಲ್ಲಿ ಮತ್ತು ಕೆಲವು ಅಧಿಕಾರದ ವಿಷಯದಲ್ಲಿ ಇರುತ್ತವೆ. ಆದರೆ ಸರ್ವಶಕ್ತನಾದ ಅಲ್ಲಾಹನಿಗೆ ಈ ವಿಷಯದಲ್ಲಿ ಯಾವ ಕಾಳಜಿವಹಿಸುವುದಿಲ್ಲ. ಸರ್ವಶಕ್ತನಾದ ಅಲ್ಲಾಹನು **ಇನ್ನ ಕಕ್ರಮಕುಮ್ ಇಂದಲ್ಲಾಹಿ ಅತ್ಖಾಕುಮ್** (ಅಲ್‌ಹುಜರಾತ್:14) ಅಂದರೆ ಅಲ್ಲಾಹನ ದೃಷ್ಟಿಯಲ್ಲಿ ಧರ್ಮನಿಷ್ಠನಾದವನು ಗೌರವಾನ್ವಿತನಾಗಿದ್ದಾನೆ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಈಗ, ಅಲ್ಲಾಹನು ಧರ್ಮನಿಷ್ಠರ ಗುಂಪನ್ನು ಮಾತ್ರ ಇರಿಸಿ ಇತರರನ್ನು ನಾಶಮಾಡುತ್ತಾನೆ. ಇದು ನಿರ್ಣಾಯಕ ಸ್ಥಳವಾಗಿದೆ ಮತ್ತು ಈ ಸ್ಥಳದಲ್ಲಿ ಇಬ್ಬರು ನಿಲ್ಲಲು ಸಾಧ್ಯವಿಲ್ಲ, ಧರ್ಮನಿಷ್ಠರು ಮತ್ತು ದುಷ್ಟರು, ಅಶುದ್ಧರು ಒಂದೇ ಸ್ಥಳದಲ್ಲಿ ಇರಲು ಸಾಧ್ಯವಿಲ್ಲ. ಧರ್ಮನಿಷ್ಠರು ನಿಲ್ಲುವರು ಮತ್ತು ದುಷ್ಟರು ನಾಶವಾಗುವುದು ಖಚಿತವಾದ ವಿಷಯವಾಗಿದೆ ಮತ್ತು ತನಗೆ ಯಾರು ಧರ್ಮನಿಷ್ಠರು ಎಂದು ಅಲ್ಲಾಹನಿಗೆ ಸ್ವತಃ ತಿಳಿದಿದೆ. ಹಾಗಾಗಿ ಇದೊಂದು ದೊಡ್ಡ ಭೀತಿಯಾಗಿದೆ.

ಹೀಗಾಗಿ ಧರ್ಮನಿಷ್ಠನಾದವನು ಸೌಭಾಗ್ಯಶಾಲಿಯಾಗಿದ್ದಾನೆ ಮತ್ತು ದುಷ್ಟನು ಶಾಪಕ್ಕೆ ಒಳಗಾದವನಾಗಿದ್ದಾನೆ. (ಮಲ್‌ಫೂಝಾತ್, ಸಂಪುಟ–3, ಪುಟಗಳು 238–239, 1984 ಆವೃತ್ತಿ)

ಒಟ್ಟಿನಲ್ಲಿ ಸದಾ ತೌಬ ಮತ್ತು ಇಸ್ತಿಗ್‌ಫಾರ್ ಮಾಡಲು ಹಾಗೂ ಶೈತಾನನಿಂದ ರಕ್ಷಣೆ ಪಡೆಯುತ್ತಾ ಅಲ್ಲಾಹನ ಅಭಯದಲ್ಲಿ ಬರಲು ನಾವು ಪ್ರಯತ್ನಿಸಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಜಮಾಅತಿನಲ್ಲಿ ಪ್ರವೇಶಿಸಿ ನಿಮ್ಮ ಅಸ್ತಿತ್ವ ಬೇರೆಯೇ ಆಗಬೇಕು. ನೀವು ಪೂರ್ಣವಾಗಿಯೂ ಹೊಸ ಜೀವಿತವನ್ನು ಸಾಗಿಸುವ ಮನುಷ್ಯರಾಗಬೇಕು. ಹಝ್ರತ್ ಮಸೀಹ್ ಮೌಊದ್(ಅ) ನಮ್ಮನ್ನು ಮಾಡಲು ಬಯಸಿದಂತೆ ನಾವು ಆಗಿದ್ದೇವೆಯೇ ಎಂದು ಲೋಕದ ಪ್ರತಿಯೊಬ್ಬ ಅಹ್ಮದಿ ಯೋಚಿಸಬೇಕು. ಅಲ್ಲವೆಂದಾದರೆ, ನಾವು ಯಾವಾಗಲೂ ಅದಕ್ಕಾಗಿ ಪ್ರಯತ್ನ ಮತ್ತು ದುಆ ಮಾಡುತ್ತಿರಬೇಕು.

ಸರ್ವಶಕ್ತನಾದ ಅಲ್ಲಾಹನು ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಉಪದೇಶಗಳು ಹಾಗೂ ಅವರ ಸಲಹೆಗಳ, ಆಶಯಗಳ ಪ್ರಕಾರ ನಮ್ಮ ಜೀವನವನ್ನು ನಡೆಸುವ ಸಾಮರ್ಥ್ಯ ನಮಗೆ ನೀಡಲಿ ಮತ್ತು ವಾಸ್ತವದಲ್ಲಿ ನಾವು ನಮ್ಮ ಜೀವನದಲ್ಲಿ ಶುದ್ಧ ಬದಲಾವಣೆಯನ್ನು ಸೃಷ್ಟಿಸುವವರಾಗಬೇಕು.

ಜಲ್ಸದ ಈ ದಿನಗಳಲ್ಲಿ, ಖಾದಿಯಾನ್‌ನಲ್ಲಿ ಮತ್ತು ಜಲ್ಸಗಳು ನಡೆಯುತ್ತಿರುವ ಪ್ರತಿಯೊಂದು ದೇಶಗಳಲ್ಲಿ, ಸೇರುವ ಪ್ರತಿಯೊಬ್ಬರೂ ವಿಶೇಷ ಪ್ರಾರ್ಥನೆಯಲ್ಲಿ ತಮ್ಮ ಸಮಯವನ್ನು ಕಳೆಯಬೇಕು ಮತ್ತು ಸರ್ವಶಕ್ತನಾದ ಅಲ್ಲಾಹನು ನಮಗೆ ಬೈಅತ್‌ನ ಹಕ್ಕನ್ನು ಈಡೇರಿಸುವ ಸಾಮರ್ಥ್ಯವನ್ನು ನೀಡಲಿ ಎಂದು ಪ್ರಾರ್ಥಿಸಬೇಕು.

ಅದೇ ರೀತಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನಾವು ಏನಾಗಬೇಕೆಂದು ಬಯಸುತ್ತಾರೆ ಅಥವಾ ತಮ್ಮ ಜಮಾಅತ್ತಿನಿಂದ ಏನನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ಪ್ರಪಂಚದ ಪ್ರತಿಯೊಬ್ಬ ಅಹ್ಮದಿಯೂ ಯೋಚಿಸಬೇಕು. ಇಲ್ಲದಿದ್ದರೆ, ನಾವು ಯಾವಾಗಲೂ ಅದಕ್ಕಾಗಿ ಶ್ರಮಿಸಬೇಕು ಮತ್ತು ಪ್ರಾರ್ಥಿಸಬೇಕು. ಅಲ್ಲಾಹನು ನಮಗೆ ಇದನ್ನೆಲ್ಲ ದಯಪಾಲಿಸಲಿ.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುತ್ತೇನೆ. ಜನಾಝಗಳಿವೆ. ಒಂದು ಜನಾಝ ಹಾಝಿರ್ ಇದೆ. ಇದು ಫಝಲ್ ಅಹ್ಮದ್ ಡೋಗರ್ ಸಾಹಿಬ್‌ರದ್ದಾಗಿದೆ ಇವರು ಜಾಮಿಯಾ ಅಹ್ಮದಿಯಾ ಯು.ಕೆಯ ಕಾರ್ಕುನ್ ಆಗಿದ್ದರು. ಚೌಧರಿ ಅಲ್ಲಾಹ್ ದಿತ್ತ ಡೋಗರ್ ಸಾಹಿಬ್ ಅವರ ಪುತ್ರರಾಗಿದ್ದರು. 21 ಡಿಸೆಂಬರ್ ರಂದು 75 ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ದಿವಂಗತರು ಮೂಸಿಯಾಗಿದ್ದರು. ಅವರು ಪತ್ನಿ ಉಮ್ಮು ಫಝಲ್ ಸಾಹಿಬ ಮತ್ತು ನಾಲ್ವರು ಪುತ್ರರು ಮತ್ತು ಮೂರು ಪುತ್ರಿಯರನ್ನು ಅಗಲಿದ್ದಾರೆ. ಅವರು 1992 ರಲ್ಲಿ ಯುಕೆಗೆ ಬಂದರು. ಅದರ ನಂತರ ಅವರು ತಮ್ಮ ಕೆಲಸವನ್ನು ಮುಂದುವರೆಸಿದರು. ನಂತರ 1999 ರಲ್ಲಿ, ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟರು (ಡಖ್ಫೆ ಝಿಂದಗಿಯಾದರು) ಮತ್ತು ಹಝ್ರತ್ ಖಲೀಫತುಲ್ ಮಸಿಹ್ ರಾಬಿ(ರ)ರವರಿಗೆ ತಮ್ಮನ್ನು ಅರ್ಪಿಸಿದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಅವರು ಸಹಾನುಭೂತಿಯಿಂದ ಅವರ ವಖ್ಫನ್ನು ಸ್ವೀಕರಿಸಿದರು ಮತ್ತು ದೀರ್ಘಕಾಲದವರೆಗೆ ಹಝ್ರತ್ ಖಲೀಫತುಲ್ ಮಸಿಹ್ ರಾಬಿ(ರ) ರವರಿಗೆ ವೈಯಕ್ತಿಕವಾಗಿ ಸೇವೆ ಸಲ್ಲಿಸಲು ಅವಕಾಶ ನೀಡಿದರು. ತದನಂತರ, ನಾನು ಅವರನ್ನು ಜಾಮಿಯಾ ಯುಕೆಯಲ್ಲಿ ನೇಮಿಸಿದೆ. ಅವರು ಕೆಲವು ವಿಭಿನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ನಂತರ ಅವರನ್ನು ಗ್ರಂಥಾಲಯದ ಉಸ್ತುವಾರಿ ವಹಿಸಲಾಯಿತು ಮತ್ತು ಅವರು ಸಾಯುವವರೆಗೂ ಈ ಸ್ಥಾನದಲ್ಲಿ ಸೇವೆ ಸಲ್ಲಿಸಿದರು.

ಜಾಮಿಯಾ ಅಹ್ಮದಿಯ ಯುಕೆಯ ಗ್ರಂಥಾಲಯದ ತಯಾರಿಕೆಯಲ್ಲಿ ಅವರು ಬಹಳ ಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಲ್ಲಿ ಪ್ರಕಟವಾದ ರಿವ್ಯೂ ಆಫ್ ರಿಲಿಜಯನ್ಸ್‌ನ ಎಲ್ಲಾ ಆವೃತ್ತಿಗಳನ್ನು ಸ್ಕ್ಯಾನ್ ಮಾಡಿ ಅವುಗಳನ್ನು ಅಲ್ಲಿ ಇರಿಸಿದರು. ಪ್ರತಿಗಳನ್ನು ಮಾಡಿ ಅವುಗಳನ್ನು ಇರಿಸಿದರು. ರೂಹಾನಿ ಖಝಾಈನ್‌ನ Original ಆವೃತ್ತಿಯನ್ನು ಸಹ ಸ್ಕ್ಯಾನ್ ಮಾಡಿದ್ದಾರೆ. ಅವುಗಳ ನಕಲುಗಳನ್ನೂ ಮಾಡಿ. ಅವರ ಮಕ್ಕಳು ಯಾವಾಗಲೂ ಅಹ್ಮದಿಯಾ ಖಿಲಾಫತ್‌ನೊಂದಿಗೆ ಸಂಬಂಧ ಹೊಂದಿರಬೇಕು ಮತ್ತು ವಿಧೇಯರಾಗಿರಬೇಕು ಎಂಬುದು ಅವರ ದೊಡ್ಡ ಬಯಕೆಯಾಗಿದೆ ಎಂದು ಅವರ ಮಕ್ಕಳು ಹೇಳುತ್ತಾರೆ. ಒಬ್ಬ ವ್ಯಕ್ತಿಯು ಜಮಾಅತ್‌ನ ಸೇವೆಯಿಂದ ಎಂದಿಗೂ ನಿವೃತ್ತಿ ಹೊಂದಲು ಸಾಧ್ಯವಿಲ್ಲ ಎಂದು ಅವರು ಹೇಳುತ್ತಿದ್ದರು. ವಖ್ಫ್ ಎಂಬುದು ಕೊನೆಯ ಉಸಿರಿನವರೆಗೂ ಸೇವೆ ಸಲ್ಲಿಸುವ ಹೆಸರಾಗಿದೆ ಮತ್ತು ಕೊನೆಯ ಕ್ಷಣದವರೆಗೂ ಸೇವೆಯನ್ನು ಮುಂದುವರೆಸಬೇಕೆಂದು ದುಆಗಾಗಿ ಹೇಳುತ್ತಿದ್ದರು ಮತ್ತು ಸರ್ವಶಕ್ತನಾದ ಅಲ್ಲಾಹನು ಅವರ ಆಸೆಯನ್ನು ಪೂರೈಸಿದನು ಮತ್ತು ಆಸ್ಪತ್ರೆಗೆ ಹೋಗುವ ಎರಡು ದಿನಗಳ ಮೊದಲು ಅವರು ಈ ಸೇವೆಯನ್ನು ಮಾಡುತ್ತಿದ್ದರು. ಲೈಬ್ರರಿಗೆ ಹೋಗಿ ಕೆಲಸ ಮುಗಿಸಿ ಬಂದಿದ್ದರು.

ಫಝಲ್ ಡೋಗರ್ ಸಾಹಿಬ್ ನಿಜವಾದ ಖಿಲಾಫತ್‌ನ ಪ್ರೇಮಿಯಾಗಿದ್ದರು, ನಿಷ್ಠಾವಂತ ಮತ್ತು ತ್ಯಾಗ ಮನೋಭಾವದವರಾಗಿದ್ದರು ಎಂದು ಅವರ ವ್ಯಕ್ತಿತ್ವದ ಬಗ್ಗೆ ಹೇಳಿದರೆ ಅತಿಶಯೋಕ್ತಿಯಿಲ್ಲ ಎಂದು ಜಾಮಿಯಾ ಶಿಕ್ಷಕ ಹಾಫಿಝ್ ಮಶ್ಹೂದ್ ಸಾಹಿಬ್ ಬರೆಯುತ್ತಾರೆ. ಮತ್ತೆ ಅವರು ಹೇಳುವ ಪ್ರಕಾರ ಫಝಲ್ ಡೋಗರ್ ಸಾಹಿಬ್ ಅವರು ತಮ್ಮ ಸ್ವಂತ ಮಕ್ಕಳಂತೆ ಜಾಮಿಯಾ ಅಹ್ಮದಿಯಾದ ಗ್ರಂಥಾಲಯವನ್ನು ಅಲಂಕರಿಸುವುದನ್ನು ಮತ್ತು ಸುಂದರಗೊಳಿಸುವುದನ್ನು ನಾವು ಯಾವಾಗಲೂ ನೋಡಿದ್ದೇವೆ. ಹಳೆಯ ಹಸ್ತಪ್ರತಿಗಳನ್ನು ತಂದು ಸ್ಕ್ಯಾನ್ ಮಾಡಿ ಬೇಗನೆ ಅಲಂಕರಿಸಿ ಗ್ರಂಥಾಲಯವನ್ನು ಅಲಂಕರಿಸುತ್ತಿದ್ದರು. ನಿಸ್ಸಂದೇಹವಾಗಿ, ಅವರ ಅವಿರತ ಪ್ರಯತ್ನದಿಂದಾಗಿ ಜಾಮಿಯಾ ಅಹ್ಮದಿಯಾದ ಗ್ರಂಥಾಲಯವು ಪ್ರಸ್ತುತ 25 ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿದೆ ಆದರೆ ಸಂಪನ್ಮೂಲಗಳು ಬಹಳ ಸೀಮಿತವಾಗಿವೆ.

ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಅವರು ನನ್ನ ತಂದೆಯಾದ ಹಝ್ರತ್ ಸಾಹಿಬ್‌ಝಾದ ಮಿರ್ಝಾ ಮನ್ಸೂರ್ ಅಹ್ಮದ್ ಸಾಃಇಬ್ ಅವರ ನಿಧನದ ಸಮಯದಲ್ಲಿ ನೀಡಿದ ಖುತ್ಬ ಜುಮುಅದಲ್ಲಿ ಅವರನ್ನು ಉಲ್ಲೇಖಿಸಿ ಮತ್ತು ಅವರಿಗೆ ಧನ್ಯವಾದವನ್ನು ಅರ್ಪಿಸಿದರು ಮತ್ತು ಅವರ ಕಾರ್ಯಗಳನ್ನು ಶ್ಲಾಘಿಸಿದರು.

ಅವರು ಯಾವಾಗಲೂ ಜಲ್ಸದಲ್ಲಿ ಡ್ಯೂಟಿಗಳನ್ನು ನೀಡುತ್ತಿದ್ದರು. ನನ್ನ ಜೊತೆಯಲ್ಲಿ ಅವರು ರಬ್ವಾದಲ್ಲಿ ಜಲ್ಸಾ ಡ್ಯೂಟಿ ಮಾಡುತ್ತಿದ್ದರು ಮತ್ತು ಅವರು ಹಗಲಿರುಳು ಶ್ರಮಿಸುವುದನ್ನು ನಾನು ಯಾವಾಗಲೂ ನೋಡಿದ್ದೇನೆ. ಯಾವುದೇ ಚಿಂತೆ ಇರುತ್ತಿರಲಿಲ್ಲ.

ಅವರ ಅಳಿಯ ಶಾಹಿದ್ ಇಕ್ಬಾಲ್, ಸ್ವಿಟ್ಜರ್ಲೆಂಡ್‌ನ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಅಧ್ಯಕ್ಷರಾಗಿದ್ದಾರೆ. ಅವರು ಹೇಳುತ್ತಾರೆ: ಸಂಭಾಷಣೆ ಇದ್ದಾಗಲೆಲ್ಲ, ನಾನು ನಮಾಝ್ ನಿರ್ವಹಿಸಿದ್ದೇನೆಯೇ ಅಥವಾ ಇಲ್ಲವೇ ಎಂದು ಅವರು ಯಾವಾಗಲೂ ನನ್ನನ್ನು ಕೇಳುತ್ತಿದ್ದರು. ಅವರು ನಮಾಝನ್ನು ನಿರ್ವಹಿಸಲು ಯಾವಾಗಲೂ ಉಪದೇಶಿಸುತ್ತಿದ್ದರು ಮತ್ತು ಅದರ ಬಗ್ಗೆ ವಿಶೇಷ ಗಮನ ಹರಿಸುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ಅವರನ್ನು ಮಗ್‌ಫಿರತ್ ಹಾಗೂ ಕರುಣೆಯಿಂದ ವರ್ತಿಸಲಿ ಮತ್ತು ಅವರ ಮಕ್ಕಳನ್ನು ಯಾವಾಗಲೂ ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ಇರಿಸಲಿ.

ಎರಡನೇ ಜನಾಝ ಗಾಯಿಬ್ ಇದೆ. ಅವರು ರಬ್ವಾದಲ್ಲಿ ಮುರಬ್ಬಿಯಾಗಿದ್ದ ಮಲಿಕ್ ಮನ್ಸೂರ್ ಅಹ್ಮದ್ ಉಮರ್ ಸಾಹಿಬ್‌ರದ್ದಾಗಿದೆ. ಅವರು ಇತ್ತೀಚೆಗೆ ಎಂಬತ್ತನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಇವರು ಮೂಸಿಯಾಗಿದ್ದರು. 1970 ರಲ್ಲಿ, ಅವರು ಜಾಮಿಯಾದಲ್ಲಿ ಉತ್ತೀರ್ಣರಾದರು, ನಂತರ ಅವರು ಅರೇಬಿಕ್ ಪ್ರಾವೀಣ್ಯತೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದರು. 1971 ರಿಂದ 1973 ರವರೆಗೆ ಅವರು ಇಸ್ಲಾಮಾಬಾದ್‌ನ ನಿಮಲ್ ವಿಶ್ವವಿದ್ಯಾಲಯದಿಂದ ಜರ್ಮನ್ ಭಾಷೆಯಲ್ಲಿ ಡಿಪ್ಲೊಮಾ ಪಡೆದರು. ಮೊದಲು ಅವರನ್ನು ಪಾಕಿಸ್ತಾನದ ವಿವಿಧ ಸ್ಥಳಗಳಲ್ಲಿ ನೇಮಿಸಲಾಯಿತು. ನಂತರ ಜನವರಿ 1974 ರಲ್ಲಿ, ಅವರನ್ನು ಮಬಲ್ಲಿಗ್ ಆಗಿ ಜರ್ಮನಿಗೆ ಕಳುಹಿಸಲಾಯಿತು. ಅವರು ಸುಮಾರು ಒಂದೂವರೆ ವರ್ಷಗಳ ಕಾಲ ಅಲ್ಲಿಯೇ ಇದ್ದರು. ಹಿಂತಿರುಗಿದ ನಂತರ, ಅವರನ್ನು ಪಾಕಿಸ್ತಾನದ ವಿವಿಧ ಸ್ಥಳಗಳಲ್ಲಿ ನೇಮಿಸಲಾಯಿತು. ನಂತರ ಅಕ್ಟೋಬರ್ 1983 ರಲ್ಲಿ, ಅವರನ್ನು ಮತ್ತೆ ಜರ್ಮನಿಗೆ ಕಳುಹಿಸಲಾಯಿತು, ಅಲ್ಲಿ ಅವರು 1986 ರವರೆಗೆ ಅಮೀರ್ ಮತ್ತು ಮಿಷನರಿಯಾಗಿ ಸೇವೆ ಸಲ್ಲಿಸಿದರು. ಈ ಸಮಯದಲ್ಲಿ, ಅವರು ಅಸೈಲಮ್ ಪಡೆಯಲು ಬರುವವರಿಗೆ ಭಾಷೆಯನ್ನು ಕಲಿಸುತ್ತಿದ್ದರು ಮತ್ತು ಅವರಿಗೆ ಸಹಾಯ ಮಾಡುತ್ತಿದ್ದರು. ಶೋಬ ರಿಶ್ತಾ ನಾತದಲ್ಲಿಯೂ ಸೇವೆ ಸಲ್ಲಿಸಿದರು. ಜಾಮಿಯಾದಲ್ಲಿ ಜರ್ಮನ್ ಭಾಷೆಯನ್ನು ಸಹ ಕಲಿಸುತ್ತಿದ್ದರು. ಸುಮಾರು ನಲವತ್ತಾರು ವರ್ಷಗಳ ಕಾಲ, ಅವರು ವಾಖಿಫೆ ಝಿಂದಗಿಯಾಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು.

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.04, Thursday, 26 January 2023, Issue No. 04

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಅವರಿಗೆ ಜಪಾನ್‌ನ ಉಸ್ತುವಾರಿ ಮಿಷನರಿ ಅನೀಸ್ ರಈಸ್ ಸಾಹಿಬ್ ಅವರ ಪತ್ನಿ ಫೈಝಾ ರಈಸ್ ಎಂಬ ಪುತ್ರಿ ಹಾಗೂ ಪುತ್ರ ಸಬಾಃಉಝ್ಝಫರ್ ಮಲಿಕ್ ಸಾಹಿಬ್ ಮುರಬ್ಬಿ ಸಿಲ್‌ಸಿಲ ಆಗಿದ್ದಾರೆ. ಅವರಿಗೆ ಇತರ ಮಕ್ಕಳೂ ಇದ್ದಾರೆ. ಅಲ್ಲಾಹನು ಅವರೊಂದಿಗೆ ಮಗ್ಫಿರತ್ ದಯಪಾಲಿಸಲಿ. ಆಮೀನ್

ಮೂರನೆಯ ಉಲ್ಲೇಖವೆಂದರೆ ಮಾನ್ಯ ಇಸಾ ಜೌಫ್ ಸಾಹಿಬ್, ಗ್ಯಾಂಬಿಯಾದ ಮುಅಲ್ಲಿಮ್ ಆಗಿದ್ದಾರೆ. ಅವರು ಇತ್ತೀಚೆಗೆ ಡಿಸೆಂಬರ್‌ನಲ್ಲಿ ಅರವತ್ತೊಂದನೇ ವಯಸ್ಸಿನಲ್ಲಿ ನಿಧನರಾದರು. **ಇನ್ನ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರು ಅತ್ಯಂತ ಯಶಸ್ವಿ ಮುಬಲ್ಲಿಗ್ ಆಗಿದ್ದರು ಎಂದು ಅಲ್ಲಿಯ ಉಸ್ತುವಾರಿ ಉಪ ಅಮೀರ್ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ. ಅವರು ಜಾಮಿಯಾದಿಂದ ಪದವಿ ಪಡೆದಿಲ್ಲ ಆದರೆ ಜಮಾಅತ್‌ನ ಪ್ರೇಮಿಯಾಗಿದ್ದರು. ಸೈನಿಕನಂತೆ ಕೆಲಸ ಮಾಡಲು ಸದಾ ಸಿದ್ಧರಾಗಿರುತ್ತದ್ದರು. ಅವರು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸೈನ್ಯದ ಕೀಳು ಸೈನಿಕನು ಮತ್ತು ಜಮಾಅತ್ ಅವರಿಗೆ ಏನು ಆದೇಶಿಸುತ್ತದೆಯೋ ಅದನ್ನು ನಿರ್ವಹಿಸಲು ಅವರು ಸಿದ್ಧರಿದ್ದಾರೆ ಎಂದು ಅವರು ಹೇಳುತ್ತಿದ್ದರು. ಜಲ್ಸಾ ಮತ್ತು ಇತರ ಜಮಾಅತ್ತಿನ ಕಾರ್ಯಕ್ರಮಗಳಲ್ಲಿ, ಅವರು ಯಾವಾಗಲೂ ಜಮಾಅತ್ತಿನ ಸದಸ್ಯರೊಂದಿಗೆ ಇರುತ್ತಾರೆ ಮತ್ತು ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು ಮತ್ತು ಅವರಿಗೆ ತರಬೇತಿ ನೀಡುತ್ತಿದ್ದರು. ಪಾಕಿಸ್ತಾನಿ ಅಹ್ಮದೀಯರ ತ್ಯಾಗವನ್ನು ನಾನು ಅಸೂಯೆಯಿಂದ ನೋಡುತ್ತೇನೆ ಮತ್ತು ಯಾವಾಗಲೂ ಅವರಿಗಾಗಿ ಪ್ರಾರ್ಥಿಸುತ್ತೇನೆ ಮತ್ತು ಅವರನ್ನು ಗೌರವಿಸುತ್ತೇನೆ ಎಂದು ಅವರು ಹೇಳಿದರು. ಖಲೀಫರೊಂದಿಗೆ ವಿಶೇಷ ಪ್ರೀತಿಯ ಸಂಬಂಧವಿತ್ತು. ಅವರು ಪ್ರಾರ್ಥನೆಗಾಗಿ ಪತ್ರಗಳನ್ನು ಬರೆಯುತ್ತಿದ್ದರು ಮತ್ತು ಉತ್ತರಗಳನ್ನು ಪಡೆದಾಗ ಅವರು ಬಹಳ ಪ್ರೀತಿ ಮತ್ತು ವಾತ್ಸಲ್ಯದಿಂದ ಉಲ್ಲೇಖಿಸುತ್ತಿದ್ದರು. ಅವರು ತಮ್ಮ ಮಕ್ಕಳಲ್ಲಿ ಖಲೀಫರ ಬಗ್ಗೆ ಪ್ರೀತಿಯನ್ನು ತುಂಬಿದ್ದಾರೆ ಮತ್ತು ಮಕ್ಕಳಿಗೆ ಖಲೀಫರಿಗೆ ಪತ್ರ ಬರೆಯಲು ಹೇಳುತ್ತಿದ್ದರು.

ಸೈಯದ್ ಸಯೀದ್ ಸಾಹಿಬ್ ಮುರಬ್ಬಿ ಸಿಲ್‌ಸಿಲ. ಅವರು ಗ್ಯಾಂಬಿಯಾದಲ್ಲಿಯೂ ಇದ್ದರು. ಇಂದು ಸೆರಾ ಲಿಯೋನ್‌ನಲ್ಲಿದ್ದಾರೆ. ಅವರು ಸೆನೆಗಲ್‌ನಲ್ಲಿ ಜನಿಸಿದರು ಮತ್ತು ನಂತರ ಅವರು ಕೆಲಸದ ನಿಮಿತ್ತ ಗ್ಯಾಂಬಿಯಾಕ್ಕೆ ಬಂದರು ಮತ್ತು ನಾಸಿರ್ ಅಹ್ಮದಿಯಾ ಮಾಧ್ಯಮಿಕ ಶಾಲೆಯಲ್ಲಿ ಫ್ರೆಂಚ್ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು. ಏತನ್ಮಧ್ಯೆ, ಅವರು ಅಹ್ಮದೀಯತ್ತನ್ನು ಸ್ವೀಕರಿಸಿದರು. ನಂತರ ಅವರು ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಮುನ್ನಡೆದರು. 1997 ರಲ್ಲಿ, ಹಝ್‌ರತ್ ಖಲೀಫತುಲ್ ಮಸೀಹ್ ರಾಬಿ(ರ)ಅವರ ಮಾರ್ಗದರ್ಶನದಲ್ಲಿ ಎಲ್ಲಾ ಕೇಂದ್ರ ಸಿಬ್ಬಂದಿ ಗ್ಯಾಂಬಿಯಾವನ್ನು ತೊರೆದರು ಮತ್ತು ಅವರನ್ನು ನಾಸಿರ್ ಅಹ್ಮದಿಯಾ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರನ್ನಾಗಿ ಮಾಡಲಾಯಿತು. ಈ ಸಾಮರ್ಥ್ಯದಲ್ಲಿ ಅತ್ಯುತ್ತಮ ಸೇವೆಯನ್ನು ನಿರ್ವಹಿಸಿದರು. ಅದರ ನಂತರ ಅವರನ್ನು ಪ್ರದೇಶ ಮಿಷನರಿಯಾಗಿ ಮಾಡಲಾಯಿತು ಮತ್ತು ಅವರು ನಿಧನ ಹೊಂದುವವರೆಗೂ ಅಲ್ಲಿಯೇ ಇದ್ದರು.

ಈಮಾನ್‌ನ ದಾಹಕ್ಕೆ ಒಳಗಾದ ಅನೇಕ ಆತ್ಮಗಳನ್ನು ಇಸಾ ಜೌಫ್ ಸಾಹಿಬ್ ಅವರ ಮೂಲಕ ಅಹ್ಮದೀಯತ್ತಿನ ಮಡಿಲಿಗೆ ಬಂದು ಸೇರಿತು. ಅವರಿಗೆ ಸಾಕಷ್ಟು ಧಾರ್ಮಿಕ ಜ್ಞಾನವೂ ಇತ್ತು. ಅವರು ಸ್ವತಃ ಅಧ್ಯಯನ ಮಾಡುವ ಮೂಲಕ ಜ್ಞಾನವನ್ನು ಪಡೆದರು. ಅಹ್ಮದೀಯರಲ್ಲದವರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಆದುದರಿಂದ ಆ ಭಾಗದ ಮುಖ್ಯಸ್ಥರು, ಇಮಾಮರು ಇವರನ್ನು ಬಹಳವಾಗಿ ಗೌರವಿಸುತ್ತಿದ್ದರು ಮತ್ತು ಯಾರಾದರೂ ಅಹಮದೀಯರನ್ನು ಅಥವಾ ಆ ಪ್ರದೇಶದಲ್ಲಿ ಕಿಡಿಗೇಡಿತನವನ್ನು ಮಾಡಲು ಪ್ರಯತ್ನಿಸಿದರೆ, ಕೆಲವೊಮ್ಮೆ ಈ ಒಳ್ಳೆಯ ಮನಸ್ಸಿನ ಜನರು ಸ್ಪರ್ಧೆಗೆ ಬರುತ್ತಾರೆ, ಈ ವಿರೋಧಿಗಳ ಮುಂದೆ ಬಂದು ನಿಲ್ಲುತ್ತಿದ್ದರು.

ಮತ್ತೆ ಅವರ ವೈಶಿಷ್ಟ ಗುಣಗಳಲ್ಲಿ ಒಂದು ಗುಣವೆಂದರೆ ಅವರ ಜ್ಞಾನವಾಗಿತ್ತು ಎಂದು ಬರೆಯಲಾಗಿದೆ. ನಾನು ಹೇಳಿದಂತೆ ಅವರ ಅಧ್ಯಯನವು ಬಹಳ ವಿಸ್ತಾರವಾಗಿತ್ತು ಮತ್ತು ಜಮಾಅತ್ತಿನ ಸಾಹಿತ್ಯದಲ್ಲಿ ಪರಿಣಿತಿ ಹೊಂದಿದ್ದರು. ಜಲ್ಸ ಸಾಲಾನದಲ್ಲಿ ಅವರು ಅನೇಕ ಬಾರಿ ಭಾಷಣ ಮಾಡುವ ಅವಕಾಶವನ್ನು ಸಹ ಪಡೆದರು. ಅಂತೆಯೇ ಪಕ್ಷದ ನಿಯತಕಾಲಿಕೆಗಳಲ್ಲಿ ಅವರ ಲೇಖನಗಳು ಪ್ರಕಟವಾಗುತ್ತಿದ್ದವು. ನಮ್ರತೆ ಮತ್ತು ವಿಧೇಯತೆ ಅವರ ವಿಶೇಷ ಗುಣಗಳಾಗಿದ್ದವು. ಅವರು ಉತ್ತಮ ಸಲಹೆಗಾರರಾಗಿದ್ದರು ಮತ್ತು ಪ್ರಮುಖ ನಿರ್ಧಾರಗಳಲ್ಲಿ ಯಾವಾಗಲೂ ಅವರು ಒಳಗೊಂಡಿರುತ್ತಿದ್ದರು ಮತ್ತು ಅವರ ಅಭಿಪ್ರಾಯವು ಸರಿಯಾಗಿರುತ್ತದೆ. ಅವರು ತಹಜ್ಜುದ್ ನಮಾಝ್ ನಿಯಮಿತವಾಗಿ ಪಠಿಸುವವರಾಗಿದ್ದರು. ಅವರು ಪ್ರಾರ್ಥಿಸುತ್ತಿದ್ದರು. ಅವರು ಅನೇಕ ನಿಜವಾದ ಕನಸುಗಳನ್ನು ಹೊಂದಿದ್ದರು ಮತ್ತು ಯಾರಾದರೂ ಅವರನ್ನು ದುಆಗಾಗಿ ಕೇಳಿಕೊಂಡಾಗ, ಅವರು ಮೊದಲು ಖಲೀಫರಿಗೆ ಪ್ರಾರ್ಥನೆಯ ಪತ್ರವನ್ನು ಬರೆಯಲು ಮತ್ತು ನಂತರ ಸ್ವತಃ ಪ್ರಾರ್ಥಿಸಲು ಸಲಹೆ ನೀಡುತ್ತಿದ್ದರು.

ನಂತರ ಗ್ಯಾಂಬಿಯಾದ ಮುಬಲ್ಲಿಗ್ ಅಗ ಮಸೂದ್ ಸಾಹಿಬ್ ಹೇಳುತ್ತಾರೆ: ಅವರು ತಬ್‌ಲೀಗನ್ನು ಬಹಳ ಇಷ್ಟಪಡುತ್ತಿದ್ದರು. ಹಲವಾರು ದೂರದ ಹಳ್ಳಿಗಳಿಗೆ ಹಲವು ಗಂಟೆಗಳ ಕಾಲ ಪ್ರಯಾಣಿಸಿ ತಲುಪುತ್ತಿದ್ದರು. ಅವರು ಬಹಳ ಅತ್ಯಾಧುನಿಕ ಸ್ವಭಾವವನ್ನು ಹೊಂದಿದ್ದರು. ನಗುವೂ ಇತ್ತು. ಸಂತೋಷವಾಗಲಿ ದುಃಖವಾಗಲಿ, ಅನಾರೋಗ್ಯವಾಗಲಿ ಅಥವಾ ಚಿಂತೆಯಾಗಲಿ ಅವರು ಯಾವಾಗಲೂ ನಗುತ್ತಿದ್ದರು. ಎಲ್ಲರನ್ನು ನಗು ಮುಖದಿಂದ ಭೇಟಿಯಾಗುತ್ತಿದ್ದರು. ನಾನು ಎಲ್ಲರನ್ನೂ ಎಂತಹ ಉಷ್ಣತೆಯಿಂದ ಭೇಟಿಯಾಗುತ್ತಿದ್ದರು ಎಂದರೆ ಇವರಿಗೆ ನನ್ನೊಂದಿಗೆ ಮಾತ್ರ ಇಷ್ಟು ಪ್ರೀತಿ ಇದೆ ಎಂದು ಭಾವಿಸುತಿದ್ದನು. ಅವರು ತುಂಬಾ ದಯೆ, ಸೌಮ್ಯ ಮತ್ತು ಸಹಾನುಭೂತಿ ಹೊಂದಿದ್ದರು. ಅವರು ಎಂದಿಗೂ ಯಾರನ್ನೂ ನಿಂದಿಸಿಲ್ಲ ಮತ್ತು ಯಾರ ವಿಷಯದಲ್ಲೂ ಹಸ್ತಕ್ಷೇಪ ಮಾಡಲಿಲ್ಲ. ತಮ್ಮ ಅಧಿಕಾರಿಗಳಿಗೆ ವಿಧೇಯತೆ ತೋರುವವರು. ಮತ್ತು ಅವರು ತಮ್ಮ ಅಧೀನ ಅಧಿಕಾರಿಗಳನ್ನು ನೋಡಿಕೊಳ್ಳುವರು, ಅವರನ್ನು ಪ್ರೋತ್ಸಾಹಿಸುವರು ಮತ್ತು ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ, ಅವರು ತಮ್ಮ ಬಿಡುವಿನ ದಿನಗಳಲ್ಲಿ ಧರ್ಮಪ್ರಚಾರಕ್ಕೆ ಹೋಗುತ್ತಿರುವುದು ಕಂಡುಬಂದಿದೆ ಎಂದು ಹೇಳಿದರು. ಅವರು ನಿಯಮಿತವಾಗಿ ವಾಟ್ಸಾಪ್ ಸ್ಟೇಟಸ್‌ನಲ್ಲಿ ಖುರ್‌ಆನ್ ಆಯತ್‌ಗಳು, ಹಝ್‌ರತ್ ಮುಹಮ್ಮದ್ ಮುಸ್ತಫಾ(ಸ) ಅವರ ಹದೀಸ್‌ಗಳು, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಖಲೀಫರ ಬೋಧನೆ ಮತ್ತು ತರಬೇತಿ ಪೋಸ್ಟ್‌ಗಳು ಮತ್ತು ಖಲೀಫರ ಫೋಟೋಗಳನ್ನು ಪ್ರತಿದಿನ ಪೋಸ್ಟ್ ಮಾಡುತ್ತಿದ್ದರು ಮತ್ತು ಅವುಗಳನ್ನು ಅಹ್ಮದಿ ಮತ್ತು ಅಹ್ಮದೀಯೇತರ ಜನರಿಗೆ ಕಳುಹಿಸುತ್ತಿದ್ದರು. ಅವರು ಉಪದೇಶವನ್ನು ಬಹಳ ಇಷ್ಟಪಡುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್ಫಿರತ್ ಮತ್ತು ಕರುಣೆಯನ್ನು ನೀಡಲಿ. ಅವರ ಮಕ್ಕಳು ತಮ್ಮ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲಿ.

ನಾನು ಹೇಳಿದಂತೆ ಈಗ ಶುಕ್ರವಾರದ ಪ್ರಾರ್ಥನೆಯ ನಂತರ ಅವರ ನಮಾಝೆ ಜನಾಝ ನೆರವೇರಿಸಲಾಗುವುದು. ಇನ್‌ಶಾಅಲ್ಲಾಹ್ ... * ... * ...

---

*(ಪುಟ ಸಂಖ್ಯೆ* **06ರ** *ಉಳಿದ ಭಾಗ)*

ತಹಜ್ಜುದ್ ನಮಾಝ್‌ಗಾಗಿ ಎದ್ದೇಳುವುದು ಬಿಡಿ, ಐದು ಹೊತ್ತಿನ ನಮಾಝಿಗಾಗಿ ವುಝೂ ಮಾಡುವುದೇ ಕಷ್ಟವಾಗಿ ಅನುಭವವಾಗುತ್ತದೆ. ನಿಮ್ಮೊಳಗೆ ಸತ್ಕರ್ಮಗಳನ್ನು ಮಾಡಲು ಶಕ್ತಿ ಉಂಟಾಗದಿದ್ದರೆ, ಸತ್ಕರ್ಮಗಳಲ್ಲಿ ಮುಂದಾಗಲು ಉತ್ಸಾಹವಿಲ್ಲದಿದ್ದರೆ, ಒಳಿತುಗಳನ್ನು ಮಾಡಲು ಆವೇಶವಿಲ್ಲದಿದ್ದರೆ ನಮ್ಮ ಜೊತೆಗೆ ಸಂಬಂಧ ಸ್ಥಾಪಿಸುವುದು ವ್ಯರ್ಥ. (ಮಲ್‌ಫೂಝಾತ್, ಸಂಪುಟ–4, ಪುಟ–439, 1984 ಆವೃತ್ತಿ)

ಒಟ್ಟಿನಲ್ಲಿ ಬಹಳ ಚಿಂತೆಯೊಂದಿಗೆ ನಾವು ನಮ್ಮ ಸಂಬಂಧವನ್ನು ಅತ್ಯುನ್ನತನಾದ ಅಲ್ಲಾಹನೊಂದಿಗೆ ವರ್ಧಿಸಲು ಪ್ರಯತ್ನಿಸಬೇಕಾಗಿದೆ. ಈ ನೈಜವಾದ ಸಂಬಂಧವಿದ್ದರೆ ಪ್ರಾರ್ಥನೆಗಳ ಸ್ವೀಕಾರದ ದೃಶ್ಯಗಳನ್ನು ನಾವು ನೋಡುವೆವು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.

ಈ ದಿನಗಳಲ್ಲಿ ಪಾಕಿಸ್ತಾನದ ಅಹ್ಮದಿಯರಿಗಾಗಿ ಬಹಳ ದುಆ ಮಾಡಿರಿ. ಪಾಕಿಸ್ತಾನದಲ್ಲಿ ಅಹ್ಮದಿಯರಿಗೆ ತೊಂದರೆ ಕೊಡಲು ಪ್ರಯತ್ನಿಸಲಾಗುತ್ತಿದೆ. ಅದೇ ರೀತಿಯಲ್ಲಿ ಅಲ್‌ಜೀರಿಯದಲ್ಲೂ ಇತ್ತೀಚಿಗೆ ವಿರೋಧಿಗಳಲ್ಲಿ ಪುನಃ ತೀವ್ರತೆ ಉಂಟಾಗಿದೆ. ಅಲ್ಲಾಹನು ಪ್ರತಿಯೊಂದು ಜಾಗದಲ್ಲೂ ಪ್ರತಿಯೊಬ್ಬ ಅಹ್ಮದಿಯನ್ನು ಸಂರಕ್ಷಿಸಲಿ, ಪ್ರತಿಯೊಂದು ಕಷ್ಟದಿಂದ ರಕ್ಷಿಸಲಿ ಹಾಗೂ ವಿರೋಧಿಗಳನ್ನು ಪರಾಜಿತಗೊಳಿಸಲಿ. ಆಮೀನ್.

... * ... * ...

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ**
**ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.